QUESTIONS FOR ANSWERS ON THE DAY

(but not taken up)

Disposal of Tenancy Cases in Sagar and Sorab Taluks.

*Q.—158. Sri D. MOOKAPPA (Sagar).—

Will the Government be pleased to state:—

(a) the number of cases relating to arrears of rent filed in the Tenancy Court under Tenancy Act in Sagar and Sorab Taluks during 1958-59 and 1959-60;

(b) of these, the number that have been disposed of in each Taluk;

(c) the number of cases that are still pending in each Taluk?

A.—Sri KADIDAL MANJAPPA (Minister for Revenue).—

(a)—

	Sorab		Sagar	
	1958–59	1959–60	1958–59	1959–60
(a)	147	151	102	87
(b)	69	119	82	40
(c)	78	32	20	47

Roads in Ramanagaram Sub-Division proposed to be taken over by the Public Works Department.

*Q.—344. Sri M. LINGE GOWDA (Kanakapura).—

Will the Government be pleased to state:—

(a) the name of District Board and N.E.S. roads in Ramanagaram Sub-Division proposed to be taken under the Public Works Department;

(b) the length of each such road?

A.—Sri H. M. CHANNABASAPPA (Minister for Public Works and Electricity).—

(a) The question is under examination.

(b) Does not arise in view of reply to clause (a).

Leave of Absence

Mr. SPEAKER.—I have received a letter from Sri T. Tare Gowda, requesting permission to remain absent from the meetings of the House from 16th March 1960 to 16th April 1960 as he is undergoing training in Community Development and National Extension Scheme at Mussoorie.

Is it the pleasure of the House that leave be granted to Sri Tare Gowda to remain absent?

Mr. SPEAKER.—Leave is granted.

PAPERS LAID ON THE TABLE

Sri B. D. JATTI (Chief Minister).—Sir, I beg to lay on the Table, Notification No. GAD (S-1) 47 SSC 59, dated 15th March, 1960 making certain amendments to the Mysore Public Service Commission (Consultation) Regulations, 1958, issued under Clause (3) of Article 320 of the Constitution of India.

BUDGET ESTIMATES FOR 1960-61 — GENERAL DISCUSSION.

(Debate continued)

ಶ್ರೀ ಕಡಿದಾಳ್ ಮಂಜಪ್ಪ (ಕಂದಾಯ ಶಾಖೆಯ ಮಂತ್ರಿಗಳು.)—ಮಾನ್ಯ ಅಧ್ಯಕ್ಷರೇ, 1960-61ನೇ ಸಾಲಿನ ಬಡ್ಜೆಟ್ ಚರ್ಚೆ ಕಾಲದಲ್ಲಿ ಮಾನ್ಯ ಸದಸ್ಯರು ಕೆಲವರು ಮಾಡಿರತಕ್ಕ ಕೆಲವು ಟೀಕೆಗಳಿಗೆ ಮಾತ್ರ ನಾನು ಉತ್ತರ ಕೊಡಲು ಬಯಸುತ್ತೇನೆ. ಮಾನ್ಯ ಸದಸ್ಯರು ಕೆಲವರು ಮಾತನಾಡುವಾಗ ಆಡಳಿತದಲ್ಲಿ ದಕ್ಷತೆ ಅಭಾವವಿದೆಯೆಂದು ಹೇಳಿದ್ದಾರೆ ಮತ್ತು ಕಾಗದ ಪತ್ರಗಳ ವಿಲೇವಾರಿಯಲ್ಲಿ ಬಹಳ ವಿಳಂಬವಿದೆಯೆಂದು ಹೇಳಿದ್ದಾರೆ. ಸರ್ಕಾರ ನಡೆಯುವುದು ಪ್ರಜಾಪ್ರಭುತ್ವದ ಆಧಾರದ ಮೇಲೆ. ಹೀಗೆ ಸರ್ಕಾರ ನಡೆಯುತ್ತಿರುವಾಗ ಕೆಲವು ಕಾನೂನುಗಳಿಗೆ ಮತ್ತು ನಿಬಂಧನೆಗಳಿಗೆ ಸರ್ಕಾರ ಒಳಪಟ್ಟು ಕೆಲಸ ಮಾಡಬೇಕಾಗಿದೆ. ದೇಶದಲ್ಲಿ ಅನೇಕ ಕಾನೂನುಗಳಿವೆ. ಆ ಕಾನೂನುಗಳಿಗನುಗುಣವಾಗಿ ಕೆಲವು ನಿಬಂಧನೆಗಳಿವೆ. ಆ ನಿಬಂಧನೆಗಳ ಪೈಕಿ ಕೆಲವು ಬಹಳ ಹಳೆಯ ಕಾಲದ ನಿಬಂಧನೆಗಳಾಗಿವೆ. ಈ ಸಂದರ್ಭದಲ್ಲಿ ಅಂತಹ ನಿಬಂಧನೆಗಳನ್ನು ಆದಷ್ಟು ಜಾಗ್ರತೆ ಬದಲಾಯಿಸಿ ಅವುಗಳು ಸರಳವಾಗಿರುವಂತೆ

(ಶ್ರೀ ಕಡಿದಾಳ್ ಮಂಜಪ್ಪ)

ಮಾಡತಕ್ಕದ್ದು ಅವಶ್ಯಕವಿದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಆ ಕಾನೂನು ನಿಬಂಧನೆಗಳಿಂದಲೇ ಸ್ವಲ್ಪಮಟ್ಟಿಗೆ ಕಾಗದಪತ್ರಗಳ ತೀರ್ಮಾನ ವಿಳಂಬವಾಗುತ್ತಿದೆಯೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಪ್ರೊಸೀಜರ್ ಕೂಡ ಹಾಗೆಯೇ ಇದೆ. ಇರತಕ್ಕ ಪ್ರೊಸೀಜರ್‌ಗಳನ್ನು ಮತ್ತು ಕಾನೂನುಗಳನ್ನು ಬಿಟ್ಟು ಸರ್ಕಾರ ಆಡಳಿತವನ್ನು ನಡೆಸುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಸಾಮಾನ್ಯವಾಗಿ ಒಂದು ಜಮೀನನ್ನು ಅಕ್ವೈರುಮಾಡಬೇಕಾದರೆ, ಅದರ ವ್ಯಾಲ್ಯುಯೇಷನ್ ಆಗಬೇಕು, ಅದರ ಮೇಲೆ ನೋಟಿಫಿಕೇಷನ್ ಆಗಬೇಕು. ಅದು ಇಷ್ಯೂ ಆಗಬೇಕು. ಅನಂತರ ಅದರ ಮೇಲೆ ಬರತಕ್ಕ ಅಬ್ಜೆಕ್ಷನ್‌ಗಳನ್ನು ಕೇಳಬೇಕು. ಹಾಗೆ ಅನೇಕ ಘಟ್ಟಗಳಲ್ಲಿ ಕೆಲವು ನಿಬಂಧನೆಗಳನ್ನು ಅನುಸರಿಸಬೇಕಾಗಿದೆ. ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಒಂದು ಮನೆಯನ್ನು ಕಟ್ಟಬೇಕಾದರೆ ಮೊದಲು ಎಸ್ಟಿಮೇಟು ಆಗಬೇಕು. ಆ ಎಸ್ಟಿಮೇಟಿಗೆ ಮಂಜೂರಾತಿ ದೊರೆಯಬೇಕು. ಅದು ಏನಾದರೂ ಬೇರೆ ಇಲಾಖೆಗೆ ಸಂಬಂಧಪಟ್ಟ ವಿಷಯವಾಗಿದ್ದರೆ ಅವರ ಕನ್‌ಕರೆನ್ಸ್ ಅದಕ್ಕೆ ಬೇಕಾಗುತ್ತದೆ. ಯಾವುದಾದರೂ ಯೋಜನೆಗೆ ಹೆಚ್ಚು ಹಣವನ್ನು ಒದಗಿಸಬೇಕಾಗಿದ್ದರೆ, ಕೇಂದ್ರ ಸರ್ಕಾರದವರಿಂದ ಆ ಯೋಜನೆಗೆ ಗ್ರಾಂಟು ಪಡೆಯಬೇಕಾಗಿದ್ದರೆ, ಕೇಂದ್ರ ಸರ್ಕಾರದ ಕನ್‌ಕರೆನ್ಸನ್ನೂ ಸಹ ಪಡೆಯಬೇಕಾಗಿದೆ. ಆದ್ದರಿಂದ ಈ ತರಹ ನಿಬಂಧನೆ ಮತ್ತು ಕಾನೂನುಗಳಿಂದ ಸ್ವಲ್ಪಮಟ್ಟಿಗೆ ಕಾಗದ ಪತ್ರಗಳ ವಿಲೇವಾರಿ ಜಾಗ್ರತೆಯಾಗದೆ ತಡವಾಗುತ್ತಿದೆ. ಎರಡನೆಯದಾಗಿ ಈಗ ಸರ್ಕಾರದ ಕೆಲಸಗಳು ಕಳೆದ 10-12 ವರ್ಷಗಳಿಂದ ಜಾಸ್ತಿಯಾಗುತ್ತಿವೆ. ಸುಮಾರು 10-12 ವರ್ಷಗಳ ಹಿಂದೆ ಒಂದೊಂದು ಆಫೀಸಿಗೆ ತಿಂಗಳಿಗೆ 10-12 ಅರ್ಜಿಗಳು ಬರುತ್ತಿದ್ದುವು. ಇವತ್ತು ಒಂದೊಂದು ಆಫೀಸಿಗೂ 300-400 ಅರ್ಜಿಗಳು ಬರುತ್ತಿವೆ. ಆದ್ದರಿಂದ ಈಗ ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಕೆಲಸ ಜಾಸ್ತಿಯಾಗಿದೆ. ಯೋಜನೆಗಳು ಅಗಾಧವಾಗಿ ಕಾರ್ಯಗತವಾಗುತ್ತಿವೆ. ಈ ಸನ್ನಿವೇಶಗಳನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕೆಂದು ನಾನು ವಿನಯಪೂರ್ವಕವಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ ನಮ್ಮ ದೇಶದಲ್ಲಿ ಬಹಳ ಮಂದಿ ಅವಿದ್ಯಾವಂತರಿದ್ದಾರೆ. ಯಾವುದಾದರೂ ಒಂದು ಕೆಲಸ ಸರ್ಕಾರದಲ್ಲಿ ಆಗಬೇಕಾಗಿದ್ದರೆ, ಅದಕ್ಕೆ ಒಂದು ಪರಿಹಾರ ದೊರಕಬೇಕಾದರೆ ರೆವೆನ್ಯೂ ಇನ್‌ಸ್ಪೆಕ್ಟರಿನಿಂದ ಹಿಡಿದು ರೆವಿನ್ಯೂ ಮಿನಿಸ್ಟರ್‌ವರೆಗೂ ಅರ್ಜಿ ಬರೆಯುತ್ತಾರೆ. ಒಂದು ಜಮೀನು ಬೇಕಾದರೆ ಒಂದು ಅರ್ಜಿಯನ್ನು ರೆವಿನ್ಯೂ ಇನ್‌ಸ್ಪೆಕ್ಟರಿನಿಂದ ತಹಸೀಲ್‌ದಾರ್‌ವರೆಗೆ, ತಹಸೀಲ್‌ದಾರನಿಂದ–ಅಸಿಸ್ಟೆಂಟ್ ಕಮಿಷನರವರೆಗೆ–ಅಸಿಸ್ಟೆಂಟ್ ಕಮಿಷನರ್‌ರಿಂದ ಡಿವಿಜನ್ ಕಮಿಷನರ್‌ವರೆಗೆ–ಡಿವಿಜನಲ್ ಕಮಿಷನರ್ ಅವರಿಂದ ರೆವಿನ್ಯೂ ಮಿನಿಸ್ಟರ್ ಅವರಿಗೆ ಕೊಡುತ್ತಾರೆ. ಸಾಧ್ಯವಾದರೆ ಮುಖ್ಯ ಮಂತ್ರಿಗಳಿಗೂ ಅದೇ ಅರ್ಜಿಯನ್ನು ಕೊಡುತ್ತಾರೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ (ತಿಪಟೂರು).—ಹಾಗೆ ಕೊಟ್ಟರೂ ಬೇಗ ಏಕೆ ಕೆಲಸವಾಗುವುದಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲಸ ಜಾಗ್ರತೆಯಾಗಿ ಆಗದಿರುವುದಕ್ಕೆ ಕಾಗದ ಪತ್ರಗಳ ಓಡಾಟ ಎಷ್ಟರ ಮಟ್ಟಿಗೆ ಆಗುತ್ತಿದೆಂಬುದನ್ನು ಸದಸ್ಯರ ಗಮನಕ್ಕೆ ತರುತ್ತಿದ್ದೇನೆ. ಇನ್ನು ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ಅರ್ಜಿದಾರರ ಕೇಸುಗಳು ತೀರ್ಮಾನವಾಗಿದ್ದರೂ ಕೂಡ ಪದೇ ಪದೇ ಅವರ ಕೇಸಿನ ತೀರ್ಮಾನವೇನಾಯಿತು ಅದಕ್ಕೇನಾದರೂ ಪರಿಹಾರ ದೊರಕಿತೇ ಎಂದು ಪುನಃ ಅರ್ಜಿಗಳನ್ನು ಹಾಕುತ್ತಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ನನ್ನ ಸ್ನೇಹಿತರು, ಒಬ್ಬ ದೊಡ್ಡ ಮನುಷ್ಯರು ಒಂದು ಕಾಗದವನ್ನು ನನಗೆ ಬರೆದಿದ್ದರು. ನನ್ನ ಕೇಸು ನಿಮ್ಮ ಮುಂದೆ ಎರಡು ವರ್ಷಗಳಿಂದ ಇತ್ಯರ್ಥವಾಗದೆ ಹಾಗೆಯೇ ಉಳಿದಿದೆ. ಅದರ ವಿಷಯವೇನಾಯಿತು ಎಂದು ಕೇಳಿದ್ದರು. ಅದು ಶ್ರೀಮಾನ್ ಎಂ. ಪಿ. ಪಾಟೀಲ್ ಅವರು ರೆವಿನ್ಯೂ ಮಿನಿಸ್ಟರ್ ಆಗಿದ್ದಂಥ ಕಾಲದ್ದು. ಆ ಕೇಸು ಒಂದು ರೀತಿಯಲ್ಲಿ ತೀರ್ಮಾನವಾಗಿದೆ. ಅದನ್ನು ಪುನಃ ನಾನು ಯಾವ ರೀತಿಯಲ್ಲೂ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಅವರ ದೃಷ್ಟಿಯಲ್ಲಿ ಆ ಕೇಸು ಫೈನಲ್ ಆಗಲಿಲ್ಲವೆಂದು. ನಮ್ಮ ದೃಷ್ಟಿಯಲ್ಲಿ ಆ ಕೇಸು ಫೈನಲ್ಲಾಗಿದೆಯೆಂದು.

ಶ್ರೀ ಜಿ. ಎನ್. ಪುಟ್ಟಣ್ಣ (ತುಮಕೂರು).—ಆ ಮಹನೀಯರಿಗೆ ಎಂಡಾರ್ಸ್‌ಮೆಂಟ್ ಹೋಗಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಜನರಿಗೆ ಎಂಡಾರ್ಸ್‌ಮೆಂಟ್ ಇತ್ಯಾದಿ ಎಲ್ಲಾ ಹೋಗಿದ್ದರೂ ಪುನಃ ಅರ್ಜಿ ಹಾಕುವುದನ್ನೇನೋ ಬಿಡುವುದಿಲ್ಲ. ಈ ರೀತಿಯಲ್ಲಿ ಸರ್ಕಾರದ ಕೆಲಸಗಳು ಕೆಲವು ವೇಳೆ ತಡವಾಗುವುದು ಸಹಜ.

ಇನ್ನೊಂದು ವಿಷಯ; ಈಚೆಗೆ ಸರ್ಕಾರದ ಮುಂದೆ ಬರತಕ್ಕ ದೂರುಗಳಲ್ಲಿ ಮತ್ತು ಮನವಿಗಳಲ್ಲಿ ಶೇ. 50ರಷ್ಟು ಸರ್ಕಾರದ ಕಾನೂನುಗಳಿಗೆ ವಿರೋಧವಾದುವುಗಳೆಂದೇ ಹೇಳಬಹುದು. ಎಲ್ಲಾ ಅನ್‌ರೀಜನಬಲ್ ರಿಕ್ವೆಸ್ಟ್ ಎಂದು ಹೇಳಿದರೆ ಅದೇನೂ ತಪ್ಪಾಗಲಾರದು. ಅದರಲ್ಲೂ ಅಂತಹವರೇ ಹೆಚ್ಚು ಗಲಾಟೆಮಾಡುವವರು. ಅವರೇ ವಿಶೇಷವಾಗಿ ಸರ್ಕಾರದಲ್ಲಿ ನಮಗೆ ನ್ಯಾಯ ದೊರತಿಲ್ಲ—ಹೀಗೆಲ್ಲಾ ಹೇಳಿಕೊಂಡು ಕಾನೂನಿಗೆ ವಿರೋಧವಾಗಿಯಾದರೂ ನಮ್ಮ ಕೇಸುಗಳನ್ನು ಇತ್ಯರ್ಥಗೊಳಿಸಿ ಎಂದು ಕೇಳುವವರಾಗಿದ್ದಾರೆ. ಆ ರೀತಿ ಕಾನೂನಿಗೆ ವಿರೋಧವಾಗಿ ಸರ್ಕಾರ ತೀರ್ಮಾನಮಾಡುವುದಕ್ಕೆ ಎಂದಿಗೂ ಸಿದ್ಧವಿಲ್ಲ. ಜಮೀನು ಇರುವವರೇ, ನಮಗೆ ಜಮೀನು ಇಲ್ಲ. ಜಮೀನು ಕೊಡಬೇಕು ಎಂದು ಸರ್ಕಾರಕ್ಕೆ ಬರೆಯುತ್ತಾರೆ. ಇಂತಹವುಗಳು ಸರ್ಕಾರದಲ್ಲಿ ಬೇಕಾದಷ್ಟಿವೆ. ಎಷ್ಟೋ ಕೇಸುಗಳು ಫೈನಲ್‌ಮಾಡಿದ್ದರೂ, ಇನ್ನೂ ಫೈನಲ್ಲೇ ಆಗಿಲ್ಲವೆಂದು ಅವರ ದೃಷ್ಟಿಯಲ್ಲಿಟ್ಟುಕೊಂಡು ಪುನಃ ಅರ್ಜಿಗಳನ್ನು ದಾಖಲ್‌ಮಾಡಿರುವ ನಿದರ್ಶನಗಳು ಬಹಳ ಇವೆ. ಇದರಿಂದ ಕಾಗದ ಪತ್ರಗಳ ವಿಲೇವಾರಿ ಸರ್ಕಾರದಲ್ಲಿ ಜಾಗ್ರತೆಯಾಗುವುದಕ್ಕೆ ಬದಲು ತಡವಾಗುತ್ತದೆ.

ಇನ್ನೊಂದು ಕಾರಣ, ಈ ರೀತಿ ಕಾಗದ ಪತ್ರಗಳ ವಿಲೇವಾರಿ ವಿಳಂಬವಾಗುವುದಕ್ಕೆ ಇದೆ. ಇದರಿಂದ ಕೆಲವು ಭಾಗಗಳಲ್ಲಿ, ಆಯಾ ಸ್ಥಳಗಳಲ್ಲಿಯೇ ಗುಂಪುಗಳಾಗಿ, ಪಂಗಡಗಳಾಗಿ ಗ್ರಾಮಾಂತರಗಳಲ್ಲಿ ಪರಸ್ಪರ ಮನಸ್ತಾಪಗಳುಂಟಾಗುವುದಕ್ಕೆ ಕಾರಣವಾಗಿದೆ. ಈಗ ಸರ್ಕಾರದ ಮುಂದೆ ಅನೇಕ ಅಕ್ವಿಸಿಷನ್ ಕೇಸುಗಳು ಇವೆ. ಸುಮಾರು ನಾಲ್ಕು ಸಾವಿರ ಕೇಸುಗಳು ಸೆಕ್ರೆಟೇರಿಯಟ್ ಒಂದರಲ್ಲೇ ಇವೆ. ಸಾಮಾನ್ಯವಾಗಿ ಕೆಲವರು ಈ ಅಕ್ವಿಸಿಷನ್ ಮುಂತಾದ ಕೇಸುಗಳಲ್ಲಿ ಸೇರಿಕೊಂಡು, ಆಡಳಿತ ಪ್ರಶ್ನೆಗಳನ್ನು ರಾಜಕೀಯ

ಪ್ರಶ್ನೆಗಳನ್ನಾಗಿ ಪರಿಗಣಿಸುತ್ತಿದ್ದಾರೆ. ಇಂತಹ ಅಕ್ವಿಸಿಷನ್ ಸಂಬಂಧದಲ್ಲಿ ಅನೇಕರು ನನಗೆ ಈ ಜಮೀನು ಬೇಕು, ನನಗೆ ಆ ಜಮೀನು ಬೇಕು, ನನಗೆ ಇಲ್ಲಿ ಬೇಕು, ಅಲ್ಲಿ ಬೇಕು ಎಂದು ಕೇಳುತ್ತಾರೆ. ಶ್ರೀಮಾನ್ ಪಟ್ಟಣ್ ಅವರು ಒಂದು ಅಕ್ವಿಸಿಷನ್ ಕೇಸಿನ ವಿಷಯವಾಗಿ ಸರ್ಕಾರದ ವರದಿಯನ್ನೂ ಸಹ ಕೇಳಿದ್ದಾರೆ. ಅದಕ್ಕೆ ಮುಂದೆ ಜವಾಬು ಕೊಡುತ್ತೇನೆ.

ಶ್ರೀ ಎಂ. ಎಸ್. ಪಟ್ಟಣ್ (ರಾಮದುರ್ಗ).—ಡೆಪ್ಯುಟಿ ಕಮಿಷನರ್ ಮತ್ತು ರೆವಿನ್ಯೂ ಕಮಿಷನರ್ ಈ ಬಗ್ಗೆ ಏನು ವರದಿಯನ್ನು ಕೊಟ್ಟಿದ್ದಾರೆಂಬುದನ್ನು ಓದಿ ಹೇಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಮುಂದೆ ಆ ವರದಿಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಆದುದರಿಂದ ಕೆಲವರು ಕೇವಲ ಆಡಳಿತ ಪ್ರಶ್ನೆಗಳನ್ನು ಅನೇಕ ಸಂದರ್ಭಗಳಲ್ಲಿ ರಾಜಕೀಯ ಪ್ರಶ್ನೆಗಳ್ನಾಗಿ ಪರಿವರ್ತನೆ ಮಾಡುತ್ತಿದ್ದಾರೆ. ಅಕ್ವಿಸಿಷನ್, ಕನ್ವರ್‌ಷನ್, ಲ್ಯಾಂಡ್ ಗ್ರ್ಯಾಂಟು—ಈ ವಿಚಾರಗಳಲ್ಲಿ, ಒಂದು ಪಕ್ಷ ಬೇಕು, ಇನ್ನೊಂದು ಪಕ್ಷ ಬೇಡವೆಂದು ಹೇಳುತ್ತಾರೆ. ಪ್ರತಿಯೊಂದು ಸ್ಟೇಜಿನಲ್ಲೂ ಅಪೀಲು ಹೋಗುತ್ತಾರೆ. ತಹಸೀಲ್‌ದಾರ್‌ನಿಂದ ಅಸಿಸ್ಟೆಂಟ್ ಕಮಿಷನರಿಗೂ, ಅಸಿಸ್ಟೆಂಟ್ ಕಮಿಷನರ್‌ರಿಂದ ಡೆಪ್ಯುಟಿ ಕಮಿಷನರ್‌ವರೆಗೆ, ಡೆಪ್ಯುಟಿ-ಕಮಿಷನರಿಂದ ರೆವಿನ್ಯೂ ಕಮಿಷನರ್‌ವರೆಗೆ, ರೆವಿನ್ಯೂ ಕಮಿಷನರಿಂದ ರೆವಿನ್ಯೂ ಮಿನಿಸ್ಟರ್‌ವರೆಗೂ ಅಪೀಲು ಹೋಗುತ್ತಾರೆ. ಇನ್ನು ಮುಂದೆಯೂ ಅಪೀಲು ಹೋಗುವುದಕ್ಕೆ ಅವಕಾಶವಿದೆಯೆಂದು ಸಾಧ್ಯವಾದರೆ ಸುಪ್ರೀಂ ಕೋರ್ಟಿಗೂ ಅಪೀಲು ಹೋಗುತ್ತಾರೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ಇನಿಷಿಯಲ್ ಸ್ಟೇಜಿನಲ್ಲಿಯೇ ಡಿಲೇಮಾಡಬೇಡಿ.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಅಭಿಪ್ರಾಯವನ್ನು ವಿನಯ ಪೂರ್ವಕವಾಗಿ ಸ್ವಾಗತಿಸುತ್ತೇನೆ. ಸರ್ಕಾರದವರು ತಮ್ಮ ಶಕ್ತಿಯನ್ನು ಮೀರಿ ಕಾಗದ ಪತ್ರಗಳ ವಿಲೇವಾರಿ ಜಾಗ್ರತೆಯಾಗುವಂತೆ ಪ್ರಯತ್ನ ಮಾಡುತ್ತಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಾನು ಖುದ್ದಾಗಿ ಶೇಕಡ 75ರಷ್ಟು ತಹಸೀಲ್‌ದಾರ್ ಆಫೀಸುಗಳನ್ನು ಈ ವರೆಗೆ ಪರಿಶೀಲನೆಮಾಡಿದ್ದೇನೆ. ಸುಮಾರು 20—30 ವರ್ಷಗಳಿಂದ ಅಲ್ಲಿ ಕೊಳೆತು ಬಿದ್ದಿರತಕ್ಕ ಅನೇಕ ರಿಕಾರ್ಡುಗಳನ್ನು ನೋಡಿದ್ದೇನೆ. ಈಗ ಅಂತಹವುಗಳೆಲ್ಲಾ ಎಷ್ಟೋ ತೀರ್ಮಾನವಾಗತಕ್ಕ ಸ್ಥಿತಿಗೆ ಬಂದಿವೆ. ನಮ್ಮ ಕಷ್ಟಗಳನ್ನು ಮಾನ್ಯ ಸದಸ್ಯರಾದ ತಾವೆಲ್ಲರೂ ತಿಳಿದುಕೊಳ್ಳಬೇಕು. ಆದರೆ ಕೆಲವು ಕಾಗದ ಪತ್ರಗಳ ವಿಲೇವಾರಿಯ ಬಗ್ಗೆ ಕೆಲವು ಸಂದರ್ಭಗಳಲ್ಲಿ ವಿಳಂಬ ಆಗುತ್ತದೆ. ಆದರೂ ಅಂತಹವುಗಳನ್ನೂ ಸಹ ತಡೆಯಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀಮಾನ್ ಪುಟ್ಟಣ್ಣನವರ ಕಾಲದ ಕೆಲವು ರೆಕಾರ್ಡುಗಳೂ ಸಹ ಬಾಕಿ ಇದ್ದುವು. ಈ ಹಳೆ ರೋಗ ನಿವಾರಣೆಗೆ ಹಳೆಯ ನುರಿತ ಅಧಿಕಾರಿಗಳೇ ಬೇಕು.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಹಳೆಯ ರೋಗಗಳಿಗೆ ಹೊಸ ವೈದ್ಯರು ಪ್ರಯೋಜನವಿಲ್ಲ ತಾನೇ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳುವುದು ನಿಜ. ನನ್ನಂಥ, ನಿಮ್ಮಂಥ ಹಳಬರೇ ಈಗ ಬೇಕಾಗಿರುವುದು. ಈ ವಿಧಾನವನ್ನು ತಪ್ಪಿಸತಕ್ಕ ಬಗ್ಗೆ ಒಂದು ಕ್ರಾಂತಿಕಾರಕವಾದ ರೆಮೆಡಿಯೇ ಬೇಕೇನೋ ಎಂದೆನಿಸುತ್ತದೆ. ಇದರ ಜೊತೆಗೆ ನಮ್ಮಲ್ಲಿ ಅನುಭವವಿರತಕ್ಕ ಅಧಿಕಾರಿಗಳ ಸಂಖ್ಯೆ ಬೇರೆ ಕಡಮೆಯಾಗುತ್ತಿದೆ. ಎಲ್ಲ ಹುದ್ದೆಗಳಿಗೂ ಹೊಸಬರೇ ಬರುತ್ತಿದ್ದಾರೆ. ಹಳಬರಲ್ಲಿ ಕೆಲವರು ರಿಟೈರ್ಡ್ ಆಗಿ ಹೋಗಿದ್ದಾರೆ; ಕೆಲವರು ಕೇಂದ್ರ ಸರ್ಕಾರದ ಸರ್ವೀಸಿನಲ್ಲಿದ್ದಾರೆ. ಈಗಿರತಕ್ಕ ಹೊಸ ಅಧಿಕಾರಿಗಳಿಂದ ಕೆಲಸ ನಡೆಸಲು ಸ್ವಲ್ಪ ತೊಂದರೆಯಾಗಿರುವುದರಿಂದ ಸರ್ಕಾರಿ ಕಾಗದ ಪತ್ರಗಳ ವ್ಯವಹಾರದಲ್ಲಿ ಸ್ವಲ್ಪ ತಡವಾಗುತ್ತಿದೆ. ಆದರೆ ಇದನ್ನು ಸಾಧ್ಯವಾದ ಮಟ್ಟಿಗೂ ಕಡಮೆ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ.

Sri J. B. MALLARADHYA.—At some stage I suggested re-orientation of the entire I. A. S. scheme.

Sri KADIDAL MANJAPPA.—It is not possible for our State.

Sri J. B. MALLARADHYA.—I said that formerly a person had to put in 15 years before he became a Deputy Commissioner. Now within less than 4 years a person can become a Deputy Commissioner? How can you expect him to have experience? The Mysore Government should initiate correspondence for the re-orientation of the entire I.A.S. scheme.

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಅವರೇನೋ ಹೇಳುತ್ತಾರೆ. ನಾವು ನಮ್ಮ ಕೆಲಸಕಾರ್ಯಗಳನ್ನು ನಡೆಸಲು ಅಮೇರಿಕಾ ರಷ್ಯಾದೇಶದಿಂದ ಜನರನ್ನು ತಂದು ಕೆಲಸಮಾಡಿಸಿಕೊಳ್ಳಲು ಸಾಧ್ಯವಿಲ್ಲ. ಎಂದಿದ್ದರೂ ನಮ್ಮ ಜನರಿಂದಲೇ ಆ ಕೆಲಸಗಳನ್ನು ನಾವು ಮಾಡಿಸಿಕೊಳ್ಳಬೇಕಾಗಿದೆ. ಆದರೆ ಈ ಹಾದಿಯಲ್ಲಿರತಕ್ಕ ತೊಂದರೆಗಳೇನು ಸಾಧಕಬಾಧಕಗಳೇನು ಎಂಬುದನ್ನೀಗ ನಾನು ಈ ಮಾನ್ಯ ಸಭೆಯಮುಂದೆ ಇಡುತ್ತಿದ್ದೇನೆ. ಆದರೆ ಈ ಐ.ಎ.ಎಸ್. ಸ್ಕೀಮು, ಅದರ ರೆಕ್ರೂಟ್‌ಮೆಂಟ್ ನಮ್ಮ ಕೈಯಲ್ಲಿಲ್ಲ. ಆದರೆ ನಮ್ಮಲ್ಲಿರತಕ್ಕ ಅಧಿಕಾರಿಗಳಲ್ಲೂ ಅಂದರೆ ಐ.ಎ.ಎಸ್. ನವರ ಪೈಕಿ ದಕ್ಷರೂ, ಬಹಳನಿಸ್ಪೃಹರೂ, ಪ್ರಾಮಾಣಿಕರೂ ಇದ್ದಾರೆ. ನಮಗೆ ಈ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಎಷ್ಟು ಪ್ರತಿಬಂಧಕಗಳೂ, ಎಡರು ತೊಡರುಗಳೂ ಇರುತ್ತವೆ, ಎಂಥಾ ತೊಂದರೆ ಬರುತ್ತವೆ, ಎಷ್ಟು ಕಷ್ಟಪಡಬೇಕು ಎಂಬುದನ್ನು ಮಾನ್ಯ ಸದಸ್ಯರಿಗೆ ಮನವರಿಕೆಮಾಡಲು ವಿಷಯಗಳನ್ನು ಹೇಳುತ್ತಿದ್ದೇನೆ. ಏಕೆಂದರೆ ಯಾರೋ ಒಬ್ಬ ಮಾನ್ಯ ಸದಸ್ಯರು ಮಂತ್ರಿಗಳು ಏನೂ ಕೆಲಸವನ್ನೇ ಮಾಡುವುದಿಲ್ಲ, ಬರಿಯ ಮಾತಿನಲ್ಲಿ ಕಾಲಹರಣ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಹಾಗೆ ಮಾತನಾಡಿದ ಮಾನ್ಯ ಸದಸ್ಯರು ನನ್ನ ಜೊತೆಯಲ್ಲಿ ಒಂದೆರಡು ದಿನಗಳಿದ್ದು ನೋಡಿದರೆ ಅವರು ಮೂರನೇಯ ದಿನಕ್ಕೆ ಖಂಡಿತ ನನ್ನ ಜೊತೆಯಲ್ಲಿರುವುದಿಲ್ಲ. ಆದುದರಿಂದ ಈ ಮಂತ್ರಿ ಕೆಲಸ ಎಂಬುದು ಅಷ್ಟೇನೂ ಸುಲಭವಾದುದಲ್ಲ ಎಂದು ಅವರಿಗೆ ತಿಳಿಸಲಚ್ಛಿಸುತ್ತೇನೆ. ನಾನು ಸುಮಾರು 80-90 ತಾಲ್ಲೂಕ್ ಆಫೀಸುಗಳನ್ನು ಇನ್‌ಸ್ಪೆಕ್ಷನ್‌ಮಾಡಿದ್ದೇನೆ. ಅನೇಕ ನೌಕರರನ್ನು ಸ್ಪಾಟಿನಲ್ಲೇ ಸಸ್‌ಪೆಂಡ್‌ಮಾಡಿದ್ದೇನೆ. ಅನೇಕರಿಗೆ ಅವರವರ ತಪ್ಪಿಗನುಸಾರವಾಗಿ ಕಾನೂನು ಪ್ರಕಾರ ಶಿಕ್ಷೆಮಾಡಲಾಗಿದೆ. ಆದರೆ ನಾನು ಇಲ್ಲಿಯವರೆಗೂ ಇನ್ನೂ ಯಾರನ್ನೂ ಡಿಸ್‌ಮಿಸ್‌ಮಾತ್ರ ಮಾಡಿಲ್ಲ. ಆದರೆ ಇನ್ನುಮೇಲೆ ಕೆಲವು ಗೆಜೆಟೆಡ್ ಅಧಿಕಾರಿಗಳ ಮೇಲೂಕೂಡ ಸೂಕ್ತಕಾರ್ಯಕ್ರಮ ಕೈಗೊಳ್ಳದಿ

(ಶ್ರೀ ಕಡಿದಾಳ್ ಮಂಜಪ್ಪ)

ದ್ದಾರೆ. ಈ ಕಾರ್ಯ ನೆರವೇರದೆಂದು ನನಗೆ ತಿಳಿದು ಬಂದಿದೆ. ಈಗ ನಾನೀಶ್ರೀವರ್ಮಾನಕ್ಕೆ ಬಂದಿದ್ದೇನೆ. ಇನ್ನು ಶ್ರೀವರ್ಮಾ ನಾಗಪ್ಪ ಆಳ್ವರವರು ಸರ್ಕಾರದ ಕೆಲಸಗಳು ಬಹಳ ಮಂದವಾಗಿ ನಡೆಯುತ್ತಿವೆ, ಇದರಿಂದ ಜನರಿಗೆ ಸರ್ಕಾರದ ಮೇಲೆ ಬಹಳ ಜಿಗುಪ್ಸೆ ಉಂಟಾಗಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ಇತ್ತೀಚೆಗೆ ನಾನು ಇಲ್ಲಿಗೆ ಬಂದನಂತರ ಕಳೆದ ಎರಡು ವರ್ಷಗಳಿಂದಲೂ ಈ ಕಾಗದ ಪತ್ರವ್ಯವಹಾರಗಳು ಬಹಳ ಜಾಗ್ರತೆಯಾಗಿ ನಡೆಯುತ್ತಿವೆ. ಆಡಳಿತ ಈಗ ಬಹಳ ಉತ್ತಮಸ್ಥಿತಿಗೆ ಬಂದಿದೆ. ಆದರೆ ಈ ವಿಚಾರಗಳು ನಾನೂ ಮತ್ತು ತಾವೂ ನಿರೀಕ್ಷಿಸಿದ್ದಮಟ್ಟದಲ್ಲಿ ಉತ್ತಮಸ್ಥಿತಿಗೆ ಬಾರದಿರಬಹುದು. ಅಂತೂ ಅಧಿಕಾರಿಗಳಲ್ಲಿ ಈಗ ದಕ್ಷತೆ ಹೆಚ್ಚುತ್ತಿದೆ ಎಂದು ಹೇಳಬಯಸುತ್ತೇನೆ.

ಇನ್ನು ಕೆಲವು ಮಾನ್ಯ ಸದಸ್ಯರುಗಳು ಅಧಿಕಾರಿಗಳ ಬಗ್ಗೆ ಲಂಚದ ಆರೋಪಣೆಗಳನ್ನು ಮಾಡಿದ್ದಾರೆ. ಇನ್ನು ಕೆಲವರು ಮಂತ್ರಿಗಳ ಮೇಲೂ ಆರೋಪಣೆಗಳನ್ನು ಮಾಡಿದ್ದಾರೆ. ಆದರೆ ಈ ಲಂಚನಿರೋಧದ ಇಲಾಖೆ ಬಂದದ್ದೂ ಕೂಡ ನನ್ನಿಂದಲೇ. ಈ ಲಂಚ ನಿರೋಧ ಶಾಖೆ ಕೆಲವುದಿನ ನನ್ನ ಕೈಲೂ ಇತ್ತು. ನಾನು ಹಿಂದೆ 1943ರಲ್ಲಿ ಶಾಸನ ಸಭಾ ಸದಸ್ಯನಾಗಿದ್ದಾಗ ಒಂದು ನಿರ್ಣಯವನ್ನು ತೆಂದಿದ್ದೆನು. ಅದು ಸಭೆಯಲ್ಲಿ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು. ಆನಂತರ ಅದರ ದೆಶೆಯಿಂದ ಈಗಿರತಕ್ಕ ಲಂಚನಿರೋಧ ಶಾಖೆ ಸ್ಥಾಪನೆಯಾಯಿತು. ಆಗಿನಿಂದಲೂ ಅದು ನಡೆದುಕೊಂಡು ಬರುತ್ತಿದೆ. ಆದರೆ ದೇಶದಲ್ಲಿ ಲಂಚರುಷವತ್ತುಗಳೇ ಇಲ್ಲ ಎಂದು ನಾನು ಹೇಳುವುದಿಲ್ಲ. ಅಲ್ಲಿಷ್ಟು-ಇಲ್ಲಿಷ್ಟು ಇದೆ. ಈ ಬಗ್ಗೆ ಸರ್ಕಾರದವರು ತೀವ್ರ ಕಾರ್ಯಕ್ರಮಗಳನ್ನು ಕೈಗೊಂಡು ಇದನ್ನು ಬಹುಮಟ್ಟಿಗೆ ತಡೆಗಟ್ಟಿದ್ದಾರೆ. ಆದರೆ ಈ ವಿಚಾರದಲ್ಲಿ ನಮಗೆಷ್ಟು ತೊಂದರೆಗಳು ಬರುತ್ತೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕಾಗಿದೆ. ಈಗ ನಮ್ಮಲ್ಲಿ ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ಕೆಟ್ಟವರೂ ಇದ್ದಾರೆ. ಆದರೆ ಈಗ ಒಳ್ಳೆಯವರಮೇಲೂ ಮತ್ತು ಕೆಟ್ಟವರಮೇಲೂ ಒಟ್ಟಿಗೆ ದೂರುಗಳು ಬರಲಿಕ್ಕೆ ಪ್ರಾರಂಭವಾಗಿದೆ ಹೀಗಾಗಿ ಈ ದಿವಸ ಒಳ್ಳೆಯ ಅಧಿಕಾರಿಗಳು ಯಾರು ಕೆಟ್ಟ ಅಧಿಕಾರಿಗಳು ಯಾರು ಎಂಬುದನ್ನು ಕಂಡುಹಿಡಿಯುವುದೇ ಬಹಳ ಕಷ್ಟಕ್ಕೆಬಂದಿದೆ. ಕೆಲವು ಅಧಿಕಾರಿಗಳು ಇತ್ತೀಚೆಗೆ ಬಹಳ strict ಆಗಿ ಕೆಲಸಮಾಡಲು ಪ್ರಾರಂಭಿಸಿದ್ದಾರೆ. ಅಂಥವರಮೇಲೆ ಈಗ ಜನರು ಮೊದಲು ಮೂಗರ್ಜಿಗಳನ್ನು ಬರೆಯುವುದಕ್ಕೆ ಪ್ರಾರಂಭಮಾಡಿದ್ದರು. ಇತ್ತೀಚೆಗೆ ರುಜುಮಾಡಿ ಅರ್ಜಿ ಬರೆಯುವುದಕ್ಕೆ ಪ್ರಾರಂಭಮಾಡಿದ್ದಾರೆ. ಹೀಗಾಗಿ ಈಗ ರುಜುವಾದ ದೂರಿನ ಅರ್ಜಿಗಳು ಬರುತ್ತಿವೆ. ಮೊನ್ನೆತಾನೆ ಒಬ್ಬ ಜಿಲ್ಲಾಧಿಕಾರಿಗಳ ಮೇಲೆ ಒಂದು ಆರೋಪಣೆಯ ಪಟ್ಟಿ ಬಂದಿತ್ತು. ಅದಕ್ಕೆ ಕಾರಣವೇನಿತ್ತೆಂದರೆ, ಯಾರೋ ಒಬ್ಬರು ಅಧಿಕಾರಿಗಳಿಗೆ ಒಂದು ಬಸ್‌ಲೈಸೆನ್ಸಿಗೆ ಅರ್ಜಿ ಹಾಕಿದ್ದರು. ಅವರಿಗೆ ಪರ್ಮಿಟ್ ಕೊಡಲಿಲ್ಲ. ಅದಕ್ಕಾಗಿ ಅವರಮೇಲೆ ಒಂದು ಆರೋಪಣೆ ಪಟ್ಟಿಯನ್ನೇ ತಯಾರಿಸಿ ಕಳುಹಿಸಿದ್ದರು. ಕೆಲವರು ನನ್ನಮೇಲೂ ಸಹ ಮುಖ್ಯಮಂತ್ರಿಗಳಿಗೆ ಒಂದು ದೂರಿತ್ತಿದ್ದಾರೆ. ಆ ದೂರಿನ ಅರ್ಜಿಯಲ್ಲಿ "ಚಿಕ್ಕಮಗಳೂರಿನ ನಾಗರಿಕರ ಸಂಘ" ಎಂದು ಬರೆದಿದೆ. ಅದರಲ್ಲಿ ನನ್ನ ಮೇಲೆ ಮಾಡಿದ್ದ ಆರೋಪಣೆಯೇನೆಂದರೆ, ನಾನು ಯಾರಿಗೋ ಒಂದುನೂರು ಎಕರೆ ಜಮೀನನ್ನು ಕೊಟ್ಟು ಅನಂತರ ಅದೇ ವ್ಯಕ್ತಿಯ ಅಳಿಯನಿಗೆ ಮತ್ತೆ ಒಂದು ನೂರು ಎಕರೆ ಜಮೀನನ್ನು ಕೊಟ್ಟಿದ್ದೇನೆಂಬುದಾಗಿ ಅರ್ಜಿ ಬರೆದಿದ್ದಾರೆ ನಾನು ಇಲ್ಲಿಯವರೆಗೆ ಒಂದು ಕೇಸಿನಲ್ಲಿಮಾತ್ರ ಡಿವಿಜನಲ್ ಕಮೀಷನರ ಶಿಫಾರಸಿನ ಮೇಲೆ ಒಬ್ಬರಿಗೆಮಾತ್ರ ಜಮೀನು ಕೊಟ್ಟಿದ್ದೇನೆ. ಆದಾಗ್ಯೂ ಈರೀತಿ ನನ್ನಮೇಲೂ ಆರೋಪಣೆಮಾಡಿದ್ದಾರೆ. ಆದರೆ ಹಿಂದಿನಕಾಲದಲ್ಲಿ ಯಾರಾದರೂ ಒಂದು ದೂರು ಹೇಳಿದರೆ "ಬೆಂಕಿಯಿಲ್ಲದೆ ಹೊಗೆ ಹೊರಡುವುದಿಲ್ಲ" ಆದುದರಿಂದ ಇದರಲ್ಲಿ ಏನೋ ಇರಬೇಕೆಂದು ಹೇಳುತ್ತಿದರು. ಆದರೆ ಈಗಿನ ಕಾಲದಲ್ಲಿ ಬೆಂಕಿ ಇಲ್ಲದೆ ಹೊಗೆ ಹೊರಡಿಸುವಂಥ ಜನರೂ ಅನೇಕರಿದ್ದಾರೆ.

ಶ್ರೀ ವಿ. ಶ್ರೀನಿವಾಸ ಶೆಟ್ಟಿ (ಕುಂದಾಪುರ).—ಅಧ್ಯಕ್ಷರೇ, ನಾನು ಲಂಚದ ವಿಚಾರವಾಗಿ ಮಾತನಾಡಿದ್ದೇನೆ. ಆದರೆ ಅದು ಯಾವ ಸಂದರ್ಭದಲ್ಲಿ ಎಂದರೆ ಪಾನನಿರೋಧದ ಸಂಬಂಧದಲ್ಲಿ. ಈ ಬಗ್ಗೆ ಉಭಯ ಶಾಸನ ಸಭೆಗಳಲ್ಲೂ ಅನೇಕರು ಮಾತನಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈ ಲಂಚದ ಹಾವಳಿ ಈ ಬಾಬಿನಲ್ಲಿ ಬಹಳವಾಗಿದೆಯೆಂದು ಈ ಸಭೆಯಲ್ಲೂ ಮಾತನಾಡಿದ್ದೇನೆ. ಅಸೆಂಬ್ಲಿಯ ಹೊರಗೂ ಖಾಸಗಿಯಾಗಿ ಅನೇಕರಿಗೆ ತಿಳಿಸಿದ್ದೇನೆ. ಆ ಬಗ್ಗೆ ಸರ್ಕಾರದವರೇನು ಕಾರ್ಯಕ್ರಮ ಕೈಗೊಂಡಿದ್ದಾರೆಂಬುದನ್ನು ತಿಳಿಸಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಆದರೆ ನಾನು ಹೇಳುವುದಿಷ್ಟು. ಲಂಚ ಇದೆ. ಆದರೆ ಅದರ ಬಗ್ಗೆ ಉತ್ಪ್ರೇಕ್ಷೆ ಜಾಸ್ತಿಯಾಗಿದೆ. ಆದರೆ ಈ ಆಪಾದನೆಗಳಲ್ಲಿ ಕೆಲವು ಆಯಾ ವಾತಾವರಣದ ಮೇಲೆ ಹೋಗುತ್ತವೆ. ಯಾರು ತಾನೂ ತಿಂದು ಇತರರಿಗೂ ತಿನ್ನಿಸುತ್ತಿದ್ದಾರೋ ಅಂಥವರ ಬಗ್ಗೆ ಆರೋಪಣೆಗಳು ಬರುವುದಿಲ್ಲ. ಇನ್ನು ಮೂರೂ ಬಿಟ್ಟವರ ಬಗ್ಗೆಯೂ ಕೂಡ ಯಾರೂ ಆರೋಪಣೆಮಾಡುವುದಿಲ್ಲ; ಅಂಥವರ ತಂಟೆಗೇ ಹೋಗುವುದಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಮೂರೂ ಬಿಟ್ಟವನು ಎಂದರೇನು ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ, ಮರ್ಯಾದೆ ನಾಚಿಕೆ ವಗೈರೆ ಇವು ಮೂರನ್ನು ಬಿಟ್ಟವರ ತಂಟೆಗೆ ಯಾರೂ ಹೋಗುವುದಿಲ್ಲ.

ಯಾವನು ಗೂಂಡಾಗಿರಿಮಾಡುತ್ತಾನೋ, ಹೊಡೆಯುವುದಕ್ಕೂ ಹೊಡೆಸಿಕೊಳ್ಳುವುದಕ್ಕೂ ಸಿದ್ಧನಾಗಿರುತ್ತಾನೋ, ಅವನ ತಂಟೆಗೆ ಹೋಗುವುದಿಲ್ಲ; ಅವನ ಮೇಲೆ ಟೀಕೆಮಾಡುವುದಕ್ಕೆ ಹೋಗುವುದಿಲ್ಲ. ಬಡಪಾಯಿ ಜತ್ತಿಯವರಂಥವರು, ಮಾನ ಮರ್ಯಾದೆಗೆ ಅಂಜಿ ನಡೆಯುವರು, ಪಾಪಪುಣ್ಯದ ಪರಿಜ್ಞಾನವಿರುವವರಿದ್ದರೆ, ಅವರ ಮೇಲೆ ಬಾಣ ಬಿಡುತ್ತಾರೆ. ಅಧಿಕಾರಿಗಳು ಸ್ಟ್ರಿಕ್ಟ್ ಆಗಿದ್ದು, ಸಂಭಾವಿತರಾಗಿದ್ದರೆ, ಅವರಮೇಲೆ ಟೀಕೆಗಳು ಬರುತ್ತವೆ. ಹೀಗೆ ದೇಶದಲ್ಲಿ ವಾತಾವರಣವಿದೆ. ಏಕೆ ಹೇಳುತ್ತೇನೆಂದರೆ, ನ್ಯಾಯವಾದ ಆರೋಪಣೆಯಾವುದು, ಅನ್ಯಾಯವಾದುದು ಯಾವುದು, ಸುಳ್ಳಿನದು ಯಾವುದು ಎಂದು ಕಂಡು ಹಿಡಿಯುವುದೇ ಕಷ್ಟವಾಗಿದೆ. ನನ್ನಮೇಲೆ ಕೆಲವು ದಿವಸಗಳ ಹಿಂದೆ ಅರ್ಜಿ ಬಂದಿತ್ತು ಎಂದು ಹೇಳಿದೆ. ಅದೇ ಅರ್ಜಿ ಒಬ್ಬ ಅಧಿಕಾರಿಯ ಮೇಲೆ ಬಂದಿದ್ದರೆ ಅದನ್ನು ಎನ್‌ಕ್ವಯರಿ ಮಾಡಬೇಕಾಗಿತ್ತು. ಅವನು ಪ್ರಾಮಾಣಿಕನಾಗಿದ್ದು, ಅವನ ಮೇಲೆ ಎನ್‌ಕ್ವಯರಿ ಸ್ಟಾರ್ಟ್ ಆಗಿದ್ದರೆ, ಅವನು ಎಷ್ಟು

ನೊಂದುಕೊಳ್ಳುತ್ತಿದ್ದನೋ ಈ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಲಂಚದ ಅಪಾದನೆಗಳನ್ನು ಪರಿಶೀಲಿಸಬೇಕು ಎಂದು ಅರಿಕೆಮಾಡಿಕೊಳ್ಳುತ್ತೇನೆ.

ಒಬ್ಬ ಸದಸ್ಯರು.—ಅರ್ಜಿ ಬರುವುದೆಲ್ಲಾ ಸುಳ್ಳೆ ?

ಶ್ರೀ ಕಡಿದಾಳ್‌ಮಂಜಪ್ಪ.—ಲಂಚ ಇದೆ ಎಂದು ಮೊದಲೇ ಹೇಳಿದ್ದೇನೆ.

ಶ್ರೀಮಾನ್ ಪಟ್ವಾಣ್ ಅವರೂ, ನಾಗೂರ್ ಅವರೂ ಮಾತನಾಡುವಾಗ, ತಕಾವಿ ಸಾಲ ಕೊಡುವಾಗ ಲಂಚ ತಗೆದುಕೊಳ್ಳುತ್ತಾರೆಂದು ಹೇಳಿದರು. ಇದು ಬಹಳ ವಿಷಾದಕರ. ಲಂಚಕ್ಕೆ ಪ್ರೋತ್ಸಾಹ ಕೊಡತಕ್ಕವರು, ಖಾಸಗಿ ಜನರು ಯಾವದೇಶದಲ್ಲಿ ಬಡವರಿಗೆ ನ್ಯಾಯಮಾಡುವುದು ಪವಿತ್ರವಾದ ಕರ್ತವ್ಯವೆಂದು ತಿಳಿದುಕೊಂಡಿದ್ದಾರೋ, ಅಲ್ಲಿ ಮನೆ ಮಠ ಇಲ್ಲದ ಹರಿಜನರಿಗೆ ಮನೆಮಠಗಳಿಗೆ ಗ್ರಾಂಟನ್ನು ಕೊಡಿಸುವಾಗ ಲಂಚ ತೆಗೆದುಕೊಳ್ಳತಕ್ಕಂಥವರು ಖಾಸಗಿ ಜನರು. ಯಾವ ದೇಶದಲ್ಲಿ ರೋಗರುಜಿನಗಳಿಗೆ ತುತ್ತಾಗಿರತಕ್ಕ ಜನಗಳಿಗೆ ಶಿಶ್ರೂಷೆಮಾಡುವುದು ಪವಿತ್ರ ಕರ್ತವ್ಯವೆಂದು ತಿಳಿದುಕೊಂಡಿದ್ದಾರೋ, ಅದೇ ದೇಶದಲ್ಲಿ ಆಸ್ಪತ್ರೆಗಳಿಗೆ ರೋಗಿಗಳನ್ನು ಅಡ್‌ಮಿಟ್‌ಮಾಡಿ ಹಣ ಸಂಪಾದಿಸುವ ಜನರಿದ್ದಾರೆ. ತಕಾವಿ ಲೋನ್ ಕೊಡಿಸಿಬಿಟ್ಟು ಆ ಮೂಲಕ ಸಂಪಾದನೆಮಾಡತಕ್ಕ ಜನ ಇದ್ದಾರೆ. ಶ್ರೀಮಾನ್ ಪಟ್ವಾಣ್‌ರವರು ಅಲ್ಲಲ್ಲಿ ಸಮಾಜಸೇವಕರು ಇದ್ದಾರೆಂದು ಹೇಳಿದರು. ಕಳೆದ 12 ವರ್ಷಗಳಿಂದ ಕೆಲವು ದುಷ್ಟ ಶಕ್ತಿಗಳು ಸಭ್ಯತೆಯ ಪೊಷಾಕುಗಳನ್ನು ಹಾಕಿಕೊಂಡಿದ್ದಾರೆ. ಅವರು ಸಾರ್ವಜನಿಕ ಜೀವನದಲ್ಲಿ ಅಲ್ಲಲ್ಲಿ ತಲೆ ಎತ್ತುತ್ತಿದ್ದಾರೆ. ಫೂಟ್‌ಲಾಯರ್ ಕೆಲಸಮಾಡುವವರೂ, toutes ಕ್ರಿಮಿನಲ್ ಪ್ರೊಸೀಜರ ಕೋಡಿನ 107 ರಿಂದ 112ನೆ ಸೆಕ್ಷನವರೆಗೆ ಗುರಿಯಾಗತಕ್ಕವರೂ, ಸಾರ್ವಜನಿಕ ಹಣವನ್ನು ತಿನ್ನತಕ್ಕವರೂ, ಸಭ್ಯತೆಯ ಪೋಷಾಕನ್ನು ಹಾಕಿಕೊಂಡು ಅಲ್ಲಲ್ಲಿ ಹುಟ್ಟಿಕೊಂಡು ಲಂಚವನ್ನು ಪ್ರೋತ್ಸಾಹಿಸುತ್ತಿದ್ದಾರೆ. ಅವರನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ಅಧಿಕಾರವಿದ್ದರೆಮಾತ್ರ ಇವರನ್ನು ಹಿಡಿಯಲು ಸಾಧ್ಯ. ಆಮೇಲೆ ಪ್ರಭಾವಶಾಲಿಗಳು ಇದ್ದಾರೆ. ನಮ್ಮ ಜನ ಮೂಕ ಸ್ವಭಾವದವರು. ಅದನ್ನು ದುರುಪಯೋಗಪಡಿಸಿಕೊಂಡು, ಅವರು ಕಾರ್ಬಾರ್‌ಮಾಡುತ್ತಿದ್ದಾರೆ. ನಾವೂ ನೀವೂ, ಪ್ರತ್ಯಕ್ಷವಾಗಿಯೋ, ಅಪ್ರತ್ಯಕ್ಷವಾಗಿಯೋ, ಇಂಥ ಜನರಿಗೆ ಪ್ರೋತ್ಸಾಹ ಕೊಟ್ಟಿರಬಹುದು, ಶ್ರೀಮಾನ್ ಪಟ್ವಾಣ್‌ರವರೂ ಪ್ರೋತ್ಸಾಹ ಕೊಟ್ಟಿರಬಹುದು, ನಾನೂ ಕೊಟ್ಟಿರಬಹುದು.

Sri M. MALLIKARJUNASWAMY (Malavalli).—In my opinion, as the Hon'ble Minister concedes it, corruption is a social evil. Everybody accepts it. It is a social scourge. To eradicate it, do you mean to suggest that deterrent punishment should be inflicted on both the giver and the receiver? Specially in the case of the receiver, it should be more.

Sri KADIDAL MANJAPPA.—I will come to the point.

ದುಷ್ಟಶಕ್ತಿಗಳಾದಂಥ "ಸಮಾಜ ಸೇವಕರೂ", "ದೇಶಭಕ್ತ" ರೂ ಇದ್ದಾರಲ್ಲಾ, ಇವರನ್ನು ತಡೆಗಟ್ಟುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಲೇಬೇಕಾಗುತ್ತದೆ. ಅವರು ಅಲ್ಲಲ್ಲಿ ಇರುವವರೆಗೆ ಲಂಚವನ್ನು ತಡೆಗಟ್ಟುವುದು ಕಷ್ಟ. ಶ್ರೀ ಅರ್ವಾಗಂರವರು, ಮುಖ್ಯ ಮಂತ್ರಿಗಳು ಫಿಲಾಸಫಿ ಹೇಳಿದರು ಎಂದು ಹೇಳಿದರು. ಸಮಾಜದಲ್ಲಿ ನಡೆಯತಕ್ಕ ಆಗುಹೋಗುಗಳ ಪರಿಣಾಮ ರಾಜಕೀಯ ಕ್ಷೇತ್ರದಲ್ಲಿ ಆಗುತ್ತದೆ; ರಾಜಕೀಯ ಆಗುಹೋಗುಗಳ ಪರಿಣಾಮ ಜನರಮೇಲೆ ಉಂಟಾಗುತ್ತದೆ, ಅಧಿಕಾರಿಗಳ ಮೇಲೆ ಉಂಟಾಗುತ್ತದೆ. ನಾನು, ಶ್ರೀಮಾನ್ ಅರ್ವಾಗಂರವರೂ, ಪಟ್ವಾಣ್‌ರವರೂ, ನೀವೂ, ನಾವೂ ನಿತ್ಯಗಟ್ಲೆ ಜೀವನದಲ್ಲಿ ಯಾವರೀತಿ ವರ್ತಿಸುತ್ತೇವೆಯೋ, ಅದರ ಪರಿಣಾಮಕೂಡ ಅಧಿಕಾರಿಗಳಮೇಲೆ ಆಗುತ್ತದೆ. ಆದ್ದರಿಂದ ಈ ಲಂಚವನ್ನು ತಡೆಗಟ್ಟುವ ಕಾರ್ಯ ಎಷ್ಟು ಕಷ್ಟವೆಂಬುದನ್ನು ಅರಿಕೆಮಾಡಿಕೊಳ್ಳುವುದಕ್ಕೋಸ್ಕರ ತಮ್ಮಲ್ಲಿ ಇದನ್ನೆಲ್ಲಾ ನಿವೇದನಮಾಡಿಕೊಂಡಿದ್ದೇನೆ. ಸಾರ್ವಜನಿಕರ ಸಹಕಾರ ಸಾಕಾದಷ್ಟು ಸಿಕ್ಕುವುದಿಲ್ಲ. ಒಂದು ಉದಾಹರಣೆ ಹೇಳುತ್ತೇನೆ. ನಾನು ಸೇಲ್ಸ್‌ಟ್ಯಾಕ್ಸ್ ಇಲಾಖೆ ಮಂತ್ರಿಯಾಗಿದ್ದಾಗ, ಒಬ್ಬ ಗೆಜೆಟೆಡ್ ಅಧಿಕಾರಿಯ ಮೇಲೆ ಆರು ತಿಂಗಳ ಕಾಲ ಸತತವಾಗಿ ಆರೋಪಣೆಗಳೂ ಅನಾನಿಮಸ್ ಪಿಟಿಷನ್‌ಗಳು, ಸೂಡಾನಿಮಸ್ ಪಿಟಿಶನ್‌ಗಳೂ, ಮೇಲಕ್ಕೆ ಬಂದುವು. ಬಾಯಿಲ್ಲೂ ಹೇಳಿದರೂ, ಮುಖಂಡರುಗಳೂ ಎಲ್ಲಾ ನನ್ನಲ್ಲಿ ಹೇಳಿದರು. ಆರು ತಿಂಗಳವರೆಗೆ ಕಾದು ನಂತರ ಅವನನ್ನು ಟ್ರಾನ್ಸ್‌ಫರ್‌ಮಾಡಿ, ಇನ್ನೊಬ್ಬರನ್ನು ಕಳುಹಿಸಿಕೊಟ್ಟೆ. ನನಗೆ ಇವನಮೇಲೂ ಅನುಮಾನವಿತ್ತು, ಕ್ಕೆ ಶುದ್ಧವಿಲ್ಲವೆಂದು. ಇವನು ಅಲ್ಲಿಗೆ ಹೋದಮೇಲೆ ಯಾರೂ ಮಾತನಾಡಲಿಲ್ಲ, ಹೊಂದಿಕೊಂಡು ಬಿಟ್ಟರು. ಇನ್ನೊಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಲಾಯರಾಗುವುದಕ್ಕೆ ಮುಂಚೆ ನಮ್ಮ ತಾಲ್ಲೂಕಿನಲ್ಲಿ ಒಬ್ಬ ಅಧಿಕಾರಿಗಳು ಇದ್ದರು. ಅತ ಅಲ್ಲಿ ಸುಮಾರು 25 ಸಾವಿರ ರೂಪಾಯಿ ಮಾಡಿರಬಹುದು ಅನಿಸುತ್ತದೆ. ನಾನು ಮಂತ್ರಿ ಯಾಗುವುದಕ್ಕೆ ಮುಂಚೆ ಆತನ ಮೇಲೆ Anti-corruption enquiry start ಆಯಿತು. Anti-corruption ಇಲಾಖೆಯ ಮುಖ್ಯಾಧಿಕಾರಿಗಳು ನನ್ನ ಹತ್ತಿರ ಬಂದು ಸ್ವಲ್ಪ ಎವಿಡೆನ್ಸ್ ಬೇಕು, ಆವನಮೇಲೆ ಬೇಕಾದಷ್ಟು ಲಂಚದ ಅಪಾದನೆಗಳಿವೆ, direct evidence ಸಿಕ್ಕುತ್ತಾ ಇಲ್ಲ ಎಂದು ಹೇಳಿದರೂ ದುಡ್ಡು ಕೊಟ್ಟವನು ನನಗೆ ಗೊತ್ತಿತ್ತು, ಆದರೂ ಅವರು "ನಮಗೆ ಏಕೆ, ಬೇಡ, ಸ್ವಾಮಿ ಹೇಳುವುದಕ್ಕೆ ಬರುವುದಿಲ್ಲ" ಎಂದು ಹೇಳಿದರು. ನಾನು ತಾಲ್ಲೂಕ್ ಆಫೀಸನ್ನು ಅನಿರೀಕ್ಷಿತವಾಗಿ ತನಿಖೆಮಾಡುತ್ತಾ ಇರುತ್ತೇನೆ. ಅಲ್ಲಿ ಜನರಿರುತ್ತಾರೆ. ಏನಾದರೂ ತಮಗೆ ತೊಂದರೆ ಇದೆಯೋ ಎಂದು ಕೇಳಿದರೆ, ಎಲ್ಲಾ ಸರಿಯಾಗಿದೆಯೆಂದು ಹೇಳುತ್ತಾರೆ. ಅನಿರೀಕ್ಷಿತವಾಗಿ ಒಂದು ತಾಲ್ಲೂಕ್ ಆಫೀಸ್ ಇನ್‌ಸ್ಪೆಕ್ಟ್ ಮಾಡಿದೆ. ಅಲ್ಲಿದ್ದ ಪತ್ರಗಳನ್ನೂ ಹಿಡಿದುಕೊಂಡು ಬಂದಿದ್ದೆ. ಅಲ್ಲಿದ್ದ ಕೆಲವು ಮುಖಂಡರು ನನಗೆ ಗೊತ್ತಿದ್ದವರು ಸ್ವಲ್ಪದೂರ "ನಿಮ್ಮ ಕಾರಿನಲ್ಲಿ ಬರುತ್ತೇವೆಂದು" ಹೇಳಿದರು. ಅವರು ಒಳ್ಳೆಯ ಜನ? ಏಕೆ ಎಂದರೆ ಶಿಫಾರಸುಮಾಡುವುದಕ್ಕೆ ಆದ್ದರಿಂದ ಇವೆಲ್ಲಾ ತೊಂದರೆಗಳಿವೆ.

ಆಮೇಲೆ ಈ ರಾಜ್ಯದಲ್ಲಿ ನಾನ್-ಆಫಿಷಿಯಲ್ಲುಗಳು ಲೆಜಿಸ್ಲೇಟರುಗಳು ಎಂದು ಮಿಸ್ಟೇಕ್‌ಮಾಡಿಕೊಳ್ಳಕೂಡದು, ಇಂಟರ್‌ಫಿಯರೆನ್ಸ್ ಇರುವಷ್ಟು ಬಹುಶಃ ಇನ್ನೆಲ್ಲಿಯೂ ಇಲ್ಲವೋ ಎಂದು ಕಾಣಿಸುತ್ತದೆ. ಈ ಅಧಿಕಾರಿಗಳ ವಿಚಾರದಲ್ಲಿ, ಅವರ ನೇಮಕದ ವಿಚಾರ

(ಶ್ರೀ ಕಡಿದಾಳ್ ಮಂಜಪ್ಪ)

ದಲ್ಲಿ, ಭಡ್ತಿ ವಿಚಾರದಲ್ಲಿ, ಅವರ ವರ್ಗಾವರ್ಗಿ ವಿಚಾರದಲ್ಲಿ, ಸಾಕಾದಷ್ಟು ಇಂಟರ್‌ಫಿಯರೆನ್ಸ್ ಇದೆ. ಅದನ್ನು ಎಷ್ಟೋ ಕಷ್ಟದಿಂದ ತಡೆಗಟ್ಟುತ್ತಿದ್ದೇವೆ. ಒಬ್ಬ ಅಧಿಕಾರಿಯ ವರ್ಗವೆಂದರೆ ಮಹತ್ತರ ಘಟನೆ ಎಂದು ಕೆಲವರು ತಿಳಿದುಕೊಂಡಿದ್ದಾರೆ. ಒಬ್ಬ ರೆವಿನ್ಯೂ ಇನ್‌ಸ್ಪೆಕ್ಟರು ಟ್ರಾನ್ಸ್‌ಫರ್ ಆದರೆ, ಆರು ಜನ ಬರುತ್ತಾರೆ. ಅಲ್ಲಿ ಹೀಗಿರುತ್ತದೆ. ಕೆಲವು ನಾನ್-ಅಫಿಷಿಯಲ್ಲುಗಳೂ, ಅಧಿಕಾರಿಗಳೂ ಒಂದಾಗಿರುತ್ತಾರೆ; "ನಮ್ಮ ಅಧಿಕಾರಿ ಬಹಳ ಚೆನ್ನಾಗಿರುತ್ತಾರೆ" ಎಂದು ಹೇಳುತ್ತಾರೆ. ಈ ಪ್ರಭಾವಶಾಲಿಗಳು ಯಾರಿರುತ್ತಾರೋ ಅವರ ಅಹವಾಲುಗಳನ್ನು ಅಧಿಕಾರಿಗಳು ಸರಿಯಾಗಿ ನೋಡಿಕೊಳ್ಳುತ್ತಿರುತ್ತಾರೆ. ಒಂದು ಡಿಸ್ಟ್ರಿಕ್ಟಿನಲ್ಲಿ ಒಬ್ಬ ತಹಸೀಲ್‌ದಾರರಿದ್ದರು. ಅವರ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯಗಳನ್ನು ಕೇಳುತ್ತಿದ್ದೆ; ಶಾಸನಸಭಾ ಸದಸ್ಯರು, ಅವರು, ಇವರು ಎಲ್ಲಾ ಹೇಳುತ್ತಿದ್ದರು. ಒಂದು ದಿನ ಅನಿರೀಕ್ಷಿತವಾಗಿ ಅವರ ತಾಲ್ಲೂಕು ಆಫೀಸಿಗೆ ನುಗ್ಗಿದೆ. ಅಲ್ಲಿ ನೋಡಿದರೆ 1956ನೆಯ ಇಸವಿಯಲ್ಲಿ ಆರ್ಡರಾದುದನ್ನು ಎರಡು ವರ್ಷ ನಂತರವೂ ಇನ್ನೂ ಜಾರಿಗೆ ಕೊಟ್ಟಿರಲಿಲ್ಲ. ಅಂಥವರನ್ನು ಬಹಳ ದಕ್ಷರು ಎಂದು ಹೇಳುತ್ತಾ ಇದ್ದರು. ಅವರ ಟೆಕ್‌ನೀಕ್ ಏನೆಂದರೆ, ಶ್ರೀ ಪುಟ್ಟಣ್ಣನವರು ನನ್ನಂಥವರು ಏನೇನು ಹೇಳುತ್ತೇವೆಯೋ ಅದನ್ನು ಮಾಡಿಬಿಡುವುದು, ದೊಡ್ಡವರು, ಶ್ರೀಮಂತರು, ಪ್ರಭಾವಶಾಲಿಗಳು, ಇಂಥವರುಗಳ ಅಹವಾಲುಗಳಲ್ಲಿ ಆಸಕ್ತಿಯನ್ನು ತೋರಿಸಿ ಸಾಮಾನ್ಯ ಜನರ ಅಹವಾಲುಗಳನ್ನು ಕಸದಬುಟ್ಟಿಗೆ ಹಾಕಿಬಿಡುತ್ತಿದ್ದರು. ಹೀಗೆ ಸಾರ್ವಜನಿಕರು ಸರ್ಕಾರದೊಡನೆ ಸರಿಯಾಗಿ ಸಹಕರಿಸುತ್ತಿಲ್ಲ. ಆದರಲ್ಲಿಯೂ ಯಾರಿಗೆ ಸಹಕಾರ ನೀಡಲು ಅರ್ಹತೆ ಇರುತ್ತದೆಯೋ ಅವರುಕೂಡ ಸಹಕರಿಸುತ್ತಿಲ್ಲ.

1-30 P.M.

Sri J. B. MALLARADHYA.—Is it applicable only to non-officials like M L.As. ?

Sri KADIDAL MANJAPPA.—No, no, I did not say M.L As.

Sri C. J. MUCKANNAPPA.—If it does not refer to M.L.As., why should it come here ?

Sri KADIDAL MANJAPPA.—I have never said about M.L.As. I have very cautiously made it clear that I am not referring to M.L.As. I know that members of this House are very decent people.

Sri C. J. MUCKANNAPPA.—Then he may make use of this on other platforms.

Mr. SPEAKER.—It may be left to me.

Sri KADIDAL MANJAPPA.—I am not making a public speech ; I am only intimating the House our difficulties in the matter.

ಐದಾರು ದಿವಸ ಮಾನ್ಯ ಸದಸ್ಯರ ಭಾಷಣಗಳನ್ನು ಕೇಳಿದ್ದೇನೆ; ನಮ್ಮ ಭಾಷಣವನ್ನು ಅರ್ಧ ಗಂಟೆ ಕಾಲ ಕೇಳುವುದಕ್ಕೂ ಅವರಿಗೆ ಇಷ್ಟವಿಲ್ಲವೆಂದರೆ, ನಾನು ನಿಲ್ಲಿಸುತ್ತೇನೆ.

ತಕಾವಿ ಸಾಲವನ್ನು ತೆಗೆದುಕೊಳ್ಳುವಾಗ ಬಹಳ ಲಂಚವಿದೆ ಎಂದು ಹೇಳಿದರು. ಕೆಲವು ಖಾಸಗಿ ವ್ಯಕ್ತಿಗಳು ನಮ್ಮ ಅಧಿಕಾರಿಗಳನ್ನೊಳಗೆಹಾಕಿಕೊಂಡು ಈ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಹೇಳಿದೆ. ಅದರಲ್ಲಿ ತಪ್ಪೇನು ?

ಡಾ॥ ಆಳ್ವ ಅವರೂ ಮತ್ತೆ ಕೆಲವು ಸದಸ್ಯರೂ 'ಈಕ್ವೇಷನ್' ಆಗದೇಯಿರುವುದರಿಂದ ಅಧಿಕಾರಿಗಳಲ್ಲಿ ಬಹಳ ಅಸಮಾಧಾನವಾಗಿದೆ ಎಂದು ಹೇಳಿದರು. ಈಕ್ವೇಷನ್ ಬಹಳ ಜಟಿಲವಾದ ಪ್ರಶ್ನೆ, ಅಷ್ಟು ಸುಲಭವಲ್ಲ ಎಂದು ಹಿಂದೆಯೇ ಹೇಳಿದ್ದೇನೆ. ಐದು ವಿವಿಧ ಪ್ರದೇಶಗಳನ್ನೊಳಗೊಂಡಿರುವ ಮೈಸೂರು ರಾಜ್ಯದಲ್ಲಿ ಐದು ರೀತಿಯ ರಿಕ್ರೂಟ್‌ಮೆಂಟ್ ನಿಯಮಗಳೂ ಇತರ ಕಾನೂನುಗಳೂ ಸರ್ಕಾರಿ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಇರುವಾಗ ಈ ಎಲ್ಲ ಅಧಿಕಾರಿಗಳನ್ನೂ ಒಂದೇ ರೀತಿಯ ಗ್ರೇಡುಗಳಿಗೆ ಸೇರಿಸುವುದು ಕಷ್ಟಕರವಾದ ಕೆಲಸ. 1957ನೆಯ ಇಸವಿಯಲ್ಲಿ ಅಧಿಕಾರಿಗಳ ಒಂದು ಸಮಿತಿ Equation and seniority ಪಟ್ಟಿಯನ್ನು ತಯಾರು ಮಾಡಿದರು. ಗೆಜೆಟೆಡ್ ಅಧಿಕಾರಿಗಳಿಗೆ ಸಂಬಂಧಪಟ್ಟಹಾಗೆ, ಆಮೇಲೆ ಕೆಲವು ಅಧಿಕಾರಿಗಳು ತಯಾರು ಮಾಡಿದರು; ಅದರಮೇಲೆ ಬಹಳ ಪ್ರತಿಭಟನೆ ಬಂತು. ಬೇರೆಬೇರೆ ಪ್ರಾಂತಗಳಿಂದ ಬಂದ ಅಧಿಕಾರಿಗಳೂ ಆ ಪಟ್ಟಿ ಸರಿಯಿಲ್ಲವೆಂದು ಹೇಳಿದರು. ಅದರ ಮೇಲೆ, ನಿಷ್ಪಕ್ಷಪಾತವಾಗಿ ಪರಿಶೀಲನೆ ಮಾಡಲು ಅಧಿಕಾರಿಗಳನ್ನು ಕಳುಹಿಸಿಕೊಡಿ ಎಂದು ಕೇಂದ್ರ ಸರ್ಕಾರಕ್ಕೆ ಬರೆಯಲಾಯಿತು. ಅವರು ಶ್ರೀಗಳಾದ ದತ್ ಮತ್ತು ಜಹೇಜ್ ಎಂಬ ಇಬ್ಬರು ಅಧಿಕಾರಿಗಳನ್ನು ಕಳುಹಿಸಿದರು. ದತ್ ಎಂಬವರು ಗೆಜೆಟೆಡ್ ಅಧಿಕಾರಿಗಳ ಸಂಬಂಧವಾಗಿಯೂ ಜಹೇಜ್ ಎಂಬುವರು ನಾನ್ ಗೆಜೆಟೆಡ್ ಅಧಿಕಾರಿಗಳ ಸಂಬಂಧವಾಗಿಯೂ ವರದಿಯನ್ನು ಕೊಟ್ಟರು. ಆಮೇಲೆ ದತ್ ಅವರ ವರದಿ ಸರಿಯಾಗಿಲ್ಲವೆಂದು ಅನೇಕ ಅಧಿಕಾರಿಗಳು ಹೇಳಿದರು. ಆಗ ಸರ್ಕಾರದವರು ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು ನೇಮಕ ಮಾಡಿದರು. ಅದಕ್ಕೆ ನಾನು ಅಧ್ಯಕ್ಷ, ಮೊದಲು ನಾನು ಈ ವಿಷಯ ಬಹಳ ಸುಲಭವೆಂದು ತಿಳಿದುಕೊಂಡಿದ್ದೆ; ಆದರೆ ಆಮೇಲೆ ಅದು ಎಷ್ಟು ಜಟಿಲವಾದ ಪ್ರಶ್ನೆ ಎನ್ನುವುದನ್ನು ತಿಳಿದುಕೊಂಡೆ. ಎಷ್ಟೋ ದಿವಸ ಎಷ್ಟೋ ಕೂಲಂಕಷವಾಗಿ ನೋಡಿದರೂ ಎಲ್ಲ ಅಧಿಕಾರಿಗಳಿಗೂ ಸರ್ವಸಮರ್ಪಕವಾಗಿ ತೀರ್ಮಾನ ಮಾಡುವುದು ಕಷ್ಟವೆಂದು ಅರಿವಾಯಿತು. ಈ ಸಮಿತಿಯವರು ವರದಿಯನ್ನೊಪ್ಪಿಸಿದರು. ಇವರು ಕೆಲವು ತತ್ವಗಳನ್ನೊಪ್ಪಿಕೊಂಡರು. ಬಹುಮಟ್ಟಿಗೆ ಶ್ರೀಮಾನ್ ದತ್‌ಅವರ ತತ್ವಗಳನ್ನೇ ಒಪ್ಪಿಕೊಂಡರು. ಈಗಾಗಲೇ ಆರು ಇಲಾಖೆಗಳಿಗೆ ಸಂಬಂಧಪಟ್ಟಹಾಗೆ ಸೀನಿಯಾರಿಟಿ ಪಟ್ಟಿಯನ್ನು ಪ್ರಕಟ ಮಾಡಿದ್ದೇವೆ. ಇನ್ನು ಆರು ಇಲಾಖೆಗಳಿಗೆ ಸಂಬಂಧಪಟ್ಟ ಪಟ್ಟಿಯನ್ನು ಮುದ್ರಣಾಲಯಕ್ಕೆ ಕಳುಹಿಸಿದ್ದೇವೆ.

ಶ್ರೀ ಜಹೇಜ್‌ಅವರ ವರದಿಯನ್ನು ಒಂದು ಸಮಿತಿಗೆ ಒಪ್ಪಿಸಿದ್ದೇವೆ. ಈ ಸಮಿತಿಗೆ ಶ್ರೀ ರೆಬೆಲೋ ಅವರು

ಅಧ್ಯಕ್ಷರು, ಇನ್ನು ಕೆಲವು ಅಧಿಕಾರಿಗಳು ಸದಸ್ಯರು, ಈ ಸಮಿತಿಯವರು ಜಹೇಜ್ ಅವರ ವರದಿಯನ್ನು ಪರಿಶೀಲನ ಮಾಡಿ ಮೊನ್ನೆ ತಾನೇ ಅವರ ಶಿಫಾರಸುಗಳನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆಂದು ತಿಳಿದು ಬಂದಿದೆ. ಒಟ್ಟಿನಲ್ಲಿ ಇದು ಬಹಳ ಕಷ್ಟವಾದ ಕೆಲಸ. ಎಲ್ಲ ಅಧಿಕಾರಿಗಳಿಗೂ ತೃಪ್ತಿಯಾಗುವಂತೆ ಮಾಡುವುದು ಕಷ್ಟ. ಅದರಲ್ಲಿಯೂ ಕೆಲವು ಜನರನ್ನು ತೃಪ್ತಿಗೊಳಿಸುವುದಕ್ಕೆ ಸಾಧ್ಯವೇ ಇಲ್ಲ. ಯಾವ ರೀತಿ ಮಾಡಿದರೂ ಅವರು ದೂರುವುದು ತಪ್ಪುವುದೇ ಇಲ್ಲ. ವ್ಯವಸಾಯಗಾರ ಮಳೆಬಾರದೆ ಬೆಳೆಯಾಗದೇಯಿದ್ದರೆ ದೇವರ ಕಡೆ ನೋಡುತ್ತಾನೆ; ವ್ಯಾಪಾರಗಾರ ಸರಿಯಾಗಿ ಲಾಭ ಬಾರದಿದ್ದರೆ ತನ್ನ ಅದೃಷ್ಟವನ್ನು ಶಪಿಸುತ್ತಾನೆ; ಆದರೆ ಅಧಿಕಾರಿಗಳು ಯಾವಾಗಲೂ ಸರ್ಕಾರವನ್ನೇ ದೂರುತ್ತಾರೆ..........

Sri J. B. MALLARADHYA.—We want a finality to your decision. Give a final decision. Let them abide by it.

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲವನ್ನೂ ಒಂದೇ ಸಾರಿ ಮಾಡುವುದಕ್ಕಾಗುವುದಿಲ್ಲ. ಪಟ್ಟಿ ತಯಾರಾದ ಹಾಗೆಲ್ಲ ಪ್ರಕಟ ಮಾಡುತ್ತೇವೆ.

ಶ್ರೀಮಾನ್ ಸರ್ವೇಶ್‌ಅವರು ಭೂ-ಸುಧಾರಣೆಯ ಕಾರ್ಯ ತಡವಾಗುತ್ತದೆಂದು ಹೇಳಿದ್ದಾರೆ. ಜಾಗ್ರತೆ ಈ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಆಸಕ್ತಿ ಸರ್ಕಾರಕ್ಕೆಕೂಡ ಇದೆ. ಇದು ಸಾಕಷ್ಟು ತಡವಾಗಿದೆ ಎಂಬುದೂ ಗೊತ್ತಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಮಲ್ಲಾರಾಧ್ಯರು ನನ್ನ ಹಳೆಯ ಸ್ನೇಹಿತರು, ಸರ್ಕಾರ ಹೇಗೆ ಕೆಲಸ ಮಾಡುತ್ತಿದೆ ಎಂಬುದು ಅವರಿಗೆ ಗೊತ್ತಿದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಆದರೆ ಈರೀತಿ ಮೀನ ಮೇಷ ಲೆಕ್ಕಹಾಕಿ ನಾನು ಕೆಲಸ ಮಾಡಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಾನೂ ಶ್ರೀಮಾನ್ ಜತ್ತಿಯವರೂ ಡಿಕ್ಟೇಟರಾಗಿದ್ದಿದ್ದರೆ, ತಕ್ಷಣ ಮಾಡುತ್ತಿದ್ದೆವು, ಆದರೆ ಹಾಗಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸೆಲೆಕ್ಟ್ ಕಮಿಟಿಗೆ ಹೋದ ಮೇಲೆ ಅಲ್ಲಿ ಜಿಜ್ಞಾಸೆ ಮಾಡುವುದರಲ್ಲಿ ಅರ್ಥವಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಜಂಟಿ ಸೆಲೆಕ್ಟ್ ಕಮಿಟಿಗೆ ಹೋಗಿದೆ, ಅವರು ಈ ಮಸೂದೆಯನ್ನು ಪರಿಶೀಲನೆ ಮಾಡುತ್ತಿದ್ದಾರೆ. ಕೆಲವು ತಿಂಗಳಲ್ಲೇ ಅವರ ವರದಿಯನ್ನೊಪ್ಪಿಸಬಹುದೆಂದು ನಾನು ನಿರೀಕ್ಷೆ ಮಾಡಿದ್ದೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಈ ವರ್ಷದಲ್ಲಿ ಭೂ ಸುಧಾರಣೆಯ ಕೆಲಸ ಮುಗಿಯುತ್ತದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಮಾನ್ಯ ಸದಸ್ಯರಿಗಿಂತ ಹೆಚ್ಚು ಆಸಕ್ತಿ ಇದೆ; ಕೆಲವು ತಿಂಗಳಲ್ಲಿ ಮುಗಿಯುತ್ತದೆಂಬ ನಿರೀಕ್ಷೆ ಇದೆ. ಇನ್ನು ಗೋಮಾಳ ಜಮೀನನ್ನು ಹರಿಜನರಿಗೆ ಹಂಚಬಾರದು ಎಂದು ಶ್ರೀಮಾನ್ ಸರ್ವೇಶ್‌ಅವರು ಅಭಿಪ್ರಾಯಪಟ್ಟಿದ್ದಾರೆ. ಈ ಸಭೆಯಲ್ಲಿನ ಅಭಿಪ್ರಾಯವನ್ನು ತೆಗೆದುಕೊಂಡರೆ ಬಹುಮಂದಿ ಗೋಮಾಳ ಜಮೀನನ್ನು ಯಾರಿಗೂ ಹಂಚಬಾರದು, ಸಾಗುವಳಿಗೆ ಯಾರಿಗೂ ಕೊಡಬಾರದು ಎಂದು ಅಭಿಪ್ರಾಯವಿದೆ. ಆದರೆ ಶಾಸನಸಭೆಯವರು ಈರೀತಿ ಕೊಡಬೇಕು ಎಂದು ಹೇಳಿದರೆ ನನ್ನ ಅಡ್ಡಿಯೇನೂ ಇಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಒಂದು ಹುಲ್ಲು ಕಡ್ಡಿಯೂ ಬೆಳೆಯುವುದಿಲ್ಲ ಗೋಮಾಳವನ್ನು ಸಾಗುವಳಿಗೆ ಕೊಡಿ ಎಂದು ಯಾವ ರೈತನೂ ದೇಶದ ಹಿತದೃಷ್ಟಿಯಿಂದ ಹೇಳುವುದಿಲ್ಲ. ನಿಮ್ಮಲ್ಲಿ ಗೋಮಾಳ ಜಮೀನಿನಲ್ಲಿ ಒಂದು ಹುಲ್ಲುಕಡ್ಡಿಯೂ ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಪದೇಪದೇ ಮೇದರೆ ಹುಲ್ಲು ಕಡ್ಡಿ ಎಲ್ಲಿರುತ್ತದೆ ?

ಇನ್ನು ಹೈದರಾಬಾದ್ ಪ್ರದೇಶದಿಂದ ಬಂದಿರತಕ್ಕ ಮಾನ್ಯ ಸದಸ್ಯರು ಹರಿಜನರಿಗೆ ಲಾವಣಿಯ ಆಧಾರದ ಮೇಲೆ ಅಂದರೆ ಗೇಣಿಯ ಆಧಾರದ ಮೇಲೆ ಭೂಮಿಯನ್ನು ಕೊಡಬೇಕೆಂದು ಅಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ಕೊಟ್ಟಿದ್ದೇವೆ. ಎಲ್ಲೆಲ್ಲಿ ಹರಿಜನರಿಗೆ ಲಾವಣಿಯ ಆಧಾರದ ಮೇಲೆ ಭೂಮಿಯನ್ನು ಕೊಡಬೇಕೋ ಅದನ್ನು ತಪ್ಪಿಸಬಾರದು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಅವರಿಗೆ ಭೂಮಿಯನ್ನು ಖಾಯಂ ಆಗಿ ಕೊಡಬೇಕೆಂದು ಅಧಿಕಾರಿಗಳಿಗೆ ಎರಡನೆಯ ಸೂಚನೆ ಕೊಟ್ಟಿದೆ.

ಇನ್ನು ಶ್ರೀಮಾನ್ ಮೊಹಸಿನ್‌ರವರು ಬ್ಯಾಕ್‌ವರ್ಡ್ ಕ್ಲಾಸ್ ಲಿಸ್ಟ್ ವಿಚಾರ ಹೇಳಿದರು. ಡಾ॥ ನಾಗನಗೌಡ ಕಮಿಟಿಯವರ ಅಂತಿಮ ವರದಿ ಸರ್ಕಾರದ ಮುಂದೆ ಬಂದಾಗ ಮಾನ್ಯ ಸದಸ್ಯರ ಸಲಹೆಗಳನ್ನು ಪರಿಶೀಲನೆ ಮಾಡುತ್ತೇವೆ. ಶ್ರೀ ಮೊಹಸಿನ್‌ರವರು ಮತ್ತೊಂದು ಮಾತನ್ನು ಹೇಳಿದರು. ಮುಸಲ್ಮಾನರ ಸದಸ್ಯರು ಏಕೋ ಒಂದು ವಿಧವಾದ ಅನುಮಾನದ, ಸಂಶಯದ ಮನೋಭಾವನೆಯನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ಅದು ಸರ್ವಥಾ ಸರಿಯಾದದ್ದಲ್ಲ. ಅವರ ವಿಷಯದಲ್ಲಿ ನಮಗೆ ಪೂರ್ಣ ಸಹಾನುಭೂತಿ ಇದೆ. ಅದರಲ್ಲಿಯೂ ಇತರ ಜನಗಳಿಗೂ, ಮುಸಲ್ಮಾನರಿಗೂ ಯಾವ ರೀತಿಯಾದಂಥ ಭೇದ ಭಾವ ಇಟ್ಟಿಲ್ಲ. ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಸಂಬಂಧಿಸಿದ ಸಿವಿಲ್ ಲಿಸ್ಟನ್ನು ನೋಡಿದರೆ ಎಷ್ಟು ಜನ ಮುಸಲ್ಮಾನರು ಅಧಿಕಾರಿಗಳಾಗಿದ್ದಾರೆಂಬುದು ಚೆನ್ನಾಗಿ ವ್ಯಕ್ತವಾಗುತ್ತದೆ.

ಶ್ರೀ ಪಿ. ಜಿ. ಸಿದ್ಧಾಂತಿ (ಮುದ್ದೆಬಿಹಾಳ್).—ಸಿವಿಲ್ ಲಿಸ್ಟ್ ನಮಗೆ ಬರುವುದೇಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಿವಿಲ್ ಲಿಸ್ಟ್‌ಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುತ್ತದೆ ಎಂದು ಹಿಂದೆ ಹೇಳಿದ್ದರು. ಆದರೂ ಇದುವರೆಗೆ ಏತಕ್ಕೋಸ್ಕರ ಸಪ್ಲೈ ಮಾಡಲಿಲ್ಲವೋ, ಗೊತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಈ ಸಾರಿ ಅದನ್ನು ಪರಿಶೀಲನೆ ಮಾಡುತ್ತೇವೆ. ಇನ್ನು ಪೋಡಿ ಮತ್ತು ಮ್ಯೂಟೇಷನ್ ಕೇಸುಗಳು ಬಹಳವಾಗಿ ಅಕ್ಯುಮಲೇಟ್ ಆಗಿವೆಯೆಂದು ಹೇಳಿದ್ದಾರೆ. ಅದು ನಿಜ. ಇನ್ನು ಶ್ರೀಮಾನ್ ನರಸಿಂಹೇಗೌಡರು ಮಂತ್ರಿಗಳ ಮೇಲೆ ಬಂದಿರತಕ್ಕ ಅಪಾದನೆಗಳ ಮೇಲೆ ಒಂದು ಟ್ರಿಬ್ಯೂನಲ್ ಮಾಡಬೇಕು ಎಂದು ಹೇಳಿದರು. ಅಂತಹ ಹೀನಕೃತ್ಯಗಳನ್ನು ಮಂತ್ರಿಗಳೇನೂ ಮಾಡಲಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಹೀನಕೃತ್ಯಗಳು ಅಂದರೆ ಹೇಗೆ ?

ಶ್ರೀ ಕಡಿದಾಳ್ ಮಂಜಪ್ಪ.—ದೇಶದ ಹೊರಗಡೆಯವರ ವಿಚಾರದಲ್ಲಿ ಚೆನ್ನಾಗಿ ತಿನ್ನುವವರನ್ನು ತಿಂದು ತೇಗುವವರನ್ನು ಕುರಿತು ಯಾರೂ ಮಾತನಾಡುವುದಿಲ್ಲ. ಯಾರಾದರೂ ಸಭ್ಯರು ಇದ್ದರೆ, ಅವರಮೇಲೆ ಇಲ್ಲದಸಲ್ಲದ ಆರೋಪಣೆ ಹೊರಿಸಿ ಅದಕ್ಕೆ ಒಂದು ಟ್ರಿಬ್ಯೂನಲ್ ಮಾಡಬೇಕು ಎಂದು ಹೇಳುವುದು ಸರಿಯಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಬರೀಯ ಮಂತ್ರಿಗಳ ಮೇಲಲ್ಲ. ಇತರರಮೇಲೂ ಹೇಳಿದ್ದೇನೆ.

ಶ್ರೀ ಕಡಿದಾಳ್ ಮಂಜಪ್ಪ.—ಈ ಜಾಗದಲ್ಲಿಯೇ ಅಂಟಿಕೊಂಡಿರಬೇಕು ಎಂಬುದು ನನ್ನ ಉದ್ದೇಶವಲ್ಲ.

ಇನ್ನು ಶ್ರೀಮಾನ್ ಆಲೂರು ಹನುಮಂತಪ್ಪನವರು ಪೋಡಿ ಮತ್ತು ಮ್ಯುಟೇಷನ್ ಕೇಸುಗಳು ಇನ್ನೂ ಇತ್ಯರ್ಥವಾಗದ ಬಹಳವಾಗಿ ಪೆಂಡಿಂಗ್ ಆಗಿವೆ ಎಂದು ಹೇಳಿದರು. ಬಹಳ ಸಂಖ್ಯೆಯಲ್ಲಿ ಇವೆ ಎಂದು ಹೇಳಿದರು. ಆದುದರಿಂದ ಸರ್ಕಾರದವರು ಆದಷ್ಟು ಜಾಗ್ರತೆ ಅವನ್ನು ತೀರ್ಮಾನಮಾಡುತ್ತಾರೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಈ ವಿಷಯವನ್ನು ಸುಮಾರು ಮೂರು ವರ್ಷಗಳಿಂದಲೂ ಹೇಳುತ್ತಿದ್ದೇವೆ. ನೀವೂ ಸಹ ಆ ಕಾರ್ಯಮಾಡುತ್ತಿದ್ದೇವೆ ಎಂದು ಹೇಳುತ್ತಲೇ ಇದ್ದೀರಿ.

ಶ್ರೀ ಕಡಿದಾಳ್ ಮಂಜಪ್ಪ.—ಬರೀಯ ಹೇಳುತ್ತಾ ಇಲ್ಲ. ಕಾರ್ಯ ಸಾಧನೆಯನ್ನು ಮಾಡಿದ್ದೇವೆ. ನಮ್ಮ ಆಫೀಸುಗಳಿಗೆ ಬಂದರೆ ಹೇಳುತ್ತೇನೆ. ನಮ್ಮಲ್ಲಿ ಈಗ ಸರ್ವೆಯರುಗಳ ಅಭಾವವಿದೆ. ಕ್ಯಾಡಸ್ಟ್ರಲ್ ಸರ್ವೆ, ರಿಕ್ಲಾಸಿಫಿಕೇಷನ್-ಆಫ್—ಸರ್ವೆ ಕೆಲಸವಾಗಬೇಕು. ಈಗಾಗಲೇ 300 ಜನ ಸರ್ವೆಯರುಗಳಿಗೆ ಟ್ರೈನಿಂಗ್ ಕೊಟ್ಟಿದೆ. ಅನೇಕ ಪ್ರಾಜೆಕ್ಟುಗಳಾಗಬೇಕಾಗಿ ಇರುವ ಸ್ಥಳಗಳಲ್ಲಿರತಕ್ಕ ಜಮೀನನ್ನು ಸರ್ವೆಮಾಡಬೇಕು. ಅಮೃತ್‌ಮಹಲ್ ಕಾವಲ್ ಜಮೀನನ್ನು ಸರ್ವೆಮಾಡಬೇಕು. ಅದರ ಜೊತೆಯಲ್ಲಿ ಪೋಡಿ, ಮ್ಯುಟೇಷನ್ ಕೇಸುಗಳನ್ನೂ ಸಹ ತೀರ್ಮಾನ ಮಾಡಬೇಕು. ಸುಮಾರು 20 ವರ್ಷಗಳಿಂದ ಕೆಲವು ಕೇಸುಗಳು ಪೆಂಡಿಂಗ್ ಆಗಿವೆ. ಆ ವಿಷಯ ಶ್ರೀಮಾನ್ ಪುಟ್ಟಣ್ಣ ಮತ್ತು ಶ್ರೀಮಾನ್ ಮಲ್ಲಾರಾಧ್ಯ ಅಂತಹವರಿಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಟಿ. ಮರಿಯಪ್ಪ (ಹಣಕಾಸಿನ ಇಲಾಖೆಯ ಮಂತ್ರಿಗಳು).—ಏಕೆಂದರೆ ಅವರೂ ಸಹ ಹೀಗೆಯೇ ಅರಿಯರ್ಸ್‌ನ್ನು ಅಕ್ಯೂಮುಲೇಟ್ ಮಾಡಿಕೊಂಡೇ ಇಲ್ಲಿಗೆ ಬಂದಿದ್ದಾರೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಸರ್ವೆ ಟ್ರೈನಿಂಗ್ ಪಾಸ್‌ಮಾಡಿಕೊಂಡಿರುವವರು ಇದ್ದರೂ, ಇನ್ನೂ ಅಪಾಯಿಂಟ್‌ಮೆಂಟುಗಳನ್ನು ಕೊಟ್ಟಿಲ್ಲ. ಅಪಾಯಿಂಟ್‌ಮೆಂಟುಗಳು ಖಾಲಿ ಇದ್ದರೂ ಇನ್ನೂ ನೇಮಕ ಮಾಡಿಲ್ಲ.

Sri KADIDAL MANJAPPA.—I am going to appoint everybody. ಆದರೆ ಕೆಲವು ಅಧಿಕಾರಿಗಳ ಸಂಬಳಸಾರಿಗೆಗಳಲ್ಲಿ ಏರುಪೇರು ಇರುವಾಗ ಸರ್ಕಾರದ ಅಧಿಕಾರಿಗಳಲ್ಲಿ ಈಗ ಸ್ವಲ್ಪ ಅಸಮಾಧಾನವಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಪೂರ್ತಿ ಇದೆ.

ಶ್ರೀ ಕಡಿದಾಳ್ ಮಂಜಪ್ಪ.—ಇದೆ. ಖಂಡಿತವಾಗಿ ಅದು ನಿಜ. ಆದರೆ ನಮ್ಮ ಹೊರ ರಾಷ್ಟ್ರಗಳಾದ ರಷ್ಯಾ, ಚೀನಾ ದೇಶಗಳನ್ನು ತೆಗೆದುಕೊಂಡರೆ, ಅಲ್ಲಿ ಸಂಬಳಸಾರಿಗೆಗಳ ಏರುಪೇರು 20 ರಷ್ಟು ಇದೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ. ಆದರೂ ಅಂಥಾದ್ದನ್ನು ಕಡಮೆಮಾಡಲಿಕ್ಕೆ ಪ್ರಯತ್ನಮಾಡುತ್ತಿದ್ದೇವೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ಯಾವ ಕಾಲಕ್ಕೆ ಮಾಡುತ್ತೀರೋ!

ಶ್ರೀ ಕಡಿದಾಳ್ ಮಂಜಪ್ಪ.—1957ರಲ್ಲಿ ಪೇ-ಸ್ಕೇಲ್ಸ್ ರಿವೈಜ್ ಆದಾಗ ಸ್ವಲ್ಪಮಟ್ಟಿಗೆ ಈ ಏರುಪೇರುಗಳನ್ನು ಕಡಮೆಮಾಡಿದ್ದೇವೆ. ಈ ಬಗ್ಗೆ ನಮ್ಮ ಸರ್ಕಾರದ್ದು ಒಂದೇ ಅಲ್ಲ. ಕೇಂದ್ರ ಸರ್ಕಾರದ ಕೈವಾಡವೂ ಇದೆ.

Sri J. B. MALLARADHYA.—That is your trump card.

Sri KADIDAL MANJAPPA.—It is not a trump card. It is a fact. We cannot make the pay scales of all officials uniform, whether they are I.A.S., I.P.S. or otherwise. ಈಗ ಸಂಬಳದಲ್ಲಿ ಬಡನೌಕರರಿಗೆಂದು ಐದು ರೂಪಾಯಿಗಳನ್ನು ಏರಿಸಿದ್ದೇವೆ.

ಇನ್ನೊಂದು ವಿಷಯ ; ಒಬ್ಬ ಸದಸ್ಯರು ಮಂತ್ರಿಗಳು ಅವರ ಜಾತಿಯವರನ್ನೇ ಆಪ್ತಕಾರ್ಯದರ್ಶಿಯನ್ನಾಗಿ ನೇಮಕಮಾಡಿಕೊಳ್ಳುತ್ತಿದ್ದಾರೆಂದು ಹೇಳಿದರು. ಕೆಲವರಲ್ಲಿ ಮಾತ್ರ ಆರೀತಿ ಆಕ್ಸಿಡೆಂಟಲ್ಲಾಗಿ ಆಗಿರಬಹುದು. ಆದರೆ ಮಂತ್ರಿಗಳೆಲ್ಲಾ ಆರೀತಿ ಮಾಡುತ್ತಿದ್ದಾರೆಂದರೆ ಅದು ತಪ್ಪುಭಾವನೆ. ಶ್ರೀಮಾನ್ ಜತ್ತಿಯವರ ಆಪ್ತಕಾರ್ಯದರ್ಶಿ ಲಿಂಗಾಯತರಲ್ಲ. ನನ್ನ ಆಪ್ತಕಾರ್ಯದರ್ಶಿ ಒಕ್ಕಲಿಗನಲ್ಲ. ಡಾ॥ ಹೆಗ್ಗಡೆಯವರ ಆಪ್ತಕಾರ್ಯದರ್ಶಿಯೂ ಬೇರೆ ಜಾತಿಯವರು, ಶ್ರೀ ಕೆ. ಎಫ್. ಪಾಟೀಲ ಅವರ ಆಪ್ತಕಾರ್ಯದರ್ಶಿ ಜಾತಿಯೂ ಬೇರೆ—ಹೀಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರವರ ಜಾತಿಯವರು ಇಲ್ಲದೇ ಇರುವುದನ್ನು ಹೇಳುತ್ತೀರೇ ಹೊರತು ಇರತಕ್ಕವರ ಹೆಸರುಗಳನ್ನು ಹೇಳಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಒಟ್ಟಿನಲ್ಲಿ ಯಾವ ಕಾರ್ಯದರ್ಶಿಯಲ್ಲಿ ಟ್ರಸ್ಟ್, ನಂಬಿಕೆ, ಇರುತ್ತದೋ ಅವರನ್ನು ಇಟ್ಟುಕೊಳ್ಳುತ್ತಾರೆ. ಎಲ್ಲೋ ಕೆಲವು ಸಂದರ್ಭಗಳಲ್ಲಿ ಅವರ ಜಾತಿಯವರನ್ನೇ ಇಟ್ಟುಕೊಂಡಿರಬೇಕು. ಇದರಲ್ಲಿ ಯಾವ ಮತ ಭೇದವೂ ಇಲ್ಲ.

ಇನ್ನು ಶ್ರೀಮಾನ್ ಸಿದ್ಧಾಂತಿಯವರು ತಮ್ಮ ಕಡೆಗಳಲ್ಲಿ ಸಾಮಾನು ಸರಂಜಾಮುಗಳ ಬೆಲೆಯ ಏರುಪೇರು ವಿಷಯದಲ್ಲಿ ಸರ್ಕಾರ ಏನೂ ಮಾಡಿಲ್ಲ. ಬೆಲೆಗಳ ಏರಿಕೆ ವಿಷಯದಲ್ಲಿ ಯಾವ ಕಂಟ್ರೋಲನ್ನೂ ಮಾಡಿಲ್ಲ ಮತ್ತು ಅಭಾವ ಪ್ರದೇಶಗಳಲ್ಲಿ ಕೂಲಿಗಾರರಿಗೆ ಕೊಡತಕ್ಕ ಕೂಲಿ ದರವನ್ನು ವಿಪರೀತ ಕಡಮೆ ಮಾಡಿದ್ದಾರೆ. ಇವನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಈ ಎರಡು ವಿಚಾರಗಳನ್ನು ಸರ್ಕಾರದವರು ಜಾಗ್ರತೆಯಾಗಿ ಪರಿಶೀಲನೆಮಾಡಿ ತಕ್ಕ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಂದು ನಾನು ಹೇಳುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಎ. ಎಸ್. ಪಾಟೀಲ್ ಅವರು ಅಕ್ವಿಸಿಷನ್ ಕೇಸುಗಳು ಹೇರಳವಾಗಿ ಪೆಂಡಿಂಗ್ ಇದೆ ಎಂದು ಹೇಳಿದರು. ನಿಜ. ಈಗತಾನೆ ಅರಿಕೆ ಮಾಡಿಕೊಂಡ ಹಾಗೆ, ಸೆಕ್ರೆಟೇರಿಯಟ್‌ನಲ್ಲಿ ಸ್ಪೆಷಲ್ ಸ್ಟ್ಯಾಫ್ ಇತ್ತೀಚೆಗೆ ನೇಮಕಮಾಡಿದ್ದೇವೆ. ಕೇವಲ ಕೆಲವು ತಿಂಗಳುಗಳೊಳಗೇ ತೀರ್ಮಾನಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದೇವೆ.

ಯೂನಿಫಾರಂ ಲ್ಯಾಂಡ್ ರೆವಿನ್ಯೂ ಕೋಡನ್ನು ತಯಾರುಮಾಡಬೇಕೆಂದು ಹೋದ ವರ್ಷ ಯೋಚನೆ ಮಾಡಿದ್ದೆವು. ಯೂನಿಫಾರಂ ಬಿಲ್‌ಪಾಸ್ ಆಗಿ ಕಾನೂನಾದನಂತರ ಅದು ಮಾಡುವುದು ಸೂಕ್ತವಾದದ್ದು ಎಂದು ಯೋಚನೆಮಾಡಿ ಅದನ್ನು ಅಲ್ಲಿಗೆ ಹಿಂತೆಗೆಬಿಟ್ಟಿದ್ದೇವೆ. ರೀ ಸೆಟ್ಲ್‌ಮೆಂಟ್ ಕೆಲಸ ಬಹಳ ತಡವಾಗಿ ಆಗುತ್ತಾ ಇದೆ ಎಂದು ಆರ್ಥಿಕ ಸಚಿವರೇ ಹೇಳಿದ್ದಾರೆ ಅದು ಅರ್ಥವಾಗುವುದಿಲ್ಲ ಎಂದು ಶ್ರೀಮಾನ್ ಎ. ಎಸ್. ಪಾಟೀಲ್ ಅವರು ಹೇಳಿದರು,

ರೀ ಸೆಟ್ಲ್‌ಮೆಂಟ್ ಕೆಲಸ. In the very nature of things it is a slow process. ಬೆಳಗಾವಿ್ ಡಿವಿಜನ್‌ನಲ್ಲಿ ಒಂದು ವರ್ಷದೊಳಗೆ ಪೂರೈಸುತ್ತೇವೆ. ಹಳೆಯ ಮೈಸೂರು ಪ್ರದೇಶದಲ್ಲಿ ಇನ್ನು ಮೂರು ವರ್ಷ ಬೇಕಾಗಬಹುದು. ಅಧಿಕಾರಿಗಳು ಸ್ಥಳ ಪರಿಶೀಲನೆಮಾಡಬೇಕು. ಕೆಲವು ಕಡೆಗಳಲ್ಲಿ crop cutting experiment ಮಾಡಬೇಕು, crop ಇಲ್ಲದೇ ಇದ್ದರೆ ಬರುವವರೆಗೂ ಕಾಯಬೇಕು. ನಿಧಾನವಾಗಿ ಕೆಲಸಮಾಡಬೇಕಾಗುತ್ತದೆ. ಹಳೆಯ ಮೈಸೂರಿನಲ್ಲಿ ಕನಿಷ್ಠಪಕ್ಷ ಮೂರು ವರ್ಷಗಳಾದರೂ ಬೇಕಾಗುತ್ತದೆ.

ಶ್ರೀಮಾನ್ ಪಟ್ಟಣ್ ಅವರು ರಾಮದುರ್ಗ ತಾಲ್ಲೂಕು ಸಾಲಹಳ್ಳಿ ಗ್ರಾಮದ ಜಮೀನು ಅಕ್ವಿಸಿಷನ್ ಕೇಸಿನ ಸಂಬಂಧದಲ್ಲಿ ನಾನು ಸರಿಯಾಗಿ ವರ್ತಿಸಿಲ್ಲ ಎಂದು ಹೇಳಿ ಅಪ್ಪಣೆ ಕೊಡಿಸಿದರು. ಈ ಜಮೀನು ಒಬ್ಬ ಖಾಸಗೀ ವ್ಯಕ್ತಿಗೆ ಸೇರಿತ್ತು. ಅದರಲ್ಲಿ ಮೂರು ಎಕರೆಯನ್ನು ಒಂದು ಪಾಠಶಾಲೆಗೆ ಮತ್ತು ದವಾಖಾನೆಗೆ ಅಕ್ವೈರ್ ಮಾಡಿಕೊಳ್ಳಬೇಕೆಂದು ಪ್ರಪೋಸಲ್ ಬಂತು ; ಪಂಚಾಯತಿ ಅವರು ತೀರ್ಮಾನ ಮಾಡಿದರು. ಅಮೇಲೆ ರೆವಿನ್ಯೂ ಅಸಿಸ್ಟೆಂಟ್ ಕಮೀಷನರ್ ಅವರು ಆ ಮೂರು ಎಕರೆ ಪ್ರದೇಶ ಬೇಕಾಗಿಲ್ಲ, ಅದರಲ್ಲಿ ಎರಡು ಎಕರೆ 20 ಗುಂಟೆ ಸಾಕು, ಇನ್ನು ಉಳಿದ 20 ಗುಂಟೆ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಪ್ರಾರಂಭವಾಗುವುದಕ್ಕೆ ಮುಂಚೆಯೇ ಮಾರಾಟಮಾಡಿದ್ದಾರೆ, ಜಮೀನು ಕ್ರಯಕ್ಕೆ ತೆಗೆದುಕೊಂಡವನು ಮನೆ ಕಟ್ಟುವುದಕ್ಕೆ ಶುರುಮಾಡಿದ್ದಾನೆ, ಆದ್ದರಿಂದ 20 ಗುಂಟೆ ಬಿಡಬಹುದು ಎಂದು ಮೂರು ಕಾಗದಗಳನ್ನು ಬರೆದಿದ್ದಾರೆ. ಅದನ್ನು ತಮ್ಮ ಮುಂದೆ ಓದುತ್ತೇನೆ :—

I have promised to read the report. This is the report dated 6th April 1959 from the Assistant Commissioner :

"The Tahsildar, Ramdrug, has now reported that 10 applicants have purchased plots about three years back, measuring about half an acre out of S. No. 25/1 of Budnur, proposed for acquisition for constructing their residential houses and that they have made all arrangements to erect their houses. They have also applied for N.A. permission. As such they request that half an acre may be withdrawn from acquisition jurisdiction and that they may be allowed to construct their houses. It is also reported by the Circle Inspector that the land owner has no objection to acquire only 2 acres 20 guntas leaving 20 guntas out of acquisition jurisdiction......"

Letter dated 5th May 1959.

"Office of the Assistant Commissioner, Bailhongal.

...............But I have already requested you under this office letter No. even dated 6th April 1959 to accord sanction for notification of 2 acres 20 guntas instead of 3 acres."

Another letter dated 25th October 1959 from the Assistant Commissioner.

"Proposals under section 6 of the Land Acquisition Act for notifying the area of 2 acres and 20 guntas and withdrawal notification in respect of 20 guntas of S. No. 25-1 Part of Budnur as village in Ramdrug Taluka of the Belgaum District were submitted to the Secretary in L.S.G. and P.H. Department under this office No. even dated 3rd July 1959. From 1st July 1959 all work connecting land acquisition is being dealt in the Revenue department of the Secretariat, and as such the case might have been received in the Revenue Department from Local Self-Government and Public Department.

"The Sarpanch V.P.C. Salhalli has requested the Divisional Commissioner, Belgaum, under his letter No. 70 of 1959-60, dated 27th September 1959, to acquire the whole area of 3 acres. The said application is forwarded to me for disposal by the Divisional Commissioner, Belgaum. My predecessor has already submitted his detailed report on 6th April 1959 as to why 20 guntas of land is to be excluded from the acquisition jurisdiction. I do not find the request of the V.P.C. to be genuine."

ಇದರ ಮೇಲೆ ಸರ್‌ಪಂಚ್ ಅವರು ಅರ್ಜಿ ಹಾಕಿದರು. ಶ್ರೀಮಾನ್ ಪಟ್ಟಣ್ ಅವರೂ ನನ್ನ ಹತ್ತಿರ ಎರಡು ಮೂರು ಬಾರಿ ಬಂದರು. ಇನ್ಸ್‌ಪೆಕ್ಷನ್‌ಮಾಡಿ ನೋಡುತ್ತೇನೆ ಎಂದು ಹೇಳಿದೆ. ಬೆಳಗಾಂ ಜಿಲ್ಲೆಗೆ ನಾನು ಹೋಗತಕ್ಕ ಸಂದರ್ಭ ಇರಲಿಲ್ಲ. ನನ್ನ ಸ್ನೇಹಿತರಾದ ಡೆಪ್ಯುಟಿ ಮಿನಿಸ್ಟರ್ ನಾಗನೂರ್ ಅವರು ಹೋಗಿ ನೋಡಿಕೊಂಡು ಬಂದು, ತೊಂದರೆ ಏನಾದರೂ ಇದೆಯೇ, ಗ್ರಾಮಪಂಚಾಯಿತಿಯವರು ಏನು ಹೇಳುತ್ತಾರೆ, ಅಧಿಕಾರಿಗಳು ಏನು ಶಿಫಾರಸು ಮಾಡಿದ್ದಾರೆ ಎಂಬುದನ್ನೆಲ್ಲಾ ನೋಡಿ, ಸ್ಥಳ ಪರಿಶೀಲನೆಮಾಡಿ ಶಿಫಾರಸು ಮಾಡಿದರು. ಅದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಒಬ್ಬರು ಅಲ್ಲ, ಇಬ್ಬರು ಅಸಿಸ್ಟೆಂಟ್ ಕಮೀಷನರು 2 ಎಕರೆ 20 ಗುಂಟೆ ಮಾತ್ರ

(ಶ್ರೀ ಕಡಿದಾಳ್ ಮಂಜಪ್ಪ)

ಅಕ್ವೈರ್ ಮಾಡಿಕೊಂಡರೆ ಸಾಕು ಎಂದು ಶಿಫಾರಸು ಮಾಡಿದ್ದಾರೆ. ಅವರು ಹೇಳಿದ್ದನ್ನು ಡೆಪ್ಯುಟಿ ಮಿನಿಸ್ಟರು ಒಪ್ಪಿಕೊಂಡಿದ್ದಾರೆ. ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಮಾನ್ಯ ಸಭೆಗೆ ಈ ರಿಪೋರ್ಟನ್ನು ಹೇಳಿದ್ದೇನೆ. ಇದರಿಂದ ಏನು ಆಗಿದೆ. ಏನು ಮಾಡಬಾರದ ಅಚಾತುರ್ಯ ಮಾಡಿದ್ದೇವೆ ಎಂಬುದನ್ನು ತಾವು ಪರಿಶೀಲನೆಮಾಡಬೇಕು.

ಆಮೇಲೆ ಆಖೈರಾಗಿ, ಮುಖ್ಯ ಮಂತ್ರಿಗಳ ಗೈರು ಹಾಜರಿಯಲ್ಲಿ ಶ್ರೀ ವರ್ಮಾ ಪಟ್ವಣ್ ಅವರು ಕೆಲವು ಆರೋಪಣೆಗಳನ್ನು ಮಾಡಿದ್ದಾರೆ. ಅದು ಅವರಿಗೆ ಗೊತ್ತಿದೆ, ಆದುದರಿಂದ ಅದಕ್ಕೆ ಅವರೇ ಜವಾಬು ಕೊಡಬಹುದು. ಆದರೆ ಒಂದು ಮಾತನ್ನು ಶ್ರೀ ಪಟ್ವಣ್ ಅವರಿಗೆ ಮತ್ತು ಮಾನ್ಯ ಸಭೆಗೆ ಹೇಳುತ್ತೇನೆ. ಶ್ರೀ ವರ್ಮಾ ಜತ್ತಿ ಅವರನ್ನು ಎರಡು ವರ್ಷಗಳಿಂದ ನೋಡುತ್ತಾ ಇದ್ದೇನೆ. ಶ್ರೀ ವರ್ಮಾ ಪಟ್ವಣ್ ಅವರು ಹೇಳಿದರಲ್ಲಾ ಅಂತಹ ಕಾರ್ಯವನ್ನು ಮಾಡತಕ್ಕ ಮನೋಭಾವ ಇವರಲಿಲ್ಲ ಎಂದು ಅಷ್ಟು ಮಾತ್ರ ಹೇಳಬಲ್ಲೆ. ಮಾನ್ಯ ಸದಸ್ಯರನೇಕರು ಆಯವ್ಯಯದ ಪಟ್ಟಿಯ ಮೇಲೆ ಮಾತನಾಡುವಾಗ ಬಹಳ ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ. ಆ ಸಲಹೆಗಳನ್ನು ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಂಡು ಸೂಕ್ತ ಕ್ರಮ ಕೈಕೊಳ್ಳುತ್ತಾರೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ನರಸಿಂಹೇಗೌಡ —ಎಕ್ಸ್ ಅಫಿಷಿಯೋ ರಿಜಿಸ್ಟ್ರೇಷನ್‌ನಿಂದ ಬಹಳ ಲೀಕೇಜ್ ಆಗುತ್ತದೆ. ಜನಗಳಿಗೆ ತೊಂದರೆಯಾಗುತ್ತದೆ. ಪಕ್ಕಾ ರಿಜಿಸ್ಟ್ರಾರ್ ಅಫೀಸು ಮಾಡಬೇಕೆಂದು ಹೇಳಿದೆ. ಆ ವಿಚಾರ ಹೇಳಲಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನೆನಪಿನಲ್ಲಿ ಇದೆ. ಪರಿಶೀಲನೆಮಾಡುತ್ತೇನೆ.

Sri H. M. CHANNABASAPPA (Minister for Public Works and Electricity).—Sir, at the outset I must thank the Hon'ble Members of this House for having welcomed the budget speech of the Hon'ble Finance Minister.

2 P.M.

ಶ್ರೀಮತಿ ಸುಶೀಲಾಬಾಯಿ ಹೀರ ಚಂದ್ ಷಾ (ಬಾಗೇವಾಡಿ).—ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಹೇಳಿದರೆ ನಮಗೆಲ್ಲಾ ತಿಳಿಯುತ್ತದೆ. ದಯವಿಟ್ಟು ಅವರು ಕನ್ನಡದಲ್ಲಿ ಮಾತನಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. ಈಗ ಕನ್ನಡದಲ್ಲಿ ಹೇಗೆ ಮಾತನಾಡಲು ಬರುತ್ತದೆ. ಇಂಗ್ಲೀಷನಲ್ಲಿ ಪ್ರಾರಂಭಿಸಿದ ಮೇಲೆ ಅದೇ ಭಾಷೆಯಲ್ಲಿ ಭಾಷಣ ಮುಂದುವರಿಸಬೇಕಾಗುತ್ತದೆ.

Sri H. M. CHANNABASAPPA.—If the Chair permits I will speak in Kannada.

ಅಧ್ಯಕ್ಷರು.—ಮಾತನಾಡಬಹುದು.

†ಶ್ರೀ ಎಚ್. ಎಂ. ಚನ್ನಬಸಪ್ಪ.—ಮಾನ್ಯ ಅಧ್ಯಕ್ಷರೆ, ನಮ್ಮ ಅರ್ಥ ಸಚಿವರು ಮಂಡಿಸಿರತಕ್ಕ ಆಯವ್ಯಯ ಪಟ್ಟಿಯ ವಿಷಯದಲ್ಲೂ ಅವರು ಮಾಡಿದ ಭಾಷಣದ ವಿಷಯದಲ್ಲೂ ಅನೇಕ ಮಾನ್ಯ ಸದಸ್ಯರು ಮಾತನಾಡುವಾಗ ಇದಕ್ಕೆ ಸ್ವಾಗತಕೊಟ್ಟು ಭಾಷಣ ಮಾಡಿದ್ದಾರೆ. ಮಾನ್ಯ ಅರ್ಥ ಸಚಿವರು ಒದಗಿಸಿರತಕ್ಕಂಥ ಅಂಕಿ ಅಂಶಗಳು ಎಲ್ಲರಿಗೂ ಕೂಡ ತಿಳಿಯುವಂತೆ ಇವೆ, ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿ ದೇಶದ ಮುಂದೆ ಇಟ್ಟಿದ್ದಾರೆ ಎಂದು ಅನೇಕ ಸದಸ್ಯರು ಹೇಳಿದ್ದಾರೆ. ಇದಕ್ಕಾಗಿ ಅವರನ್ನು ವಂದಿಸತಕ್ಕಂಥಾದ್ದು ನನ್ನ ಮೊದಲನೆಯ ಕರ್ತವ್ಯ. ಅನೇಕ ಮಾನ್ಯ ಸದಸ್ಯರು ಭಾಷಣ ಮಾಡುವಾಗ ಒಳ್ಳೆಯ ಸದುದ್ದೇಶದಿಂದ ರಚನಾತ್ಮಕ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಇಂಥ ರಚನಾತ್ಮಕ ಸಲಹೆಗಳಿಗಾಗಿ ಅವರನ್ನು ಅಭಿನಂದಿಸಬೇಕಾದುದು ನನ್ನ ಪ್ರಥಮ ಕರ್ತವ್ಯ. ರಾಜ್ಯದಾಡಳಿತೆಯ ವಿಷಯದಲ್ಲಿ ಅನೇಕರು ಟೀಕೆ ಟಿಪ್ಪಣಿಗಳನ್ನು ಮಾಡಿ, ಕೆಲಸ ಕಾರ್ಯಗಳ, ನಡವಳಿಕೆಯ ವಿಷಯದಲ್ಲಿ ಯಶಸ್ವಿಯಾಗಿ ನಡೆಯುವ ರೀತಿಯಲ್ಲಿ ಅನೇಕ ಟೀಕೆಗಳನ್ನು ಮಾಡಿದ್ದಾರೆ. ನಾವು ಮಾಡುತ್ತಾ ಇರತಕ್ಕ ಕೆಲಸಗಳು ಎಲ್ಲಾ ಭಾಗದಲ್ಲೂ ಸರ್ವ ಸಮರ್ಪಕವಾಗಿ ಇದೆ ಎಂದು ನಾನಾದರೂ ಸಹ ಹೇಳುವುದಿಲ್ಲ. ನಾವು ನಿರೀಕ್ಷಣೆ ಮಾಡಿದ ಹಾಗೆ ಒಂದು ಮಟ್ಟವನ್ನು ಮುಟ್ಟಲಿಕ್ಕೆ ನಾವು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಮತ್ತು ನಾವು ಯಶಸ್ವಿಯಾಗಿ ಇದನ್ನು ಮಾಡುತ್ತಿದ್ದೇವೆ. ಎಂದು ಖಚಿತವಾಗಿ ಹೇಳುತ್ತೇನೆ. ನಾವು ಈ ದೇಶದ ಪ್ರಗತಿಯನ್ನು ಒಂದು ರಾತ್ರಿಯಲ್ಲಾಗಲಿ ಒಂದು ದಿನದಲ್ಲಾಗಲಿ ಸಾಧನೆ ಮಾಡುವುದು ಸಾಧ್ಯವಿಲ್ಲ.

ಈ ದೇಶದ ಭವಿಷ್ಯವನ್ನು ನಾನಾ ಕ್ಷೇತ್ರಗಳಲ್ಲಿ ನಾನಾ ರೀತಿಯಲ್ಲಿ ರೂಪಿಸಬೇಕಾಗಿದೆ ಅದಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಆ ಕಾರ್ಯಕ್ರಮಕ್ಕೆ ಅನುಗುಣವಾಗಿ ಕೆಲಸ ಮಾಡಿದರೆ ಅದು ಸಾಧ್ಯ. ಈ ರೀತಿಯಲ್ಲಿ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆಯೇ ಆ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸುತ್ತಿದ್ದೇವೆಯೇ ಇಲ್ಲವೇ ಎಂಬುದನ್ನು ಈ ಸಭೆ ಪರಿಶೀಲನೆ ಮಾಡತಕ್ಕದ್ದು. ನಾವು ಕೊಟ್ಟಿರುವ ಕೇವಲ ಅಂಕಿ ಅಂಶಗಳನ್ನಷ್ಟೇ ಪರಿಶೀಲನೆ ಮಾಡಬೇಕೆಂದು ನಾವು ಹೇಳುವುದಿಲ್ಲ. ದೇಶದಲ್ಲಿ ನಡೆದಿರತಕ್ಕ ಕೆಲಸಗಳನ್ನು ಕಣ್ಣಿನಿಂದ ನೋಡಿ ಅಂಕಿ ಅಂಶಗಳನ್ನು ನೋಡಿ ಕೆಲಸ ಕಾರ್ಯಗಳು ಸಮರ್ಪಕವಾಗಿ ನಡೆದಿವೆಯೇ ಇಲ್ಲವೇ ಎಂಬುದನ್ನು ತಿಳಿದು ಕೊಂಡು, ಟೀಕೆ ಟಿಪ್ಪಣಿಗಳನ್ನು ಮಾಡಬೇಕು. ಮುಖ್ಯವಾಗಿ ಕೆಲವು ಮಾನ್ಯ ಸದಸ್ಯರು ರಾಜ್ಯದಾಡಳಿತೆಯಲ್ಲಿ ಅನೇಕ ಪ್ರಗತಿದಾಯಕ ಕೆಲಸಗಳು ಕುಂಠಿತವಾಗಿವೆ, ಏನೇನೂ ಕೆಲಸ ನಡೆಯುತ್ತಿಲ್ಲ, ದೇಶದ ಅಭಿವೃದ್ಧಿ ಕಾರ್ಯಗಳು, ದೇಶದ ಬೆಳವಣಿಗೆಯು ಎಲ್ಲವೂ ಹಠಾತ್ತಾಗಿ ನಿಂತು ಹೋಗಿವೆ ಎಂದು ಕೆಲವರು ಮಾತನಾಡಿದ್ದಾರೆ. ಮತ್ತು ಕೆಲವರು ಏನೋ ಕೆಲಸ ನಡೆಯುತ್ತಿದೆ ಆದರೆ ಸಮರ್ಪಕವಾಗಿ ನಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಮತ್ತು ಕೆಲವು ಸದಸ್ಯರು ನಾವು ಹಾಕಿ ಕೊಂಡಿರತಕ್ಕಂಥ ಕಾರ್ಯಕ್ರಮದಲ್ಲಿ ಯೋಜನೆಗಳಲ್ಲಿ ಬರುವ ಅಡ್ಡಿ ಆತಂಕಗಳನ್ನು ಸರಿಪಡಿಸಿಕೊಂಡು ಹೋಗುವುದಕ್ಕೆ ಒಂದು ರೀತಿಯ ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ. ಈ ರೀತಿ ಮೂರು ಬಗೆಯಾಗಿ ಟೀಕೆ ಟಿಪ್ಪಣಿಗಳನ್ನು ವಿಂಗಡಿಸಬಹುದು. ಅಭಿವೃದ್ಧಿ ಕಾರ್ಯಗಳಲ್ಲಿ ಬಹುಭಾಗ ಹಣವನ್ನು ಖರ್ಚು ಮಾಡಬೇಕೆಂದು ಕೆಲವರು ಹೇಳಿದ್ದಾರೆ. ದೇಶದಲ್ಲಿ ಈ ಇಲಾಖೆಯ ಮೂಲಕ ನಾನಾ ಭಾಗಗಳಲ್ಲಿ 30 ಕೋಟಿ ರೂಪಾಯಿ ವೆಚ್ಚಮಾಡತಕ್ಕಂಥ ಕೆಲಸಗಳು ನಡೆಯುತ್ತಾ ಇವೆ. ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳು ನಡೆಯುತ

ಕ್ಕಂಥ ಬಗೆ ಹೇಗೆ ಇದೆ, ಇದರಲ್ಲಿ ಕೆಲಸ ಕಾರ್ಯಗಳು ನೀತಿ ನಿಯಮಗಳಿಗೆ ಅನುಗುಣವಾಗಿ ನಡೆಯುತ್ತಾ ಇವೆಯೋ ನಿರೀಕ್ಷಣೆಗೆ ಅನುಗುಣವಾಗಿ ಪ್ರಗತಿ ನಡೆದಿದೆಯೋ ಎನ್ನತಕ್ಕಂಥ ಅಂಶಗಳನ್ನು ಸದಸ್ಯರು ವಿಚಾರ ಮಾಡಬೇಕು. ಮತ್ತು ಆನಂತರ ಅಭಿಪ್ರಾಯ ವ್ಯಕ್ತಪಡಿಸಬೇಕು ಎಂಬುದು ಅಷ್ಟೇ ನನ್ನ ಅಭಿಪ್ರಾಯ. ಈ ಇಲಾಖೆಯಲ್ಲಿ ಪ್ರತಿ ವರ್ಷ ಎಷ್ಟೆಷ್ಟು ಹಣ ಖರ್ಚಾಗುತ್ತಿದೆ ಎಂಬುದಕ್ಕೆ ತಮಗೆ ಅಂಕಿ ಅಂಶಗಳನ್ನು ಕೊಟ್ಟರೆ ರಾಜ್ಯದ ಕೆಲಸ ಕಾರ್ಯಗಳಲ್ಲಿ ಲೋಕೋಪಯೋಗಿ ಇಲಾಖೆಯು ವರುಷ ವರುಷಕ್ಕೆ ಹೆಚ್ಚು ಪ್ರಮಾಣದಲ್ಲಿ ದಕ್ಷತೆಯಿಂದ ಕೆಲಸ ಮಾಡುತ್ತಿವೆ ಎಂಬುದು ಗೊತ್ತಾಗುತ್ತದೆ. 1947 48 ನೆಯ ಇಸವಿಯ ಡೆವಲಪ್‌ಮೆಂಟ್ ಪ್ರೋಗ್ರಾಂ ಪ್ರಕಾರ ಮಾಡಬೇಕಾಗಿರುವ ಮೈನರ್ ಇರಿಗೇಷನ್ ವಿಷಯದಲ್ಲಿ ಅನೇಕ ಮಾನ್ಯ ಮಿತ್ರರು ಮಾತನಾಡುವಾಗ ಮನಸ್ಸಿಗೆ ನೋವು ಉಂಟಾಗುವ ಹಾಗೆ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಅದಕ್ಕಾಗಿ ನಾನು ಪಶ್ಚಾತ್ತಾಪ ಪಡುತ್ತೇನೆ. ಆದರೆ ನನಗೆ ಆಗ್ರಹ ವಿಲ್ಲ. ವಿಷಯದ ಮಾಹಿತಿ ಏನಿದೆ ಎಂಬುದನ್ನು ಅರಿಯದೆ ಇಂಥ ಅಭಿಪ್ರಾಯಗಳನ್ನು ಅವರು ವ್ಯಕ್ತ ಮಾಡಿದರು. ಅದಕ್ಕೆ ಪಶ್ಚಾತ್ತಾಪ ಪಡಬೇಕಾಗಿದೆ. ಅವರು ಈ ವಿಷಯವನ್ನು ನ್ಯಾಯಾಗಿ ತಿಳಿದುಕೊಂಡು ಮಾತನಾಡಿದರೆ ಅದು ಯೋಗ್ಯವಾಗುತ್ತದೆ ಎಂದು ಇಷ್ಟು ಮಾತ್ರ ನಾನು ತಿಳಿಸುತ್ತೇನೆ.

ಈ ಮೈನರ್ ಇರಿಗೇಷನ್ ವಿಚಾರದಲ್ಲಿ 1957-58 ರಲ್ಲಿ 102 ಲಕ್ಷ 82 ಸಾವಿರ ರೂಪಾಯಿ ಖರ್ಚು ಆಗಿದೆ 1958-59 ರಲ್ಲಿ 151.54 ಲಕ್ಷರೂಪಾಯಿ ಖರ್ಚಾಗಿದೆ. ಈವರ್ಷ, ಅಂದರೆ 1959-60ರಲ್ಲಿ 151 ಲಕ್ಷ ರೂಪಾಯಿಗಳ ಮೇಲೆ 7-8 ಲಕ್ಷ ರೂಪಾಯಿ ಖರ್ಚಾಗುವ ನಿರೀಕ್ಷೆಯಿದೆ. ಅದು 159 ಲಕ್ಷ ರೂಪಾಯಿವರೆಗೆ ಹೋಗಬಹುದು ಎಂಬ ನಿರೀಕ್ಷೆ ಇದೆ. ಇಷ್ಟು ಹಣ ಖರ್ಚು ಮಾಡತಕ್ಕಂಥ ಈ ಇಲಾಖೆಯು ಹಣವನ್ನು ಸದ್ವಿನಿಯೋಗ ಮಾಡಿದೆಯೋ ದುರ್ವಿನಿಯೋಗವಾಗಿದೆಯೋ ಎಂಬುದು ಅದೊಂದು ಮುಖ್ಯವಾದ ಪ್ರಶ್ನೆ. ರಾಷ್ಟ್ರದಲ್ಲಿ ಈ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಸದ್ವಿನಿಯೋಗವಾಗಬೇಕಾದರೆ ಹೇಗೆ ಮಾಡಬೇಕು ಏನೇನು ಮಾಡಬೇಕು, ಎಷ್ಟೆಷ್ಟು ಕಾರ್ಯಕ್ರಮಗಳನ್ನು ಹಾಕಬೇಕು, ಹೇಗೆ ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ನಾನು ಬಹಳ ಧೈರ್ಯವಾಗಿ ಹೇಳಬಲ್ಲೆನು. ಅಲ್ಲೊಂದು ಇಲ್ಲೊಂದು ಲೋಪ ದೋಷಗಳು ಇರಬಹುದು. ಅವನ್ನು ನಾವೂ ನೀವೂ ಸರಿಪಡಿಸಬೇಕಾಗಿದೆ. ಅದು ಒಬ್ಬರಿಗೇನೇ ಸಾಧ್ಯವಿಲ್ಲ. ಒಂದು ಕಡೆ ಒಂದು ಕೆರೆ ಒಂದು ಕಟ್ಟೆ ತೆಗೆದುಕೊಳ್ಳದೇ ಹೋಗಿರ ಬಹುದು. ಅದಕ್ಕೆ ಬೇಕಾದಷ್ಟು ಕಾರಣಗಳಿರುತ್ತವೆ. ಒಂದು ಕಡೆ ಹಳ್ಳವಿರುವದಿಲ್ಲ, ಅಂಥಲ್ಲಿ ಕೆರೆ ಕಟ್ಟಲು ಕಷ್ಟ. ಒಂದು ಕಡೆ ಕೆಲಸಗಾರರು ಸಿಕ್ಕುವುದಿಲ್ಲ, ಅಂಥಲ್ಲಿ ಕೆಲಸ ಕುಂಠಿತವಾಗುತ್ತದೆ. ಹೀಗೆ ನಾನಾ ರೀತಿಯಲ್ಲಿ ನಾನಾ ಕಾರಣಗಳ ಮೂಲಕ ಒಂದೊಂದು ಕಡೆ ಹೆಚ್ಚು ಒಂದು ಕಡೆ ಸ್ವಲ್ಪ ಕಡಿಮೆ ನಡೆಯುತ್ತದೆ. ಎಲ್ಲ ಕಡೆಗೂ ಸರ್ವತೋಮುಖವಾಗಿ ಬೆಳವಣಿಗೆಯಾಗಬೇಕು ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಆಜ್ಞೆ ಮಾಡಿದ್ದೇವೆ. ಅದರ ಮೇಲೆ ಮಳೆಯಿಲ್ಲದ ಅಭಾವ ಪ್ರದೇಶದಲ್ಲಿ ಒಂದು ರೂಪಾಯಿಯಷ್ಟು ಉತ್ಪತ್ತಿ ಬಂದರೂ ಸಹ ಕೆಲಸವನ್ನು ಕೈಕೊಳ್ಳಬೇಕು ; ಕೆಲವು ಕಡೆಗೆ ಎರಡು ರೂಪಾಯಿ ಉತ್ಪತ್ತಿ ಬಂದರೂ ಸಾಕು ಎಂದು ಆಜ್ಞೆ ಮಾಡಿದ್ದೇವೆ. ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆದು ದೇಶದ ಪ್ರಗತಿ ಸಾಧನೆಯಾಗುವದಕ್ಕೆ ಬಜೆಟ್ಟಿನಲ್ಲಿ 137 ಲಕ್ಷ ರೂಪಾಯಿ ಹೆಚ್ಚಿಗೆ ಒದಗಿಸಲಾಗಿದೆ. ಶಕ್ತಿ ಇದ್ದಷ್ಟು ಖರ್ಚು ಮಾಡಬೇಕೆಂದು ಆಜ್ಞೆಯನ್ನು ಬರವಣಿಗೆಯಲ್ಲಿ ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ದೇಶದ ಒಳ್ಳೆಯ ಕೆಲಸಗಳಿಗೆ ಎಷ್ಟುಬೇಕಾದರೂ ಕೊಡುವುದಕ್ಕೆ ಸಿದ್ಧ, ಅವು ಆಗಬೇಕಾದದ್ದು ಅಗತ್ಯ ಎಂದು ಮಾನ್ಯ ಹಣಕಾಸಿನ ಸಚಿವರು ಹೇಳಿದ್ದಾರೆ. ಅದು ನನ್ನ ಮನಸ್ಸಿಗೆ ಬಹಳ ಆನಂದವನ್ನುಂಟು ಮಾಡಿತ್ತು. ಆದರೆ ನೆನ್ನೆ ಮಾನ್ಯ ಮಹಿಳಾ ಸದಸ್ಯರು ಅವರ ಮೇಲೆ ಕಟುವಾಗಿ ಟೀಕೆ ಮಾಡಿ ಅರ್ಥ ಸಚಿವರು ಕಾರ್ಯಕ್ರಮಗಳಿಗೆಲ್ಲಾ ಅಡ್ಡಿ ಮಾಡಿದ್ದಾರೆ ಎಂದು ಹೇಳಿರುವುದು ಬಹಳ ಸಂತಾಪವನ್ನುಂಟು ಮಾಡಿದೆ. ಮಾನ್ಯ ಆರ್ಥಿಕ ಸಚಿವರು ನನಗೆ ಕೊಟ್ಟಿರುವ ಭರವಸೆಗಾಗಿ ಅವರಿಗೆ ತಮ್ಮೆಲ್ಲರ ಪರವಾಗಿ ಮತ್ತು ದೇಶದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾದದ್ದು ಸಹಜವಾದುದು ಮತ್ತು ಅಗತ್ಯವಾದುದು.

ಮೈನರ್ ಇರಿಗೇಷನ್ ವಿಷಯ ಮಾತನಾಡುವಾಗ ಗುಂಡಲುಪೇಟೆ ತಾಲ್ಲೂಕಿನ ಮಹಿಳಾ ಸದಸ್ಯರು ಹೇಳಿದ ಮಾತು ಬಹಳವಾಗಿ ಮನಸ್ಸಿಗೆ ನೋವನ್ನುಂಟು ಮಾಡಿದೆ. ಆ ವಿಷಯವನ್ನು ಹೋದ ಅಸೆಂಬ್ಲಿಯಲ್ಲೇ ಪ್ರಸ್ತಾಪ ಮಾಡಿದ್ದೆ. ಅದು ಒಡಗಟ್ಟಿ ವಿಷಯ. ಹಿಂದೆ ಹೇಳಿದ ಇದರ ವಿಷಯವನ್ನು ಅದೇ ರೀತಿಯಲ್ಲಿ ಪುನಃ ಈ ಸಭೆಯಲ್ಲ ಹೇಳಬೇಕೆಂದರೆ ಅದು ಪುನರುಚ್ಚಾರವಾಗುತ್ತದೆಯೇ ಹೊರತು ಮತ್ತೇನೂ ಇಲ್ಲ. ಪುನಃ ಅಷ್ಟು ಹೇಳಲು ಈ ಸಭೆಯ ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಒಡಗಟ್ಟಿಯ ಬ್ರೀಚ್ ಆಗಿರುವ ಕೆರೆ. ಅದನ್ನು ಜೀರ್ಣೋದ್ಧಾರ ಮಾಡಿದರೆ 90 ಎಕರೆ ನೀರಾವರಿ ಯಾಗುತ್ತದೆಂದು ವರದಿಯಾಗಿದೆ. 32 ಎಕರೆ ತರಿ ಜಮೀನು ಮುಳುಗಡೆಯಾಗುತ್ತದೆಂದು ವರದಿಯಾಗಿದೆ. ಅದನ್ನು ತಪ್ಪಿಸಲು ಇನ್ನೇನೂ ಮಾಡಲು ಸಾಧ್ಯವಿಲ್ಲವೆ ಎಂದು ಪ್ರಶ್ನೆಮಾಡಿದೆ. ಪಿಕಪ್ ಮಾಡಿದರೆ ಮುಳುಗಡೆ ಯಾಗುವ ಪ್ರದೇಶ ಕಡಮೆ ಯಾಗಬಹುದೆ, ಪರಿಶೀಲಿಸಿ ಎಂದು ಹೇಳಿದೆ. ಆ ಬಗ್ಗೆ ವರದಿ ಈಗ ಬಂದಿದೆ. ಪಿಕಪ್ ಹಾಕಿದರೆ 40 ಎಕರೆ ತರಿಯಾಗುತ್ತದೆ, ಮುಳುಗಡೆಯಾಗುವುದಿಲ್ಲ ಎಂದು ತಿಳಿದು ಬಂದಿದೆ. ಅದರ ಅನುಕೂಲತೆ ವಿಚಾರ ಮಾಡಿ ಸರ್ಕಾರ ಆಜ್ಞೆ ಮಾಡುತ್ತದೆ, ಹೀಗಿರುವಾಗ ಒದಗಟ್ಟಿ ಕೆಲಸ ನಿಲ್ಲಿಸಿದ್ದಾರೆಂದು ಹೇಳಿರುವುದು ಸರಿಯಲ್ಲ. ಯಾವತ್ತು ವಿಧಾನ ಸೌಧದಲ್ಲಿರುವ ನಮ್ಮ ಆಫೀಸಿಗೆ ಬಂದರೂ, ಯಾವ ವೇಳೆಯಲ್ಲಿ ಮಾನ್ಯ ಸದಸ್ಯರು ಬಂದರೂ ಬೇಕಾದ ವಿಷಯವನ್ನೊದಗಿಸುವುದಕ್ಕೆ ನಾನು ಸಿದ್ಧವಾಗಿರುವಾಗ, 'ಈ ವಿಷಯ ಏಕೆ ನಿಲ್ಲಿಸಿದ್ದೀರಿ' ಎಂದು ಕೇಳಿದ್ದರೆ ಉತ್ತರ ಕೊಡಬಹುದಾಗಿತ್ತು. ಈ ಸಭೆಯ ಮುಂದೆ ಅದನ್ನು ಹೇಳುವುದು ಅನಗತ್ಯವಾಗಿತ್ತು. ಈ ವಿಚಾರದಲ್ಲಿ ಹೋದ ಅಧಿವೇಶನದಲ್ಲಿ ಈ ಸಭೆಯಲ್ಲಿ ಕೊಟ್ಟ ಉತ್ತರ ಅಚ್ಚಾಗಿ ಬಂದಿದೆ.

ಎರಡನೆಯದಾಗಿ ಕಮರಹಳ್ಳಿ ಕೆರೆ ಪ್ರಾಜೆಕ್ಟ್ ಫೀಸಿಬಲ್ ಅಲ್ಲವೆಂದು ಹೇಳಿದರು. ಒಂದು ವೇಳೆ ಹಾಗೆ ಹೇಳುವುದಕ್ಕೆ ಅವರಿಗೇ ಶಕ್ತಿಯಿದ್ದರೆ ನಾವು ಇಂಜನಿಯರುಗಳನ್ನು ಕೇಳಬೇಕಾಗಿಯೇ ಇರಲಿಲ್ಲ. ಈಗ ಇಂಜನಿಯರ ಅಭಾವವೂ ಇದೆ. ಮಾನ್ಯ ಸದಸ್ಯರಿಗೆ ಇಂಜನಿಯರಿಂಗ್ ಇಲಾಖೆ ಕೊಡುವ ಸಲಹೆಯನ್ನು ಕೊಡಲು ಶಕ್ತಿಯಿದ್ದರೆ ಅವರ ಸಲಹೆಯನ್ನು ಪಡೆದು ನಾವು ಕೆಲಸ ಮಾಡಬೇಕಾಗಿದೆ. ಆ ಪ್ರಾಜೆಕ್ಟ್ feasible ಎಂದು ಗೊತ್ತಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ನಾನು ಇಂಜನಿಯರ ಮಗಳು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಸಂಕೋಷ. ಮತ್ತಳಾಪುರ ಪ್ರಾಜೆಕ್ಟ್ ಕಟ್ಟಬೇಕೆಂದು ಹಿಂದೆ ಒಂದು ಯೋಜನೆಯಿತ್ತು. ಅದರ 130 ಎಕರೆ ತೋಟ ಮುಳುಗುತ್ತದೆಂದು ಆ ಪ್ರಾಜೆಕ್ಟ್ ಬಿಡಬೇಕಾಯಿತು. ಆದರೆ ನೀರಿನ ಅನುಕೂಲವಿರುವುದನ್ನು ಹೇಗೆ ಉಪಯೋಗಿಸಿಕೊಳ್ಳಬಹುದು, ಉಪನದಿಗೆ ಅಣೆಕಟ್ಟು ಹಾಕಿ ಒಂದಕ್ಕೆ ಬದಲಾಗಿ ಎರಡು ಕಟ್ಟೆ ಹಾಕಿದರೆ ಅನುಕೂಲವಾಗಬಹುದೆ ಪರಿಶೀಲಿಸಿ ಸಲಹೆ ನೀಡಬೇಕೆಂದು ಇಂಜನಿಯರುಗಳಿಗೆ ತಿಳಿಸಿದಮೇಲೆ ಯೋಗ್ಯ ಕಂಡ ರೀತಿಯಲ್ಲಿ ಯೋಜನೆ ಮಂಜೂರು ಮಾಡಿ ಕಾರ್ಯನಡೆಯುತ್ತಿದೆ. ಅದನ್ನು ಅನ್ಯಥಾ ಭಾವಿಸಿ feasible ಅಲ್ಲ ಎಂದು ಹೇಳಿದರೆ ಹೇಗೆ? ಚೀಫ್ ಇಂಜನಿಯರು feasible ಎಂದು ಹೇಳಿದ ಮೇಲೆ feasible ಅಲ್ಲವೆಂದು ಹೇಳಿದರೆ ಯಾರ ಮಾತನ್ನು ಕೇಳಬೇಕು?

ಕಮರಹಳ್ಳಿ ಪ್ರಾಜೆಕ್ಟಿನ ಶಂಕುಸ್ಥಾಪನೆಯನ್ನು ನಾನು ಮಾಡುವಾಗ ಆಹ್ವಾನಪತ್ರಿಕೆ ಮಾನ್ಯ ಸದಸ್ಯರಿಗೆ ಒಂದು ದಿವಸದ ಮೇಲೆ ಹೋಯಿತೆಂದು ಕೇಳಿ ಪಶ್ಚಾತ್ತಾಪವಾಯಿತು. ಅವರು ಸ್ಥಳದವರಾದ್ದರಿಂದ ಅದು ಸಕಾಲದಲ್ಲಿ ತಲಪಬೇಕಾಗಿತ್ತು. ಮೂರನೆಯ ತಾರೀಖು ಚಾಮರಾಜನಗರದಲ್ಲಿ ಪೋಸ್ಟ್ ಮಾಡಿದ್ದಾರೆ ಅದೇ ದಿವಸ ಮೈಸೂರಿನಲ್ಲಿ ಅವರ ಮನೆಗೆ ಜವಾನರು ಇನ್ವಿಟೇಷನ್ ತೆಗೆದುಕೊಂಡು ಹೋಗಿ ಕೊಟ್ಟಿದ್ದಾರೆ. ಒಂದುವೇಳೆ ಅಕಸ್ಮಾತ್ ಅವರಿಗೆ ತಲಪದೆ ಇರಬಹುದು. ಬೇರೆ ಯಾವುದಾದರೂ ಕಾರಣದಿಂದ ಹಾಗೆ ತಲಪದೆ ಇದ್ದರೆ ವಾಸ್ತವವಾಗಿ ಅದಕ್ಕೆ ವಿಷಾದಪಡಬೇಕಾಗಿದೆ. ಇನ್ನು ಅವರ ವಿಷಯದಲ್ಲಿ ಹೆಚ್ಚು ಹೇಳಬೇಕಾದ್ದಿಲ್ಲ.

ಮೈನರ್ ಇರಿಗೇಷನ್ ವಿಷಯದಲ್ಲಿ ನಿನ್ನೆಯ ದಿವಸ ಮಾನ್ಯ ಮಿತ್ರರಾದ ಶ್ರೀ ಎಂ. ಪಿ. ಪಾಟೀಲ್‌ರವರು 11 ಸಾವಿರ ಕೆರೆಗಳ ಕೆಲಸ ಕಾರ್ಯವನ್ನು ತಕ್ಷಣ ಮಾಡಲಿಲ್ಲವೆಂದು ಆಗ್ರಹ ಪೂರ್ವಕವಾಗಿ ಹೇಳಿದರು. ಅನನುಭವಶಾಲಿಗಳು ಆ ಮಾತು ಹೇಳಬಹುದು. ಆಗ ಅನುಭವವಿಲ್ಲ ಎಂದು ಸುಮ್ಮನಿರಬಹುದು. ಆದರೆ ಸಂಪೂರ್ಣ ಅನುಭವವಿದ್ದು, ಹಲವಾರು ವರ್ಷಗಳು ಮಂತ್ರಿಗಳಾಗಿ, ರಾಜಕಾರಣಿಗಳಾಗಿರುವವರು ಹಾಗೆ ಹೇಳಿ, ದಕ್ಷತೆಯಿಂದ ಸರ್ಕಾರ ಕೆಲಸ ಮಾಡಿಲ್ಲವೆಂದು ಹೇಳಿದ ಮೇಲೆ, ಅವರು ಅವರ ಕಾಲದಲ್ಲಿ ಎಷ್ಟು ಕೆಲಸ ಮಾಡಿದರೆಂದು ಲೆಕ್ಕ ನೋಡಬೇಕಾಗುತ್ತದೆ. ಇದು ಸರಿಯಲ್ಲ. ಮೈನರ್ ಇರಿಗೇಷನ್ ಕೆಲಸ ಎಷ್ಟು ವೇಗದಲ್ಲಿ ನಡೆಯುತ್ತಿದೆಯೆಂಬುದು ಅವರಿಗೆ ಗೊತ್ತಿದೆ. It is a very uncharitable criticism.

ನಂಜನಗೂಡಿನ ಶ್ರೀ ಚನ್ನಸ್ವಾಮಿಯವರು ಕಿರಗುಂದಕೆರೆಗೆ ಬಜೆಟ್ ಪ್ರಾವಿಷನ್ ಮಾಡಿಲ್ಲ ಎಂದು ಹೇಳಿದರು. ಅದಕ್ಕೆ ಒಂದು ಲಕ್ಷ 20 ಸಾವಿರ ರೂಪಾಯಿ ಮಂಜೂರಾಗಿ ಕೆರೆ ಕೆಲಸ ಆಗುತ್ತಿದೆ.

ಎಳಂದೂರು ತಾಲ್ಲೂಕಿನಲ್ಲಿ 30 ಕೆರೆಗಳ ಜೀರ್ಣೋದ್ಧಾರವಾಗಬೇಕೆಂದು ಶ್ರೀಮತಿ ಕೆಂಪಮ್ಮನವರು ಹೇಳಿದರು. ಈಗಾಗಲೆ ಆ ಬಗ್ಗೆ ಮಾಡಬೇಕಾದ ಕೆಲಸಕ್ಕೆ ಅಂದಾಜಾಗುತ್ತಿದೆ. ಸುಮಾರು 9–10 ಲಕ್ಷ ರೂಪಾಯಿಗಳು ಆ ಕೆಲಸ ಮಾಡಲು ಬೇಕಾಗುತ್ತದೆ.

ಶ್ರೀ ವೈ. ಮಂಜಯ್ಯ ಶೆಟ್ಟಿ.—ಮಾನ್ಯ ಸದಸ್ಯರು ಮಾತನಾಡುವಾಗ ಅವರವರ ಕ್ಷೇತ್ರದಲ್ಲಿ ಯಾವ ಯಾವ ಕೆಲಸಗಳು ಆಗಿಲ್ಲವೆಂದು ತಿಳಿಸಿದರೋ ಅವನ್ನೆಲ್ಲ ಮಾಡಲಾಗುತ್ತದೆ ಎಂಬ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡುತ್ತಿದ್ದಾರೆ. ಎಷ್ಟೋ ಸದಸ್ಯರು ಅವರವರ ಕ್ಷೇತ್ರದಲ್ಲಿ ಆಗಬೇಕಾದ ಕೆಲಸಗಳ ವಿಷಯದಲ್ಲಿ ಮಾನ್ಯಮಂತ್ರಿಗಳಿಗೆ ಅನೇಕಸಾರಿ ಬಿನ್ನೈಸಿಕೊಂಡಿದ್ದಾರೆ. ಈ ಕೆಲಸಗಳಿಗೂ ಅದೇ ರೀತಿ ಗಮನ ಕೊಡುತ್ತಾರೆಯೋ ಇಲ್ಲವೋ ಎಂದು ತಿಳಿಯ ಬಯಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹಾಲಾಡಿ, ಗುಜ್ಜೂರು ಇವುಗಳ ಹತ್ತಿರ ಆಗಬೇಕಾದ ಕಾರ್ಯ ಪರಿಶೀಲನೆಯಾಗುತ್ತಿದೆ. ಉತ್ತಮವಾಗಿ ಕಂಡುಬಂದ ಪಕ್ಷದಲ್ಲಿ ಅವನ್ನು ತೆಗೆದುಕೊಳ್ಳುತ್ತೇವೆ. ಅಧಿಕಾರವನ್ನು ವಿಕೇಂದ್ರೀಕರಣ ಮಾಡಿ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುವುದಕ್ಕಾಗಿ ಚೀಫ್ ಇಂಜಿನಿಯರ್ ಅವರಿಂದ ಹಿಡಿದು ಅಸಿಸ್ಟೆಂಟ್ ಇಂಜಿನಿಯರ್‌ವರೆಗೆ ಅಧಿಕಾರಗಳನ್ನು ಕೊಟ್ಟಿದ್ದೇವೆ. ಬರೀ ಅಂದಾಜು ಮಂಜೂರು ಮಾಡತಕ್ಕದ್ದು ಮಾತ್ರವಲ್ಲ, ಟೆಂಡರ್ ಮಂಜೂರು ಮಾಡುವುದು, ಪುನರ್ವಿಮರ್ಶಿತ ಅಂದಾಜುಗಳನ್ನು ಮಂಜೂರು ಮಾಡುವುದು, ಹೀಗೆ ನಾನಾ ರೀತಿಯಲ್ಲಿ ಅಧಿಕಾರವನ್ನು ವಿಕೇಂದ್ರೀಕರಣಮಾಡಿ, ಕೆಲಸ ಸುಸೂತ್ರವಾಗಿ ನಡೆಯಲು ಇಚೆಗೆ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ಇದಲ್ಲದೆ ದೇಶಾದ್ಯಂತ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದು ಸಬ್‌ಡಿವಿಷನ್ ಇರಬೇಕು, ಎನ್ನುವ ಮೂಲ ತತ್ವವನ್ನು ಒಪ್ಪಿಕೊಂಡಿದ್ದೇವೆ. ಯಾವ ಯಾವ ಡಿವಿಷನ್‌ನಲ್ಲಿ 35 ಲಕ್ಷ ರೂಪಾಯಿಗಿಂತ ಹೆಚ್ಚಿಗೆ ಇರುತ್ತದೆ ಅಲ್ಲಿ ಬೇರೆ ಒಂದು ಡಿವಿಷನ್ ಇರತಕ್ಕದ್ದು ಎಂದು ತೀರ್ಮಾನ ತೆಗೆದುಕೊಂಡು ಜಾರಿಗೆ ಕೊಟ್ಟಿದ್ದೇವೆ. ಬೆಂಗಳೂರು, ತುಮಕೂರು, ಗುಲ್ಬರ್ಗ, ರಾಯಚೂರು ಇಂಥ ದೊಡ್ಡ ದೊಡ್ಡ ಜಿಲ್ಲೆಗಳಲ್ಲಿ ಇನ್ನು ಹೆಚ್ಚು ಡಿವಿಷನ್ ಮಾಡಬೇಕೆಂಬ ವಿಷಯವನ್ನು ಪರಿಶೀಲನೆ ಮಾಡುತ್ತಿದ್ದೇವೆ. ಈಗ ಬೆಂಗಳೂರಿಗೆ ಆದ್ಯತೆ ಕೊಟ್ಟಿದ್ದೇವೆ. ಇತರ ಡಿಸ್ಟ್ರಿಕ್ಟ್‌ಗಳ ವಿಚಾರ ಪರಿಶೀಲನೆಯಲ್ಲಿದೆ.

ಇನ್ವೆಸ್ಟಿಗೇಷನ್ ಡಿವಿಷನ್‌ಅವರು ಈಗಾಗಲೇ ಸುಮಾರು 392 ಪ್ರಾಜೆಕ್ಟ್‌ಗಳನ್ನು ಕೈಗೆ ತೆಗೆದುಕೊಂಡು 64ನ್ನು ಪೂರ್ತಿಮಾಡಿ ಅಂದಾಜುಗಳನ್ನು ತಯಾರು ಮಾಡಿದ್ದಾರೆ. ಸುಮಾರು 89 ಫೈಲ್‌ಗಳು ಪೂರ್ತಿಯಾಗುವುದರಲ್ಲಿವೆ. ಇನ್ನು 239 ಉಳಿದಿವೆ. ಜೀಪ್‌ಗಳಿಲ್ಲವೆಂದು ಒಬ್ಬ ಸದಸ್ಯರು ಆಕ್ಷೇಪಣೆ ಮಾಡಿದರು. ಇಂಥ ವಿಷಯಗಳನ್ನೆಲ್ಲ ಏಕೆ ಇಲ್ಲಿ ಹೇಳುತ್ತಾರೆಂದು ನನಗೇ ಆಶ್ಚರ್ಯವಾಗುತ್ತದೆ. ಜೀಪ್‌ಗಳು ಇವೆಯೋ ಇಲ್ಲವೋ ಎಂದು ನನ್ನನ್ನು ಕೇಳಿದ್ದರೆ ಹೇಳುತ್ತಿದ್ದೆ. ಇಲ್ಲಿಗೆ ಬಂದು ಈ ಮಾನ್ಯ ಸಭೆಯಲ್ಲಿ ಜೀಪ್‌ಗಳನ್ನು ಕೊಟ್ಟಿಲ್ಲ, ಕೆಲಸ ನಡೆಯುತ್ತಿಲ್ಲವೆಂದು ಹೇಳಿದವರಿಗೆ ತಿಳಿಸುತ್ತೇನೆ, ಮೈಸೂರು ಇನ್ವೆಸ್ಟಿಗೇಷನ್ ಸರ್ಕಲ್ ಒಂದರಲ್ಲೇ ಮೇಜರ್ ಇರಿಗೇಷನ್ನಿಗೆ ಮೂರು ಮತ್ತು ಮೈನರ್ ಇರಿಗೇಷನ್ನಿಗೆ ಎಂಟು, ಒಟ್ಟು ಹನ್ನೊಂದು ಜೀಪ್‌ಗಳು ಕೆಲಸ ಮಾಡುತ್ತಿವೆ. ಹೀಗಿರುವಾಗ ಈ ವಿಷಯವನ್ನು ಇಲ್ಲಿ ಏಕೆ ತಿಳಿಸಿದರು ಎಂದು ಮನಸ್ಸಿಗೆ ಬಹಳ ವ್ಯಥೆಯಾಗುತ್ತದೆ. ಈ ಸಂದರ್ಭದಲ್ಲಿ ನಾನು ತಮ್ಮೆಲ್ಲರಲ್ಲಿಯೂ ಅರಿಕೆ ಮಾಡಿಕೊಳ್ಳುವುದಿಷ್ಟೆ. ಯಾವ ವಿಷಯದಲ್ಲಿ ಯಾವ ಮಾಹಿತಿಯನ್ನು ಯಾವ ಕಾಲದಲ್ಲಿ ಬೇಕಾದರೂ ಕೂಡ ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಆದರೆ ವಿಷಯಗಳನ್ನು ತಿಳಿದುಕೊಂಡು ಮಾತನಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ತಿಪಟೂರು, ಚಿಕ್ಕ ನಾಯ್ಕನಹಳ್ಳಿ, ಗುಬ್ಬಿ, ತುರುವೇಕೆರೆ, ಇವಕ್ಕೆ ಒಂದು ಜೀಪ್ ಕೊಟ್ಟು ಅದನ್ನು ಮಧುಗಿರಿಗೆ......

ಶ್ರೀ ಎಚ್. ಎಂ. ಚನ್ನಬಸಪ್ಪ.—ಜೀಪ್‌ಗಳನ್ನು ಎಲ್ಲರಿಗೂ ಕೊಡಬೇಕೆಂಬ ಇಚ್ಛೆಯಿದ್ದರೂ ಜೀಪ್‌ಗಳು ನಮ್ಮಲ್ಲಿಲ್ಲ ಮತ್ತು ಕೊಂಡುಕೊಳ್ಳಬೇಕಾದರೂ ಸಿಕ್ಕುವುದಿಲ್ಲ. ಆ ವಿಷಯವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ದೇಶದ ಮೂಲೆ ಮೂಲೆಯಲ್ಲಿಯೂ ಇರತಕ್ಕ ಸಣ್ಣ ಪುಟ್ಟ ಕುಂದುಕೊರತೆಗಳನ್ನು ನೇರವಾಗಿ ಬಂದು ನನಗೆ ತಿಳಿಸಿದರೆ ಅದನ್ನು ಸರಿಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ.—ನಾಲ್ಕು ತಾಲ್ಲೂಕುಗಳಿಗೆ ಒಂದು ಜೀಪ್ ಕೊಟ್ಟಿದ್ದೀರಿ. ಅದನ್ನು ಮಧುಗಿರಿ ತಾಲ್ಲೂಕಿನಲ್ಲಿ ಉಪಯೋಗಿಸಿಕೊಳ್ಳ ಎಂದು ಮಾನ್ಯಮಂತ್ರಿಗಳು oral order ಕೊಟ್ಟರು. ಅಲ್ಲಿಂದೀಚೆಗೆ ಈ ವಾಹನವು ಮಧುಗಿರಿಯಿಂದ ಇತರ ತಾಲ್ಲೂಕುಗಳಿಗೆ ಬರುವುದು ನಿಂತು ಹೋಗಿದೆ. ಈ ವಿಷಯದಲ್ಲಿ ಒಂದು ಪ್ರಶ್ನೆಯನ್ನು ಕಳಿಸಿದ್ದೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದಿಷ್ಟೆ; ಯಾವ ಕ್ಷೇತ್ರದಲ್ಲಿಯೇ ಆಗಲಿ, ಏನಾದರೂ ಕುಂದು ಕೊರತೆಗಳಿದ್ದರೆ ಯಾವಾಗ ಯಾವ ಕಾಲದಲ್ಲಿ ಬಂದು ತಿಳಿಸಿದರೂ ಸಾಧ್ಯವಾದಷ್ಟೂ ಪರಿಶೀಲನೆ ಮಾಡುತ್ತೇನೆಂದು ಮಾತ್ರ ಹೇಳುತ್ತೇನೆ.

Major and medium irrigation ಗಾಗಿ 1957-58ನೆಯ ಸಾಲಿನಲ್ಲಿ 489 ಲಕ್ಷ ರೂಪಾಯಿ ಖರ್ಚಾಗಿದೆ, 1958-59 ರಲ್ಲಿ 554 ಲಕ್ಷ ರೂಪಾಯಿ ಖರ್ಚಾಯಿತು, ಈ ವರ್ಷ 680 ಲಕ್ಷ ರೂಪಾಯಿಗಳನ್ನು ಖರ್ಚು ಮಾಡತಕ್ಕ ನಿರೀಕ್ಷೆ ಇದೆ. ಈ ಕೆಲಸ ಕಾರ್ಯಗಳು ತುಂಗಭದ್ರ, ಭದ್ರ, ನುಗು, ಮತ್ತು ತುಂಗ ಮುಂತಾದ major and medium irrigation ಪ್ರಾಜೆಕ್ಟ್ಸ್ ಏನಿವೆ ಅವುಗಳಲ್ಲಿ ವಿಶೇಷ ರೀತಿಯ ಪ್ರಗತಿ ನಡೆದಿದೆ ಎಂದು ಮಾತ್ರ ಧೈರ್ಯವಾಗಿ ಹೇಳಬಲ್ಲೆ.

ಮಾನ್ಯ ಸದಸ್ಯರಾದ ಶ್ರೀ ಮಲ್ಲಾರಾಧ್ಯರು ಕೆಲವು ವಿಷಯಗಳನ್ನೆತ್ತಿದರು. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟುತ್ತೀರಿ, ಅವುಗಳಿಂದ ಸಾಕಷ್ಟು ವರಮಾನ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಿ ಎಂದು ಹೇಳಿದರು. ಅದು ವಾಸ್ತವವಾಗಿ ರಚನಾತ್ಮಕವಾದ ಸಲಹೆ. ಈ ಸಲಹೆಗೆ ಸರ್ಕಾರ ಬಹಳ ಪುರಸ್ಕಾರ ಕೊಟ್ಟು ಅದನ್ನು ಅಂಗೀಕಾರ ಮಾಡುತ್ತದೆ. ಈ ಪ್ರಾಜೆಕ್ಟ್‌ಗಳನ್ನು ಪ್ರೊಡಕ್ಟಿವ್ ಆಗಿ ಮಾಡಲು ಏನೇನು ಮಾಡಬೇಕೆನ್ನುವುದರ ಬಗ್ಗೆ ಸರ್ಕಾರಕ್ಕೆ ಸಲಹೆ ಮಾಡಲು ಒಂದು ಸಣ್ಣ ಕಮಿಟಿಯನ್ನು ಮಾಡಿ ಅದರಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗುವಂಥ ವ್ಯವಸ್ಥೆಯನ್ನು ಮಾಡಿದೆ.

ಮೇಜರ್ ಇರಿಗೇಷನ್ ಪ್ರಾಜೆಕ್ಟ್‌ಗಳು remunerative ಪ್ರಾಜೆಕ್ಟ್‌ಗಳಾಗುತ್ತಿಲ್ಲವೆಂದು ಹೇಳಿದ್ದಾರೆ. ಅದು ವಾಸ್ತವಾಂಶ. ಈ ಪ್ರಾಜೆಕ್ಟ್‌ಗಳಿಂದ ಪ್ರತ್ಯಕ್ಷವಾಗಿ ಏನೂ ಬಾರದೇ ಇದ್ದರೂ ದೇಶದಲ್ಲಿ ಯಥೇಷ್ಟವಾಗಿ ಪ್ರಗತಿಯಾಗುತ್ತಿದೆ, ಜನ ಜೀವನ ಉತ್ತಮವಾಗಿದೆ, ಸಂಪಾದನಾಶಕ್ತಿ ಹೆಚ್ಚಿದೆ, ಜೀವನೋಪಾಯ ಮಾರ್ಗಗಳು ಹೆಚ್ಚುತ್ತಿವೆ. ಆದುದರಿಂದ ಪ್ರತ್ಯಕ್ಷವಾಗಿ ಅಲ್ಲದೆ ಇದ್ದರೂ ಅಪ್ರತ್ಯಕ್ಷವಾಗಿ ಎಷ್ಟೋ ಪ್ರತಿಫಲ ಬಂದಿದೆ. ಉದಾಹರಣೆಗೆ ಮಂಡ್ಯದ ವಿಷಯವನ್ನು ತೆಗೆದುಕೊಳ್ಳೋಣ. ಅಲ್ಲಿಂದ ನೇರವಾಗಿ ಸರ್ಕಾರಕ್ಕೆ ಹಣ ಬಾರದೆ ಇದ್ದರೂ ಇಡಿಯ ಮಂಡ್ಯ ಜಿಲ್ಲೆಯಲ್ಲಿ ಜನಜೀವನ ಉತ್ತಮವಾಗಿದೆ. ಅವರ ಸಂಪಾದನಾ ಶಕ್ತಿ ಉತ್ತಮವಾಗಿದೆ. ಅವರ ಸ್ಥಿತಿಗತಿಗಳು ಉತ್ತಮವಾಗಿವೆ. ಇವೆಲ್ಲ ನಮ್ಮ ಕಣ್ಣಿಗೆ ಕಾಣುತ್ತವೆ. ಅದೇ ರೀತಿ ದೇಶದ ಎಲ್ಲ ಭಾಗಗಳಲ್ಲಿಯೂ ಆಗಬೇಕೆಂಬ ಆಶಯ ಸರ್ಕಾರಕ್ಕೆ ಇದೆ. ಆದುದರಿಂದ major irrigation projects ನಿಂದ ನಿರೀಕ್ಷೆ ಮಾಡಿದ್ದುದಕ್ಕಿಂತಲೂ ಹೆಚ್ಚಿಗೆ ಪ್ರಗತಿಯಾಗುತ್ತದೆಂದು ನಂಬಬೇಕು.

ಇನ್ನು ರಸ್ತೆಗಳ ವಿಷಯ. ದೇಶದಲ್ಲಿ ನಡೆಯುತ್ತಿರತಕ್ಕ ಕೆಲಸಗಳ ಅಂಕಿ ಅಂಶಗಳನ್ನು ನೋಡಿ ಎಷ್ಟು ಅದ್ಭುತ ಕೆಲಸ ನಡೆಯುತ್ತಿದೆಯೆಂದು ನನಗಂತೂ ಆಶ್ಚರ್ಯವಾಯಿತು. ಸದಸ್ಯರು ನಾನು ಹೆಚ್ಚು ಪ್ರವಾಸದಲ್ಲಿ ತೊಡಗಿರುತ್ತೇನೆಂದು ಹೇಳಿಲ್ಲ. ನನ್ನ ಶಕ್ತಿಗೆ ಮೀರಿ ಪ್ರವಾಸ ಹೆಚ್ಚಿದೆ ಎಂದು ತಿಳಿದುಕೊಂಡಿದ್ದೇನೆ ದೇಹಕ್ಕೆ ಒಂದು ಲಿಮಿಟೇಷನ್ ಇದೆ. ಅದನ್ನು ಅತಿಕ್ರಮಿಸಿ ಪ್ರವಾಸ ಮಾಡಿದ್ದೇನೆ. ಹಳ್ಳಿ ಹಳ್ಳಿಯಲ್ಲಿ, ಎಲ್ಲ ಕಡೆಗಳಲ್ಲಿಯೂ ರಸ್ತೆ ಕೆಲಸ ಪ್ರಾರಂಭವಾಗಿದೆ. ಕೆಲವು ಕಡೆ ಆಗದೆ ಇರಬಹುದು. ಅದನ್ನು ಒಪ್ಪಿಕೊಳ್ಳುತ್ತೇನೆ. ಕೆಲವು ಅಡ್ಡಿ ಆತಂಕಗಳು ಬಂದು ನಿಂತಿರಬಹುದು. ಹಳ್ಳಿ ಹಳ್ಳಿಗೂ ರಸ್ತೆಗಳಾಗಬೇಕೆಂದು ಹೊಸ ಯೋಜನೆಯನ್ನು ಸರ್ಕಾರ ಹಾಕಿಕೊಂಡು ಹೋದವರ್ಷ 35 ಲಕ್ಷ ರೂಪಾಯಿಗಳನ್ನು ಡಿಸೆಂಬರ್ ತಿಂಗಳಿನಲ್ಲಿ ಕೊಟ್ಟಿದ್ದೇವೆ. ಈ ವರ್ಷ ರಸ್ತೆಗಳಿಗೋಸ್ಕರ 50 ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ. ಒಂದು ಕೋಟಿ ರೂಪಾಯಿಗಳವರೆಗೂ ಖರ್ಚುಮಾಡಬಹುದೆಂದು ಆಜ್ಞೆ ಕೊಟ್ಟಿದ್ದೇವೆ. ಪ್ಲಾನ್ ಮತ್ತು ಅಂದಾಜುಗಳನ್ನು ಎರಡು ಕೋಟಿ ರೂಪಾಯಿಗಳವರೆಗೂ ತಯಾರುಮಾಡಿಟ್ಟಿರಬೇಕೆಂದು ಕೂಡ ಆಜ್ಞೆ ಕೊಟ್ಟಿದ್ದೇವೆ. ಇವರ ಕ್ಷೇತ್ರ ಅವರ ಕ್ಷೇತ್ರ ಎನ್ನುವ ಭಿನ್ನ ಭಾವವಿಲ್ಲ. ಈ ದೇಶದಲ್ಲಿರುವವರೆಲ್ಲ ನಮ್ಮವರೇ. ಆ ಊರಿಗೆ ಆಗಬೇಕು; ಈ ಊರಿಗೆ ಆಗಬೇಕು ಎನ್ನುವ ಪ್ರಶ್ನೆಯಿಲ್ಲ. ಯಾವ ಊರಿಗೆ ಸಂಬಂಧಪಟ್ಟ ಕೆಲಸವಿದ್ದರೂ ಕೂಡ ವಿಧಿನಿಯಮಗಳಿಗನುಗುಣವಾಗಿ ಯಾವ ರಸ್ತೆಯನ್ನು ತೆಗೆದುಕೊಳ್ಳಬೇಕು ಎಂದು ನೋಡುತ್ತೇವೆ. ಒಂದು ಕಾರ್ಯಕ್ರಮ ಹಾಕಿಕೊಂಡು ಒಂದು phased programme ಪ್ರಕಾರ ಮಾಡಬೇಕೆಂಬುದೇ ಆಗಿದೆ. ಎಲ್ಲಿ ಯಾವ ಕೆಲಸವಾಗಬೇಕಾಗಿದ್ದರೂ ನನಗಾಗಲೀ ಸಂಬಂಧಪಟ್ಟ ಇಂಜಿನಿಯರಿಗಾಗಲೀ ತಿಳಿಸಿದರೆ ಆ ಕೆಲಸವನ್ನು order of priority ಹಾಕಿಕೊಂಡು, ವಿಧಿನಿಯಮಗಳಿಗನುಗುಣವಾಗಿ ಮಾಡುತ್ತೇವೆ. ಫೇಸ್ಡ್ ಪ್ರೋಗ್ರಾಂನ ಪ್ರಕಾರ ಎಲ್ಲೆಲ್ಲಿ ಯಾವ್ಯಾವ ಹಳ್ಳಿಗಳಲ್ಲಿ ಯಾವ ರಸ್ತೆಗಳಿವೆ, ಯಾವ ಯಾವ ದೊಡ್ಡ ಮಾರ್ಗಗಳಿವೆ ಎನ್ನುವುದನ್ನೆಲ್ಲಾ ನೋಡಿ ಜನಗಳಿಗೆ ಅನುಕೂಲವಾಗುವಂತೆ ದೊಡ್ಡ ಬಾಟಾ ಮಾರ್ಗಗಳು ಅಲ್ಲದಿದ್ದರೂ ಪಟ್ಟಣಗಳಿಂದ ಪಟ್ಟಣಗಳಿಗೆ ಹೋಗಲು ಅನುಕೂಲವಾಗುವಂತಹ ರೋಡುಗಳನ್ನು ತಯಾರು ಮಾಡಬೇಕೆಂದು ಈಚೆಗೆ ಆಜ್ಞೆಯನ್ನು ಮಾಡಲಾಗಿದೆ. ಇದರಲ್ಲಿ ಇದು ಶ್ರೀ ಪುಟ್ಟಣ್ಣನವರ ಕ್ಷೇತ್ರ ಇದು ಶ್ರೀನಿವಾಸ ಶೆಟ್ಟರ ಕ್ಷೇತ್ರ, ಇದು ಚನ್ನಬಸಪ್ಪನವರ ಕ್ಷೇತ್ರ ಎನ್ನುವ ರೀತಿಯಲ್ಲಿ ನೋಡಿಕೊಂಡು ಮಾಡುತ್ತಿಲ್ಲ. ಎಲ್ಲ ಕ್ಷೇತ್ರಗಳಿಗೂ ಅನುಕೂಲಮಾಡಿಕೊಡಬೇಕು ಎನ್ನುವುದೇ ಸರ್ಕಾರದ ಉದ್ದೇಶವಾಗಿದೆ. ಅದಷ್ಟು ಮಟ್ಟಿಗೆ ಪ್ರಯಾರಿಟಿಯನ್ನು ನೋಡಿ ಮಾಡಬೇಕೆಂದು ಮಾಡಲಾಗಿದೆ.

(ಶ್ರೀ ಎಚ್. ಎಂ. ಚೆನ್ನಬಸಪ್ಪ)

2-30 P.M.

ರಸ್ತೆಗಳ ವೆಚ್ಚದ ಬಗ್ಗೆ ಹೇಳುವುದಾದರೆ, ಒಟ್ಟು ಎಲ್ಲಾ ಭಾಗಗಳಲ್ಲಿಯೂ, ಇಂಡಿಯಾ ಸರ್ಕಾರದಿಂದ ಬಂದಿರುವ ಹಣ, ನೀವು ಕೊಟ್ಟ ತಕ್ಕ ಹಣ ಇವುಗಳನ್ನೆಲ್ಲ ತೆಗೆದುಕೊಂಡು ರಸ್ತೆಗಳ ಪ್ರೋಗ್ರೆಸ್ ಪ್ಲಾಂಟೇಷನ್ನು ಪರಿಯಾದಲ್ಲಿ ಮತ್ತು ಇತರ ಎಲ್ಲಾ ಭಾಗಗಳಲ್ಲಿ ಫೇಸ್ಡ್ ಪ್ರೋಗ್ರಾಂನಂತೆ ಹೀಗಾಗಿದೆ ಎನ್ನುವುದನ್ನು ಈಗ ತಿಳಿಸುತ್ತೇನೆ.

1956—1957ರಲ್ಲಿ ರಸ್ತೆಗಳಿಗಾಗಿ ಖರ್ಚು ಮಾಡಿದ್ದು 319 ಲಕ್ಷ, 1957—58ರಲ್ಲಿ ರಸ್ತೆಗಳಿಗಾಗಿ ಖರ್ಚುಮಾಡಿದ್ದು 394 ಲಕ್ಷ, 1959—60ರಲ್ಲಿ ರಸ್ತೆಗಳಿಗಾಗಿ ಖರ್ಚುಮಾಡಿರುವುದು 544 ಲಕ್ಷ ರೂಪಾಯಿಗಳಷ್ಟು ವೆಚ್ಚವಾಗುವ ನಿರೀಕ್ಷೆ ಇದೆ.

It is the minimum establishment. In the course of my reply to the debate I have said that Mysore is spending very little amount on establishment when compared with other States.

ಕೇವಲ ಇನ್ನು ಎರಡು ಮೂರು ತಿಂಗಳುಗಳಲ್ಲಿ 544 ಲಕ್ಷ ರೂಪಾಯಿಗಳಷ್ಟನ್ನು ನಾವು ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದರೂ, ಇದರಲ್ಲಿ ನೀವು Efficient ಆಗಿಲ್ಲ ಎಂದು ತಮಗೆ ಹೇಳಲಿಕ್ಕೆ ಬಾಯಿ ಹೇಗೆ ಬಂತು ? ಎಂದು ನಾನು ತಮ್ಮನ್ನು ಕೇಳಬೇಕಾಗಿದೆ. ಪವರ್ ಪ್ರಾಜೆಕ್ಟುಗಳ ವಿಚಾರವಾಗಿ ನೋಡುವುದಾದರೆ

1956—57ರಲ್ಲಿ	65	ಲಕ್ಷ	ರೂಪಾಯಿಗಳಾಗಿದೆ,
1957—58ರಲ್ಲಿ	179	ಲಕ್ಷ	ರೂಪಾಯಿಗಳಾಗಿದೆ,
1958—59ರಲ್ಲಿ	332	ಲಕ್ಷ	ರೂಪಾಯಿಗಳಾಗಿದೆ,
1959—60ರಲ್ಲಿ	579	ಲಕ್ಷ	ರೂಪಾಯಿಗಳಾಗಿದೆ.

ಇದರಿಂದ in efficiency ಏನಾಗಿದೆ ಎನ್ನುವುದು ತಮಗೇ ಗೋಚರವಾಗುತ್ತದೆ. ಇದರಲ್ಲಿ efficiency ಯಾವ ಮಟ್ಟದಲ್ಲಿ ಹೇಗಿದೆ ಎನ್ನುವುದನ್ನು ಹೇಳುವುದಕ್ಕೋಸ್ಕರ ಈ ಅಂಕಿ ಅಂಶಗಳನ್ನು ಇಲ್ಲಿ ಕೊಟ್ಟಿದ್ದೇನೆ. ಆದುದರಿಂದ inefficiency ಆಗಿದೆ ಎಂದು ಹೇಳತಕ್ಕದ್ದು ಸರಿಯಲ್ಲ ಎಂದು ಅಷ್ಟುಮಾತ್ರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ ವೆಚ್ಚ ಹೇಗೆ ಆಗಿದೆ ಎಂದರೆ.—

1956—57ರಲ್ಲಿ	166 ಲಕ್ಷದಷ್ಟು ಆಗಿದೆ,
1957—58ರಲ್ಲಿ	221 ಲಕ್ಷದಷ್ಟು ಆಗಿದೆ,
1958—59ರಲ್ಲಿ	126 ಲಕ್ಷದಷ್ಟು ಆಗಿದೆ

1959—60ರ ಜನವರಿಯವರೆಗೆ 106 ಲಕ್ಷದಷ್ಟು ಆಗಿದೆ. ವರ್ಷದ ಕೊನೆಯವರೆಗೆ ಸುಮಾರು 179 ಲಕ್ಷದವರೆಗೆ ಹೋಗುವ ನಿರೀಕ್ಷೆ ಇದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಇದು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡಿನ Efficiency ತೋರಿಸುತ್ತದೆಯಲ್ಲವೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಇರಿಗೇಷನ್ನು ಡಿಪಾರ್ಟ್‌ಮೆಂಟಿನ ವಿಚಾರದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಶ್ರೀನಿವಾಸ ಶೆಟ್ಟರವರು ನಾನು aggressive ಆಗಿರುತ್ತೇನೆಂದು ಹೇಳಿದರು. ನಾನು ಆಗಿರಲಿಲ್ಲ. ಅವರು ಹೇಳುವಂತೆ ನಾನು aggressive ಆಗುವುದಿಲ್ಲ. ನನ್ನ ಮೇಲಿನ ಪ್ರೀತಿಯಿಂದ ಆ ರೀತಿ ಹೇಳಿರಬಹುದು. ಅವರು ಉತ್ತಮವಾದ ಸಲಹೆಯನ್ನು ಕೊಟ್ಟಿದ್ದಾರೆ. ಅವರು ಹೇಳುವುದೇನೆಂದರೆ ಈಗ ಮದರಾಸಿನ ಅಂಕಿ ಅಂಶಗಳನ್ನು ನೋಡಿ, ಅದರಂತೆ ನೀವು ಹೇಗೆ ಮಾಡಿದ್ದೀರಿ ಎನ್ನುವುದನ್ನು ಹೋಲಿಸಿ ನೋಡಬೇಕೆಂದು ಹೇಳಿದರು. ಅದೇ ರೀತಿ ಯೂಗಿ ನೋಡುವಾಗ ಯುಗೋಸ್ಲೇವಿಯಾದಲ್ಲಿ ಅಲ್ಲಿನ ಜನಗಳು ಹೇಗೆ ಮಾಡುತ್ತಿದ್ದಾರೆ, ನ್ಯೂಜಿಲೆಂಡಿನಲ್ಲಿ, ಕ್ಯಾನಡಾದಲ್ಲಿ ಹೇಗೆ ಪ್ರಗತಿಯಾಗಿದೆ ಎನ್ನುವುದನ್ನು ನೋಡಿದರೆ ಅಲ್ಲಿನ ಉತ್ಪತ್ತಿ 4,000 ಕಿಲೋ-ವ್ಯಾಟುಗಳಷ್ಟು ಆಗುತ್ತಿದೆ. ನಾವು ನಮ್ಮ ಶಕ್ತಿ ಇದ್ದಷ್ಟು ಇಲ್ಲಿ ಮಾಡುತ್ತಿದ್ದೇವೆ. ಎರಡನೆಯ ಪಂಚ ವಾರ್ಷಿಕ ಯೋಜನೆಯ ಪರಿಸ್ಥಿತಿಗನುಸಾರವಾಗಿ 700 ಹಳ್ಳಿಗಳಿಗೆ ಮಾತ್ರ 7000 ಐ. ಪಿ. ಸೆಟ್ಟುಗಳನ್ನು ಕೊಡಬೇಕೆಂದು ನಾವೂ ನೀವೂ ಒಪ್ಪಿ ಮಾಡಿಕೊಂಡ ಪ್ರಕಾರ ಇಲ್ಲಿ ಕೆಲಸ ಮಾಡುತ್ತಿದ್ದೇವೆ ಒಂದು ವೇಳೆ ಪ್ರೋಗ್ರಾಂ ಪ್ರಕಾರ ಕೆಲಸ ಮಾಡುತ್ತಿಲ್ಲ ಎಂದು ಹೇಳಿದರೆ, ನಾವೇನು ಕೆಲಸಗಳನ್ನು ಮಾಡಿದ್ದೇವೆ ಎನ್ನುವುದನ್ನು ಅಂಕಿಅಂಶಗಳನ್ನು ಕೂಡ ಕೊಡುತ್ತೇನೆ. 700 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ಹೇಳಿದ್ದೇವೆ. ಅದರಂತೆ ಖಚಿತವಾಗಿ ಕೊಡುತ್ತೇನೆಂದು ಇಲ್ಲಿ ಹೇಳುತ್ತೇನೆ. 7,000 ಐ. ಪಿ. ಸೆಟ್ಟುಗಳನ್ನು ತರಿಸಿಕೊಡುತ್ತೇವೆಂದು ಹೇಳಿರುವುದು 7,500 ಅಥವಾ 8,000ದ ವರೆಗೂ ಹೋಗಬಹುದು. ಹೀಗೆ, ರೈತರಿಗೆ ಕೊಡುವಾಗ ಏನೇನು ನಿಯಮಗಳಿವೆ ಅದರಂತೆ ಕೊಡಲಾಗುತ್ತಿದೆ. ಆದುದರಿಂದ ವಿದ್ಯುಚ್ಛಕ್ತಿ ಇಲಾಖೆಯಲ್ಲಿನ ಕೆಲಸಗಳು ತಾವು ಹೇಳುವಷ್ಟು ಹಿಂದೆ ಬಿದ್ದಿಲ್ಲ. ನಮಗೆ ವಿದ್ಯುಚ್ಛಕ್ತಿ ಬಂದ ಮೇಲೆ ನಮಗೆ ಮದರಾಸಿಗಿಂತ ಮೀರುವಷ್ಟು efficient ಆಗಿ ಕೊಡಲಿಕ್ಕೆ ಬರಬಹುದು.

ಶ್ರೀ ವಿ. ಶ್ರೀನಿವಾಸ ಶೆಟ್ಟಿ.—ನಾನು ಹೇಳುವಾಗ ನಮ್ಮ ವಿದ್ಯುಚ್ಛಕ್ತಿಯ ಇಲಾಖೆಯಲ್ಲಿ ಯಾವಾಗ ಕೇಳಿದರೂ ಕಂಬವಿಲ್ಲ, ಟ್ರಾನ್ಸ್‌ಫಾರ್ಮರುಗಳಿಲ್ಲ ಎಂದು ಹೇಳುತ್ತಿದ್ದಾರೆ. ಹೀಗಿರುವಾಗ ನಿಮ್ಮ ನೆರೆ ಹೊರ ರಾಜ್ಯವಾದ ಮದರಾಸಿನಲ್ಲಿ ಹೇಗಿದೆ ಎನ್ನುವುದನ್ನು ನೋಡಬೇಕೆಂದು ತಿಳಿಸಿದೆ. ಏಕೆಂದರೆ ಯಾವಾಗಲೂ ನಮ್ಮ ಸಚಿವರು ಮದರಾಸನ್ನೇ ಉದಾಹರಣೆಯಾಗಿ ಹೇಳುತ್ತಿರುತ್ತಾರೆ. ತಾವು ಮದರಾಸನ್ನು ಬಿಟ್ಟು ನ್ಯೂಜಿಲೆಂಡು, ಅಮೆರಿಕಾಕ್ಕೆ ಏಕೆ ಹೋಗುತ್ತೀರಿ ? ನೆರೆಹೊರೆಯ ರಾಜ್ಯಗಳಲ್ಲಿ ಹೇಗಿದೆ ಎನ್ನುವುದನ್ನು ನೋಡಿ ಹೇಳಬಹುದು.

SRI H. M. CHANNABASAPPA.—It is a very constructive criticism. I want to go ahead of Madras. you and I should sit together and consider ways as to how to get electricity soon. We have to progress under the Third Plan and see that we go ahead of our neighbours.

ಐ. ಪಿ. ಸೆಟ್ಟುಗಳಲ್ಲಿ 7,000 ಎಂದು ಕೊಡಬೇಕಾಗಿದೆ ಎಂದು ಹೇಳಿದಂತೆ ಈಗಾಗಲೇ ಹೋದ ವರ್ಷ

ದಿಂದ ಇಲ್ಲಿಯವರೆಗೆ 6,000 ಸೆಟ್ಟುಗಳನ್ನು ಕೊಡಲಾಗಿದೆ. ಜನವರಿಯವರೆಗೆ 6,300 ಎಂದು ಕೊಡಲಾಗಿದೆ. ಉಳಿದಿರುವ 700 ಸೆಟ್ಟುಗಳನ್ನು ಕೊಡಬೇಕಾಗಿದೆ. ಈ ರೀತಿಯಾಗಿ ಇರಿಗೇಷನ್, ಡೆವಲಪ್‌ಮೆಂಟ್ ಪ್ರೋಗ್ರಾಂ ಇವುಗಳ ಬಗ್ಗೆ ಇಡಿಯ ಲೋಕೋಪಯೋಗಿ ಖಾತೆಯ ಬಗ್ಗೆ ಮತ್ತು ವಿದ್ಯುಚ್ಛಕ್ತಿಗಾಗಿ ಒಟ್ಟು ಎಷ್ಟು ವೆಚ್ಚವಾಗಿದೆ ಎಂದರೆ,

1957—58ರಲ್ಲಿ	21.23 ಲಕ್ಷ
1958—59ರಲ್ಲಿ	24 ಕೋಟಿ
1959—60ರಲ್ಲಿ	27 ಕೋಟಿ

ಹೀಗೆ ವೆಚ್ಚವಾಗಿದ್ದರೂ, ಇದಕ್ಕಿಂತಲೂ ಹೆಚ್ಚಿನ ಖರ್ಚು ಅಗತಕ್ಕ ಸೂಚನೆಗಳು ಕಂಡು ಬರುತ್ತಿದೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನಿಮ್ಮ ಮಂತ್ರಿ ಮಂಡಲದಲ್ಲಿ, ನಿಮ್ಮ ಕೈಕೆಳಗಿನ ಅಧಿಕಾರಿಗಳಿಗೆ ನಿಮ್ಮ ಮೇಲೆ ಬಹಳ ಬೇಜಾರು ಬಂದಿದೆ. ಹೆಚ್ಚು ಹಣವನ್ನು ಯಾರು ಖರ್ಚು ಮಾಡಿದ್ದಾರೆಯೋ ಅವರಿಗೆ ಅನ್ಯಾಯ ಮಾಡುತ್ತಿದ್ದೀರಿ. ಕಡಮೆಯಾಗಿ ಯಾರು ಖರ್ಚು ಮಾಡಿದ್ದಾರೋ ಅವರನ್ನೇ ದೊಡ್ಡವರನ್ನಾಗಿ ಮಾಡುತ್ತೀರಿ. ಅದರಂತೆ ನೋಡಿದರೆ ಜಾಸ್ತಿ ಹಣ ಖರ್ಚಾಗಿಲ್ಲ ಎಂದು ನೀವು ತೆಗೆದುಕೊಳ್ಳಬಹುದು.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಹೇಳತಕ್ಕದ್ದು ಸಾಮಾನ್ಯ ಅಧಿಕಾರಿಗಳ ವಿಚಾರ. ಆ ವಿಷಯಕ್ಕೆ ಆಮೇಲೆ ಬರುತ್ತೇನೆ. ಒಟ್ಟು ಇನ್ನು ಮೂರು ತಿಂಗಳಲ್ಲಿ ಈ ವರ್ಷದ ವೆಚ್ಚ ಸುಮಾರು ಮೂವ್ವತ್ತು, ಮೂವ್ವತ್ತೊಂದು ಕೋಟಿಗಳವರೆಗೂ ಏರುವ ನಿರೀಕ್ಷೆ ಇದೆ. ಇದುವರೆಗೆ outlay 27-28 ಕೋಟಿಯವರೆಗೆ ನಮ್ಮ ಇಲಾಖೆಯಲ್ಲಿ ಖರ್ಚಾಗಿದೆ. ಮತ್ತೆ ಎಷ್ಟು ಖರ್ಚಾಗಿರಬಹುದು ಎಂಬ ಅಂಕಿ ಅಂಶಗಳನ್ನೂ, ನಾನಾ ಕ್ಷೇತ್ರಗಳಲ್ಲಿ ಎಷ್ಟು ನಡೆಯಿತು ಎಂಬುದನ್ನು ತಿಳಿಸಿದೆ. ಮೊನ್ನೆ ಮಾತನಾಡತಕ್ಕ ಸಂದರ್ಭದಲ್ಲಿ ಶ್ರೀಮತಿ ಅನ್ನಪೂರ್ಣಬಾಯಿ ಅವರು ಹೇಳಿದರು. ಕಲ್ಯಾಣಕ್ಕೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆಂದು ವಾಗ್ದಾನಮಾಡಿ ಇನ್ನೂ ಏನೂ ಕೆಲಸ ನಡೆದಿಲ್ಲ ಎಂದು. ಅಲ್ಲಿಗೆ ಎಂಟು ಆಪರೇಟರ್ಸ್ ಕಳುಹಿಸಿ, ಟೆಕ್ನಿಕಲ್ ಮೆನ್ಸ್ ಕಳುಹಿಸಿ ಅಗಲೇ 15½ ಮೈಲಿ ಲೈನ್ ಎಳೆದಿದ್ದಾರೆ. ಮೇ 15ನೇ ತಾರೀಖಿನೊಳಗೆ ಅಲ್ಲಿಗೆ ಪವರ್ ಕೊಡುವ ನಿರೀಕ್ಷೆ ಇದೆ. ಅಲ್ಲಿ ಜನಗಳು ಕೆಲಸಕ್ಕೆ ಸಿಕ್ಕುವುದಿಲ್ಲ ಎನ್ನುವ ಆಕ್ಷೇಪಣೆ ಇವೆ. ಕೆಲಸಕ್ಕೆ ಜನಗಳು ಸಿಕ್ಕದಿದ್ದರೆ ಕೆಲಸ ನಿಧಾನ ಅಗಬಹುದು. ಅವರಿಗೆ ಬೇಗ ಕೆಲಸ ಆಗಬೇಕು ಎನ್ನುವುದಾದರೆ ಅವರು ಬೇಗ ಅಲ್ಲಿಗೆ ಹೋಗಿ ಕೆಲಸಕ್ಕೆ ಜನಗಳನ್ನು ಒದಗಿಸಿ ಪವರ್ ತೆಗೆದುಕೊಳ್ಳುವುದನ್ನು ಅವರಿಗೇ ಬಿಟ್ಟಿದ್ದೇವೆ.

ಶ್ರೀ ಜಿ. ಎನ್. ಪುಟ್ಟಣ್ಣ.—ಅಲ್ಲಿಗೆ ನಾನು ಹೋಗಿದ್ದೆ, ಅಲ್ಲಿ ಇನ್ನೂ ರಸ್ತೆ ಮಾಡಿಲ್ಲ.

Sri H. M. CHANNABASAPPA.—It is in good progress, I am speaking with authority. I had gone there. The work is in full swing.

ಶ್ರೀ ನರಸಿಂಹೇಗೌಡರು, ವಿದ್ಯುಚ್ಛಕ್ತಿಯ ಮಂತ್ರಿಗಳು ಇರುವ ಪ್ರದೇಶದ ಎಲ್ಲಾ ಹಳ್ಳಿಗಳಿಗೂ ವಿದ್ಯುಚ್ಛಕ್ತಿಯನ್ನು ಹಾಕಿಕೊಂಡರು ಎಂದು ಹೇಳಿದರು. ಯಾವ ವಿಷಯವನ್ನು ಹೇಳಬೇಕಾದರೂ ಅದನ್ನು ಪ್ರಮಾಣಿಸಿ ಅವರು ಹೇಳಬಾರದೆ ?

ಶ್ರೀ ಎನ್. ಜಿ. ನರಸಿಂಹೇಗೌಡ.—ಈಗ ನಾಲ್ಕೈದು ವರ್ಷಗಳಿಂದ ನಮ್ಮ ತಾಲ್ಲೂಕಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಿ ಎಂದು ಕೇಳುತ್ತಿದ್ದರೂ ಒಂದು ಹಳ್ಳಿಗೂ ಸ್ಯಾಂಕ್ಷನ್ ಮಾಡಿಲ್ಲ. ಹಾಗೆಯೇ ನಿಮ್ಮ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ ಮಾಡಿದ್ದೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—260 ಹಳ್ಳಿಗಳಲ್ಲಿ 14-15 ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಕೊಟ್ಟಿದೆ. ನಮಗೂ ಕೊಡಿ ಎಂದು ಕೇಳಿ. ಆದರೆ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಎಲ್ಲಾ ಹಳ್ಳಿಗಳಿಗೂ ಹಾಕಿಕೊಂಡಿದ್ದೀರಿ ಎಂದು ತಪ್ಪು ಅಭಿಪ್ರಾಯವನ್ನು ಈ ಸಭೆಯಲ್ಲಿ ಕೊಡಬಾರದು.

ಶ್ರೀ ಎನ್. ಜಿ. ನರಸಿಂಹೇಗೌಡ.—ನಮ್ಮ ತಾಲ್ಲೂಕಿನಲ್ಲಿ 20 ಹಳ್ಳಿಗಳವರು ವಿದ್ಯುಚ್ಛಕ್ತಿಯನ್ನು ಕೊಡಬೇಕೆಂದು ಕೇಳಿದ್ದಾರೆ. ಆದರೆ ಒಂದು ಹಳ್ಳಿಗೂ ಕೊಟ್ಟಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿದಾಕ್ಷಣಕ್ಕೇ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕಾಗುತ್ತದೆಯೇ ! ಅಲ್ಲಿನ ಅನುಕೂಲ, ಅನನುಕೂಲಗಳನ್ನು ಪರಿಶೀಲಿಸಿ ನಂತರ ಕೊಡಬೇಕೇ ವಿನಾ, ಕೇಳಿದಾಕ್ಷಣಕ್ಕೆ ಕೊಡುವುದಕ್ಕಾಗುತ್ತದೆಯೇ ?

ಇನ್ನೊಂದು ಬಹಳ ಮುಖ್ಯವಾದ ವಿಷಯವನ್ನು ಎತ್ತಿದರು. ಇರಿಗೇಷನ್ ಕೆಲಸಮಾಡುವ ವಿಷಯನ್ನು ಶ್ರೀಮಾನ್ ಬಿ. ರಾಚಯ್ಯನವರು ಹೇಳಿದರು. ಮೈಸೂರು ಸರ್ಕಾರದವರಿಗೂ, ಮತ್ತು ಮದರಾಸ್ ಸರ್ಕಾರದವರಿಗೂ 1924ನೆಯ ಇಸವಿಯಲ್ಲಿ ಆದ ಅಗ್ರಿಮೆಂಟ್ ಮತ್ತು 1892ರಲ್ಲಿ ಆದ ಅಗ್ರಿಮೆಂಟ್ ಇವುಗಳಿಗೆ ಅನುಗುಣವಾಗಿ ನಮ್ಮ ಹಕ್ಕು ಬಾಧ್ಯತೆಗಳನ್ನು ಸಂಪೂರ್ಣವಾಗಿ ಕಾಪಾಡಿಕೊಳ್ಳಬೇಕು ಎಂಬುದು ಒಂದು. ಎರಡನೆಯದು 1924ನೆಯ ಇಸವಿಯ ಅಗ್ರಿಮೆಂಟ್ ಅಷ್ಟು ಸಹಕಾರಿಯಾಗಿಲ್ಲ. ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವುದಿಲ್ಲ. ಇಡೀ ಭರತ ಖಂಡವೇ ಒಂದಾಗಿರುವಾಗ ನೀರಿನ ಹಂಚಿಕೆಯ ವಿಷಯದಲ್ಲಿ ಮೂಲ ಭೂತವಾದ ಆಧಾರಗಳು ಆಗಬೇಕು ಎಂದು ಸೂಚನೆಯನ್ನು ಮಾಡಿದ್ದಾರೆ. ಆದುದರಿಂದ ವಾಸ್ತವವಾಗಿ ನಾನು ಅವರಿಗೆ ಋಣಿಯಾಗಿದ್ದೇನೆ. ಈ ಸಭೆಯಲ್ಲಿ ನಾನು ತಿಳಿಸುವುದಾದರೆ ಬರಿಯ ಕಾವೇರಿ ನದಿ ಅಷ್ಟೇ ಅಲ್ಲ; ಕಾವೇರಿ ಮತ್ತು ಕೃಷ್ಣ ಎರಡು ನದಿಗಳ ಪಾತ್ರಗಳೂ ಮೈಸೂರಿಗೆ ಸೇರಬೇಕಾದದ್ದು ನ್ಯಾಯವಾದದ್ದು. ಆದುದರಿಂದ ಅವುಗಳ ಪ್ರತಿಯೊಂದು ತೊಟ್ಟು ನೀರನ್ನೂ ಉಳಿಸಿಕೊಳ್ಳಲು ಸರ್ವ ಪ್ರಯತ್ನ ಮಾಡುತ್ತೇವೆ ಎಂದು ನಾನು ತಮಗೆ ತಿಳಿಸುತ್ತೇನೆ. ನಾನು ಮೊನ್ನೆ ಪೇಪರ್‌ನಲ್ಲಿ ಓದಿದೆ. ನಾವು ಕೊಟ್ಟಂಥ ಆಹ್ವಾನವನ್ನು ಆಗಲೇ ಸ್ವೀಕರಿಸಿದ್ದಾರೆಂದು.

Sri J. B. MALLARADHYA.—They say that they have not misused it and that they have not taken one drop of water that is not due to them.

Sri H. M. CHANNABASAPPA.—That is why I said, it must be examined by a competent authority and technical opinion taken. ತಜ್ಞರು ತನಿಖೆ ಮಾಡಿದಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

Sri M. RAMAPPA (Harihar).—Is it a fact that the Madras Government have referred the matter to the Central Government that we have unauthorisedly used water?

Sri H. M. CHANNABASAPPA.—We have referred to the Central Government some time ago and the C.P.W.C. have come here and taken some figures here and from Madras also and now the Government of India is seized of it. we are also likely to meet and discuss it at top level. I cannot say anything more than that just at present.

ಶ್ರೀ ಬಿ. ರಾಚಯ್ಯ.—ಇಂಪ್ರೂವ್‌ಮೆಂಟ್ ಆಫ್ ಡ್ಯೂಟಿಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡು ಹೆಚ್ಚಿಗೆ ನೀರನ್ನು ಒದಗಿಸುವ ಪ್ರಯತ್ನವನ್ನು ಮಾಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗಾಗಲೇ ಅನೇಕ ವಿಷಯಗಳನ್ನು ಪರಿಶೀಲನೆ ಮಾಡುತ್ತಿದ್ದೇವೆ. ಅನೇಕ ತೊಂದರೆಗಳಿವೆ. ಒಂದು ಕಾಲುವೆಯ ಕೆಳಗೆ ವಿಸ್ತೀರ್ಣ ಹೆಚ್ಚು ಮಾಡಬೇಕಾದರೆ ಭೂಮಿಯಿಲ್ಲ. ಇನ್ನೊಂದು ವಿಸ್ತೀರ್ಣ ಮಾಡಲಕ್ಕೆ ಭೂಮಿ ಇದೆ, ನೀರಿಲ್ಲ. ಯಾವ ಕಾಲುವೆ ಕೆಳಗೆ ನೀರು ಇದೆಯೋ ಆ ಕಾಲುವೆ ಕೆಳಗೆ ಇಂಪ್ರೂವ್‌ಮೆಂಟ್ ಆಫ್ ಡ್ಯೂಟಿ ಮಾಡಬೇಕು, ಇನ್ನೊಂದು ಕಡೆ ಮಾಡಕೂಡದು ಎಂದು ಅವರ ವಾದ. ಈ ಪಾತ್ರದಲ್ಲಿ ಇಂಪ್ರೂವ್‌ಮೆಂಟ್ ಆಫ್ ಡ್ಯೂಟಿ ಹೆಚ್ಚು ಮಾಡಿಕೊಳ್ಳುವುದಕ್ಕೆ ನಮಗೆ ಅವಕಾಶವಿದೆ, ಹಕ್ಕು ಇದೆ ಎಂದು ಇದನ್ನು ಚರ್ಚೆ ಮಾಡುವುದಕ್ಕೆ ಮದರಾಸ್ ಸರ್ಕಾರಕ್ಕೆ ಆಹ್ವಾನವನ್ನು ಕೊಟ್ಟಿದ್ದೇವೆ. ಅವರೂ ಒಪ್ಪಿಕೊಂಡಿದ್ದಾರೆ, ಎಂದು ತಿಳಿದಿದೆ.

ಶ್ರೀ ಬಿ. ರಾಚಯ್ಯ.—ಕೃಷ್ಣರಾಜಸಾಗರದಲ್ಲಿ ನೀರು ಇರಲಿ ಇಲ್ಲದೆ ಇರಲಿ ಅವರಿಗೆ ಕೊಡಬೇಕಾದ ಕೋಟಾವನ್ನು ಕೊಡುತ್ತೀರಿ. ನೀವು ಮಾತ್ರ 1924 ನೆಯ ಇಸವಿಯ ಅಗ್ರಿಮೆಂಟ್ ಪ್ರಕಾರ ಏತಕ್ಕೆ ಉಪಯೋಗಿಸಿಕೊಂಡಿಲ್ಲ ?

Sri H. M. CHANNABASAPPA.—It is a very big subject and a complicated subject. I would be very happy to discuss and disclose information. The matter is so complicated that anything said or done would have vast repurcussion and therefore I would not say anything more than what I have said ujst at present.

ಶ್ರೀ ಕೊರವಾಳೆಯವರು ಘಟಪ್ರಭಾ ವಿಷಯದಲ್ಲಿ ತಾತ್ಸಾರ ಮಾಡಿದರು ಎಂದು ಹೇಳಿದರು. ಆದರೆ ಅವರಿಗೆ ನಾನು ವಿನಯದಿಂದ ತಿಳಿಸುತ್ತೇನೆ ಘಟಪ್ರಭಾ ವಿಷಯದಲ್ಲಿ ಯಾವುದೇ ಅಲ್ಪಸ್ವಲ್ಪವೂ ತಾತ್ಸಾರ ಮಾಡಿಲ್ಲ. C.P.C.ಯವರಲ್ಲಿ ಮತ್ತು ಪ್ಲಾನಿಂಗ್ ಕಮೀಷನ್ ನವರಲ್ಲಿ ನಮ್ಮ ಹಕ್ಕು ಬಾಧ್ಯತೆಗಳನ್ನೆಲ್ಲಾ ಅವರಿಗೆ ಮನವರಿಕೆ ಮಾಡಿ ಬಹಳ ವೇಗದಲ್ಲಿ ಕೆಲಸ ಮಾಡಿ ಅವರ ಮಂಜೂರಾತಿ ಪಡೆದು ಕೆಲಸವನ್ನು ಪ್ರಾರಂಭ ಮಾಡಿದೆ. 8ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಒಟ್ಟಿನಲ್ಲಿ ಸಾಧ್ಯವಾದಷ್ಟು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

Sri S. D. KOTHAVALE.—Ten crores are provided ?

ಶ್ರೀ ಎಚ್. ಎಂ. ಚನ್ನಬಸಪ್ಪ.—It is not correct; if I remember well, it is 8 crores. ಘಟಪ್ರಭಾ ಯೋಜನೆ ಏತಕ್ಕೆ ನಿಧಾನವಾಯಿತು ಎಂದರೆ, ಅಗರ ಮತ್ತು ಹಿಡಲ್ಲ ಈ ಎರಡು ಬೊಂಬಾಯಿ ಪ್ರಾಂತದಲ್ಲಿರುವುದರಿಂದ ನಮಗೆ ಅಲ್ಲಿ ರಿಜರ್ವಾಯರ್ ಕಟ್ಟುವುದಕ್ಕೆ ಅನೇಕ ಅಡ್ಡಿ ಅಂತಕಗಳು ತೊಂದರೆಗಳು ಇರುವುದರಿಂದ ಹಿಡಗಲ್ ಬಳಿ ರಿಜರ್ವಾಯರ್ ಕಟ್ಟುವುದು ಉತ್ತಮ ಎಂದು ಪರಿಶೀಲನೆ ಮಾಡುವುದಕ್ಕೆ ಇಷ್ಟು ಕಾಲ ಬೇಕಾಯಿತು. ಅಂದಾಜು ಮಂಜೂರು ಮಾಡಿ ಪ್ಲಾನಿಂಗ್ ಕಮಿಷನ್ ನವರ ಮಂಜೂರಾತಿ ಪಡೆದು ಕೆಲಸ ಪ್ರಾರಂಭವಾಗಿದೆ. ಆಮೇಲೆ ಮಲಪ್ರಭಾ ವಿಷಯ ಪ್ರಸ್ತಾಪ ಮಾಡಿದರು. ಮಲಪ್ರಭಾ ಯೋಜನೆಯೂ ಅತ್ಯಗತ್ಯವಾಗಿ ಆಗಬೇಕು, ಎನ್ನುವ ಆಕಾಂಕ್ಷೆ ಸರ್ಕಾರಕ್ಕೆ ಇದೆ.

ಇನ್ನೊಂದು ಅರಿಕೆ ಮಾಡಿಕೊಳ್ಳುತ್ತೇನೆ. ಬೊಂಬಾಯಿ, ಕೇಂದ್ರ ಸರ್ಕಾರಕ್ಕೂ C.W.P.C. ಯವರಿಗೂ ಕೃಷ್ಣಾನದಿಯ ನೀರಿನ ಹಂಚಿಕೆಯ ವಿಷಯದಲ್ಲಿ ಅನುಮಾನ ಹುಟ್ಟಿ 25 C.M.Ft. ನೀರು ಅಲ್ಲಿ ಹೋಗುತ್ತದೆ. ಈ ಕೆಲಸ ನಿಧಾನ ಮಾಡಿ ಕೃಷ್ಣಾನದಿಯ ನೀರು ಹಂಚಿಕೆಯಾಗಲಿ ಎಂದು ತಿಳಿಸಿದರು. ಅದು ಸಾಧ್ಯವಿಲ್ಲ. ಬೊಂಬಾಯಿ ಸರ್ಕಾರದವರು ಈ ಯೋಜನೆಯನ್ನು ಕಾರ್ಯಗತ ಮಾಡಲಕ್ಕೆ ತಂದಿದ್ದಾರೆ. ಅದಕ್ಕೋಸ್ಕರ ಅಲಾಟ್‌ಮೆಂಟ್ ಮಾಡಿದ್ದಾರೆ. ರೀ ಆರ್ಗನೈಜೇಷನ್ ಆಕ್ಟ್ ಪ್ರಕಾರ ಎಷ್ಟು ಅಲಾಟ್‌ಮೆಂಟ್ ಮಾಡಿದ್ದಾರೋ ಅದು ನಮಗೆ ಬಂದೇತೀರಬೇಕು. ನೀವು ಹೇಳತಕ್ಕ ವಾದದಲ್ಲಿ ತಿರುಳು ಇಲ್ಲ, ಕೆಲಸ ಪ್ರಾರಂಭ ಮಾಡಲಕ್ಕೆ ಆಜ್ಞೆ ಕೊಡಬೇಕು ಎಂದು ಒತ್ತಾಯ ತಂದಿದ್ದೇವೆ. ಕೊನೆಯದಾಗಿ ಮೊನ್ನೆ ಕಾಗದ ಬರೆದಿದ್ದೇವೆ. ಅವಶ್ಯವಿದ್ದ ಪಕ್ಷದಲ್ಲಿ ಡಿಲ್ಲಿಗೆ ಬಂದು ಕನ್ವಿನ್ಸ್ ಮಾಡುತ್ತೇವೆ, ಕೆಲಸ ಪ್ರಾರಂಭ ಮಾಡಲು ಆಜ್ಞೆ ಕೊಡಬೇಕು ಎಂದು ಕೇಳಿದ್ದೇವೆ. ಸೂಚನೆಗಳನ್ನು ನೋಡಿದರೆ ಸದ್ಯದಲ್ಲಿ ಆಜ್ಞೆ ಸಿಕ್ಕಬಹುದು, ಎಂದು ಕಂಡುಬರುತ್ತದೆ. ಇದು ಮಲಪ್ರಭಾ ವಿಷಯ.

ಇನ್ನು ಹೈದರಾಬಾದ್ ಕರ್ನಾಟಕದವರೂ ಮತ್ತು ಮುಂಬೈ ಕರ್ನಾಟಕದವರೂ ಎಲ್ಲೆಲ್ಲಿ ಅವರಿಗೆ ರಸ್ತೆಗಳ ಅನುಕೂಲವಾಗಬೇಕು, ಎಲ್ಲೆಲ್ಲಿ ಅವರಿಗೆ ಸೇತುವೆಗಳಾಗಬೇಕೆಂದು ಹೇಳಿದ್ದಾರೆ.

Sri S. D. KOTHAVALE.—I made a reference to approach the Bombay Government to use the waters of Kalamanadi. That raised a question of division of waters between Bombay and this State.

Sri H. M. CHANNABASAPPA.—That was a useful suggestion. Immediately I made a trunk call to Bombay on this matter. But I have not yet got a reply. Members may be assured that we will take all possible action to see that no prescriptive riperian right is gained by anybody without the

concurrence of Mysore where such concurrence is absolutely necessary.

ಮತ್ತೆ ಶ್ರೀ ವರ್ಮಾ ಸಿದ್ಧಾಂತಿಯವರು ತಂಗಡಿ ಬಳಿ ಕೃಷ್ಣಾ ನದಿಗೆ ಒಂದು ಸೇತುವೆ ಆಗಬೇಕೆಂದು ಹೇಳಿದ್ದಾರೆ. ಅಲ್ಲಿ ಕಟ್ಟಬೇಕಾದ ಸೇತುವೆಗಳೆಲ್ಲ ಒಂದೊಂದ ಕ್ಕೂ30ಲಕ್ಷದ ಮೇಲಾಗುತ್ತದೆ. ಆದರೆ ಈಗಾಗಲೇ ನಾನು ಕೃಷ್ಣಾನದಿಗೆ ಮಂಜರಿ ಬಳಿ ಒಂದು ಸೇತುವೆ ಆಗತಕ್ಕದ್ದು ಅತ್ಯವಶ್ಯಕವೆಂದು ಹೇಳಿ ಅದರ ಅಂದಾಜನ್ನು ಶೀಘ್ರವಾಗಿ ಕಳುಹಿಸಬೇಕೆಂದು ಅಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮೊನ್ನೆತಾನೆ ಅರ್ಜಿ ಮಾಡಿ ಬಂದಿದ್ದೇನೆ. ಹೀಗೆ ಎಲ್ಲೆಲ್ಲಿಗೆ ಸೇತುವೆಗಳ ಅಗತ್ಯವಿದ್ದು ಅಲ್ಲಿ ಸೇತುವೆಗಳಿಲ್ಲವೋ ಅಂಥ ಕಡೆಗಳಿಗೆಲ್ಲ ಒಂದೊಂದಾಗಿ ಒದಗಿಸುತ್ತ ಬರುತ್ತಿದ್ದೇವೆ. ಇನ್ನು ಕರ್ಣ್ಯಾಕ್ಕೆ 5 ಮೈಲಿ ದೂರದಲ್ಲಿ ಕೃಷ್ಣಾ ನದಿಗೊಂದು ಸೇತುವೆ ಕಟ್ಟಬೇಕಾಗಿದೆ. ಮತ್ತೆ ಅಥಣಿ ಮಾರ್ಗದಲ್ಲಿ ಒಂದು ಕಡೆ ಕೃಷ್ಣಾ ನದಿಯ ನೀರು ನಿಂತು ಅಲ್ಲಿ ಬಹಳ ಕಾಲದವರೆಗೂ ಓಡಾಟಕ್ಕೆ ಬಹಳ ಅಡಚಣೆಯಾಗುತ್ತಿದೆ. ಆದುದರಿಂದ ಅಲ್ಲಿಗೊಂದು ನರಳ ಕಟ್ಟಲು ಒಂದು ಲಕ್ಷ ರೂಪಾಯಿಗಳವರೆಗೂ ಖರ್ಚಾಗಬಹುದೆಂದು ಹೇಳುತ್ತಿದ್ದಾರೆ. ಆದರೆ ಈ ಸೇತುವೆಗಳ ಬಗ್ಗೆ ಕೂಡಲೇ ಅಂದಾಜು ತಯಾರಿಸಿ ಕಳುಹಿಸಬೇಕೆಂದು ಅರ್ಜಿ ಮಾಡಿದ್ದೇನೆ. ಹೀಗೆ ಒಂದಾದನಂತರ ಒಂದು ಕೆಲಸ ನಡೆಸಬೇಕಾಗಿದೆ. ಇದಕ್ಕೆಲ್ಲ ಭಾರಿ ಹಣ ಬೇಕು. ಆದುದರಿಂದ ನಮ್ಮ ವರಮಾನಕ್ಕಾನುಸಾರವಾಗಿ ದೇಶದ ನಾನಾ ಭಾಗಗಳಿಗೂ ಅಲ್ಲಿಯ ಸನ್ನಿವೇಶಗಳಿಗೆ ಬಾಧಕ ಬಾರದಂತೆ ಹಣವನ್ನು ಖರ್ಚು ಮಾಡಬೇಕಾಗಿದೆ. ಸರ್ಕಾರಕ್ಕೆ ಹಣವನ್ನೊದಗಿಸತಕ್ಕ ಬಗ್ಗೆ ಅಭ್ಯಂತರವೇನೂ ಇಲ್ಲ. ಆದರೆ ಕೆಲಸಗಳು ಹಣವೊಂದರಿಂದಲೇ ನಡೆಯಲಾರವು; ಅಲ್ಲಿ ಆಗಬೇಕಾದ ಇನ್ನು ಕೆಲವು ಸೇತುವೆಗಳಿವೆ. ನಸ್ಲಾಪುರ, ಹೊಗನ ಹಳ್ಳಿ, ಕೊಲ್ಲಾಪುರ, ಅನಗವಾಡಿ ಇತ್ಯಾದಿ ಸೇತುವೆಗಳ ಕೆಲಸ ಬಹಳ ಆವಶ್ಯಕವಾಗಿ ಆಗಲೇಬೇಕು. ಆದರೆ ಈ ಕೊಲ್ಲಾಪುರದ ಹತ್ತಿರ ಕೃಷ್ಣಾ ನದಿಯ ನೀರು ಬಹಳ ತಿಂಗಳತನಕ ನಿಂತು ಪ್ರಯಾಣ ಸೌಕರ್ಯಕ್ಕೆ ತುಂಬಾ ಅಡಚಣೆಯಿರುತ್ತದೆ. ಆದುದರಿಂದ ಈ ಭಾರಿ ಪ್ರಮಾಣದ ಕೆಲಸಗಳಿಗೆ ಕೇಂದ್ರದ ಧನ ಸಹಾಯ ಅತ್ಯಗತ್ಯವಾಗಿ ಬೇಕಾಗಿರುತ್ತದೆ. ಆದುದರಿಂದ ನಾನು ಈ ವಿಚಾರವನ್ನಾಗಲೇ ಕೇಂದ್ರದವರಲ್ಲಿ ಪ್ರಸ್ತಾಪ ಮಾಡಿದ್ದೇನೆ. ಮತ್ತೆ ಈ ಶಾಸನ ಸಭೆ ಮುಕ್ತಾಯ ವಾದಕೂಡಲೆ ಈ ದೊಡ್ಡ ದೊಡ್ಡ ಸೇತುವೆಗಳು ಯಾವ ಯಾವವು ಇವೆಯೋ ಅಂದರೆ ಈ ಗೋರುರು, ಕೊಲ್ಲಾಪುರ, ಇತ್ಯಾದಿ ಸೇತುವೆಗಳ ಬಗ್ಗೆ ಕೇಂದ್ರದ ಧನಸಹಾಯ ಪಡೆಯತಕ್ಕ ಬಗ್ಗೆ ಡೆಲ್ಲಿಗೆ ಹೋಗಬೇಕೆಂದು ನಿಶ್ಚಯ ಮಾಡಿಕೊಂಡಿದ್ದೇನೆ.

ಅಧ್ಯಕ್ಷರು.—ಅನಗವಾಡಿ ಸೇತುವೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ second importance ಕೊಟ್ಟಿದೆ.

ಅಧ್ಯಕ್ಷರು.—ಅದು ಸ್ಟೇಟ್ ಹೈವೇ ಅಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿಜ. ಆದರೆ ಕೊಲ್ಲಾಪುರದ ಬಳಿ ನೀರು ಬಹಳ ತಿಂಗಳು ನಿಂತು ಬಿಡುತ್ತದೆ. ಆದ್ದರಿಂದ ಮೊದಲು ಅಲ್ಲಿಯ ಸೇತುವೆ ಆಗಬೇಕಾದ್ದು ಅತಿ ಮುಖ್ಯವೆಂದು ತೀರ್ಮಾನ ಮಾಡಲಾಗಿದೆ. ಅಂದರೆ ಆಗಬೇಕಾದ ಕೆಲಸಗಳು ಬಹಳವಾಗಿವೆ, ಬ್ರಹ್ಮಾಂಡವಾಗಿವೆ. ಆದರೆ ನಮ್ಮ ಶಕ್ತಿ ಸಾಮರ್ಥ್ಯಗಳೆಷ್ಟಿವೆಯೋ ಅಷ್ಟನ್ನು ನೋಡಿಕೊಂಡು ನಾವು ಮುಂದಕ್ಕೆ ಸಾಗಬೇಕಾಗಿದೆ. ಏಕ ಕಾಲಕ್ಕೆ ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕೆ ಆಗುವುದಿಲ್ಲ. ಈ ಒಂದು ಕಾರಣಕ್ಕಾಗಿ ಹಳೇ ಮೈಸೂರು ಪ್ರಾಂತ್ಯದಲ್ಲಿ ನಡೆಯಬೇಕಾದ ಕೆಲಸಗಳಿಗೆ ಅಡಚಣೆ ಆಗಬಾರದು. ಹಿಂದುಳಿದ ಪ್ರದೇಶಗಳಿಗೆ ಸ್ವಲ್ಪ ಹೆಚ್ಚಿನ ಅನುಕೂಲ ನೀಡಿದ್ದೇವೆ. ಕಾಲಾನುಕ್ರಮದಲ್ಲಿ ಪ್ರತಿಯೊಂದು ಭಾಗದ ಪ್ರಗತಿಯನ್ನು ಸಾಧಿಸಬೇಕೆಂಬ ಕುತೂಹಲ ಸರ್ಕಾರಕ್ಕಿದೆ. ಯಾವ ಭಾಗವನ್ನೂ ನಾವು ಕೈ ಬಿಡುವುದಿಲ್ಲ. ಆದಕಾರಣ ಈ ವಿಚಾರದಲ್ಲಿ ತಾವುಗಳಾರೂ ಅಷ್ಟೊಂದು ಕಾಳಜಿ ಮಾಡಬಾರದು.

ಇನ್ನು ಶ್ರೀಮಾನ್ ಮಲ್ಲಾರಾಧ್ಯರವರು ಹಳ್ಳಿಗಳ ರಸ್ತೆಗಳನ್ನು ಮಾಡಬೇಕಾಗಿದ್ದರೆ ಸರ್ಕಾರಕ್ಕೆ ಧೈರ್ಯಬೇಕು ಎಂದು ಹೇಳಿದ್ದಾರೆ. ಈಗ ಸರ್ಕಾರದವರು ಅಂಥ ಧೈರ್ಯದಿಂದಲೇ ಒಂದು ಯೋಜನೆಯನ್ನು ತಯಾರು ಮಾಡಿರುವುದರಿಂದ ಈ ವಿಚಾರದಲ್ಲಿ ತಾವೆಲ್ಲರೂ ಸಂತೃಪ್ತರಾಗುತ್ತೀರೆಂದು ನಾನು ನಂಬಿದ್ದೇನೆ.

ಅಧ್ಯಕ್ಷರು.—ಧನ್ನೂರು ಸೇತುವೆಯ ವಿಚಾರವೇನಾಯಿತು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈ ಸಭೆಗೆ ಮತ್ತೊಂದು ವಿಚಾರ ತಿಳಿಸಬೇಕಾಗಿದೆ. ನಾನು ಆಗಲೇ ತಮಗೆಲ್ಲ ಅರಿಕೆ ಮಾಡಿಕೊಂಡಹಾಗೆ ಕೇಂದ್ರಕ್ಕೆ ಹೋಗಿ ಅಲ್ಲಿ ಸಾಧ್ಯವಾದ ಪಯತ್ನಗಳನ್ನೆಲ್ಲಾ ಮಾಡುತ್ತೇನೆ. ಹಾಗೂ ಆಗದೆ ಹೋದರೆ ಕೊನೆಯಪಕ್ಷ ಕೇಂದ್ರದವರದು ಅರ್ಧಭಾಗ ರಾಜ್ಯ ಸರ್ಕಾರದವರದು ಅರ್ಧಭಾಗ ಈ ಕೆಲಸಗಳಿಗೆ ಹಣ ದೊರೆಯುವಂತೆ ಪ್ರಯತ್ನ ಮಾಡೋಣವೆಂದು ಅಂದು ಕೊಂಡಿದ್ದೇನೆ.

ಅಧ್ಯಕ್ಷರು.-ತಂಗಡಿ ಬಳಿ ಆಗತಕ್ಕ ಸೇತುವೆಯೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಧನ್ನೂರು, ತಂಗಡಿ ಬಳಿ ಈಗಾಗಲೆ ಸೇತುವೆಗಳ ಕೆಲಸವನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಇನ್ನು ವೆಸ್ಟ್ ಕೋಸ್ಟ್ ವಿಷಯ.—ಶ್ರೀಮಾನ್ ಬಾಳಿಗ ಅವರು ಈಗ ಸಭೆಯಲ್ಲಿಲ್ಲ. ಇದ್ದಿದ್ದರೆ ಚೆನ್ನಾಗಿತ್ತು. ಶ್ರೀಮಾನ್ ಶ್ರೀನಿವಾಸಶೆಟ್ಟರು ಕೆಲವು ವಿಷಯಗಳನ್ನು ಕುರಿತು ಮಾತನಾಡಿದ್ದಾರೆ. ಅವರು ಲೋಕೋಪಯೋಗಿ ಶಾಖೆಯ ವಿಚಾರ ಅಷ್ಟಾಗಿ ಪ್ರಸ್ತಾಪಿಸದೆ ವಿದ್ಯುಚ್ಛಕ್ತಿ ವಿಚಾರದಲ್ಲಿ ಸ್ವಲ್ಪ ಒತ್ತಾಯಮಾಡಿ ಮಾತನಾಡಿದ್ದಾರೆ. ಈಗಾಗಲೆ ಪಶ್ಚಿಮತೀರದ ಕೆಲಸಗಳು ನಡೆಯುತ್ತಿವೆ ಆದರೆ ಅಲ್ಲಿ ಕೆಲಸ ಮಾಡಲಿರುವ ಕಾಲವೆ ಬಹಳ ಸ್ವಲ್ಪ ಅವಕಾಶವಿರತಕ್ಕ ಕಾಲಕ್ಕೆ ಸರಿಯಾಗಿ ನಾವು ಎಲ್ಲ ಸಾಮಾನುಗಳನ್ನು ಹೊಂಚಿಕೊಂಡು ಕೆಲಸ ನಡೆಸಬೇಕಾಗಿದೆ. ವರ್ಷಾದ್ಯಂತವೂ ಅಲ್ಲಿ ಕೆಲಸ ಮಾಡಲು ಅವಕಾಶವಿಲ್ಲ. ಮೇಲಾಗಿ ಆ ಪಶ್ಚಿಮ ತೀರದ ಕೆಲಸಗಳಲ್ಲಿ ಆಗಬೇಕಾದ ರಸ್ತೆಗಳ ಉದ್ದ ಮತ್ತು ಅಗಲ. ಎತ್ತರಗಳೆಲ್ಲ ಹೆಚ್ಚಾಗಿರುತ್ತವೆ. ಈಗಾಗಲೆ ನಾನು ನಾರ್ಥ ಕ್ಯಾನರಾದಿಂದ ಹಿಡಿದು, ಸೌತ್ ಕ್ಯಾನರಾದವರೆಗೂ ಸರ್ಕೀಟ್ ಮಾಡಿ ಅಲ್ಲಿನ ಕೆಲಸಗಳನ್ನೆಲ್ಲ ನೋಡಿಕೊಂಡು, ಆ ಕೆಲಸಗಳು ಮುಂದುವರಿಯಲು ಇದ್ದ ಎಡರು ತೊಡರುಗಳನ್ನೆಲ್ಲ ನಿವಾರಣೆ ಮಾಡಿ ಬಂದಿದ್ದೇನೆ. ಅಲ್ಲಿ-ಇಲ್ಲಿ ಸ್ವಲ್ಪ ಸ್ವಲ್ಪ ನಿಧಾನವಾದರೂ ಆಗಬಹುದು. ಈ ಕೆಲಸಗಳಲ್ಲಿ ಯಾವ ಯಾವ ಬಾಬಿಗೆ ಕೇಂದ್ರದ ಧನ ಸಹಾಯ ದೊರೆತಿದೆಯೋ ಅಂಥ ಕೆಲಸಗಳ ಬಗ್ಗೆ ಕೇಂದ್ರದವರಿಂದ ತಾಂತ್ರಿಕ ಒಪ್ಪಿಗೆ ಪಡೆಯದೆ ನಾವು ಆಕೆಲಸಗಳನ್ನು ಕೈಗೊಳ್ಳುವಂತೆಯೇ ಇಲ್ಲ. ಆದರೆ ಹೀಗೆಲ್ಲ ಅಡಚಣೆಗಳಿದ್ದರೂ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಅವುಗಳನ್ನೆಲ್ಲ ಸಾಧ್ಯವಾದಮಟ್ಟಿಗೂ ಪರಿಹಾರ ಮಾಡಿ ಆದಷ್ಟು ಬೇಗ ಈ ಕೆಲಸಗಳನ್ನೆಲ್ಲ ಮಾಡಿ ಜನರಿಗೆ ಅನುಕೂಲ ಕಲ್ಪಿಸಬೇಕೆಂಬ ಇರಾದೆ ಸರ್ಕಾರಕ್ಕೆ ತುಂಬಾ ಇದೆ.

Sri V. SRINIVASA SHETTY.—To an unstarred question, an answer has been given by the Government regarding the amounts remaing unspent. These are :

		Rs.
West Coast Road	...	13,12,568
Suratkal Regional Engineering College.		1,00,000
Irrigation	...	2,39,077
Buildings	...	3,28,135
Communications	...	13,21,675

All these amounts are remaining unspent as on 1st January 1960.

Sri H. M. CHANNABASAPPA.—My friend tells me what has to be done. If I tell you what has happened and what has been spent in South Kanara, there will be roaring applause.

Mr. SPEAKER.—The House now rises and will meet after half an hour.

The House adjourned for recess at Three of the Clock and reassembled at Thirty Minutes past Three of the Clock.

[MR. DEPUTY SPEAKER in the Chair].

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ವಾಮಿ, ಸೌತ್ ಕೆನರ ವಿಷಯ, ವೆಸ್ಟ್‌ಕೋಸ್ಟಿನ ವಿಷಯ, ಮಾತನಾಡಬೇಕಾಗಿದೆ. ವೆಸ್ಟ್‌ಕೋಸ್ಟ್ ರಸ್ತೆಯಲ್ಲಿ ಮತ್ತು ಸೌತ್‌ಕೆನರ ಜಿಲ್ಲೆಯಲ್ಲಿ ಇದುವರೆಗೆ ಸೇತುವೆಗಳಿಗೋಸ್ಕರ ಎಷ್ಟು ಖರ್ಚಾಗಿದೆ, ಇನ್‌ಲೆಂಡಿಗೆ ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ಕೊಡಬೇಕೆಂದಿದ್ದೇನೆ. ಈಗಾಗಲೇ ವೆಸ್ಟ್‌ಕೋಸ್ಟಿನ ಬಗ್ಗೆ ಸೇತುವೆಗಳಿಗೋಸ್ಕರವಾಗಿ ರೂ. 42,83,000 ಖರ್ಚಾಗಿದೆ ಮತ್ತು ಸ್ಯಾಂಕ್ಷನ್ ಆಗಿ ಕೆಲಸ ನಡೆಯುತ್ತಾ ಇರತಕ್ಕಂಥಾದ್ದು ರೂ. 1,09,13,000, ಅಂದಾಜುಗಳು ಮಂಜೂರಾಗಿ ಕೆಲಸ ನಡೆಯುತ್ತಾ ಇದೆ. ಒಟ್ಟು ಸೇತುವೆಗಳ ಕೆಲಸಕ್ಕೆ ಇಟ್ಟಿರುವುದು, ರೂ. 1,51,96,000. ಸೇತುವೆಗಳ ಕೆಲಸ ಪೂರ್ಣವಾಗಿರುವುದು ಮತ್ತು ಕೆಲಸ ನಡೆಯುತ್ತಾ ಇರುವುದು ರೂ. 21,47,000; (ಮುಗಿದು ಹೋಗಿದೆ). ಸ್ಯಾಂಕ್ಷನ್ ಆಗಿ ಸೇತುವೆಗಳು ನಿರ್ಮಾಣವಾಗುತ್ತಾ ಇರುವುದು ರೂ. 62,85,000 ಒಟ್ಟು ರೂ. 84,32,000 ಇನ್‌ಲೆಂಡ್ ರೋಡಿನಲ್ಲಿ ಸೇತುವೆಗಳಿಗೋಸ್ಕರವಾಗಿ ಮಂಜೂರಾಗಿದೆ. ಒಟ್ಟು ಈಗ ಸೇತುವೆಗಳಿಗೋಸ್ಕರವಾಗಿ ಮಂಜೂರಾಗಿರತಕ್ಕಂಥಾದ್ದು ರೂ. 2,36,28,000; ಬರಿಯ ಸೇತುವೆಗಳಿಗೋಸ್ಕರವಾಗಿ ಇದು ಮಂಜೂರಾಗಿದೆ. ಈಗಾಗಲೇ ಕೆಲಸ ನಡೆಯುತ್ತಾ ಇದೆ. ವೆಸ್ಟ್‌ಕೋಸ್ಟಿನ ಸಂಬಂಧದಲ್ಲಿ ಸರ್ಕಾರದ ಮುಂದೆ ಇರುವ ಪ್ರಪೋಸಲ್ಸ್ ರೂ. 1,38,00,000; ಇನ್‌ಲೆಂಡ್ 30 ಲಕ್ಷರೂಪಾಯಿ, ಒಟ್ಟು 170 ಲಕ್ಷರೂಪಾಯಿಗಳು. ಒಟ್ಟು, ಇನ್‌ಲೆಂಡ್, ವೆಸ್ಟ್‌ಕೋಸ್ಟ್ ಸೇತುವೆಗಳು, ಮತ್ತು ಈಗ ಆಗಿರತಕ್ಕ ಕೆಲಸ, ಮುಂದೆ ಪ್ರಪೋಸಲ್ಸ್ ಇರತಕ್ಕದು, ಎಲ್ಲಾ ಸೇರಿ ರೂ. 4,06,31,000.

ಶ್ರೀ ಯು. ಎಸ್. ನಾಯಕ್.—ಇದರಲ್ಲಿ ಸ್ಟೇಟ್ ಗವರ್ನ್‌ಮೆಂಟಿನದು ಎಷ್ಟು, ಸೆಂಟ್ರಲ್ ಗವರ್ನ್‌ಮೆಂಟಿನದು ಎಷ್ಟು ಇದೆಯೆಂದು ಹೇಳುತ್ತೀರ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸ್ಟೇಟ್ ಗವರ್ನ್‌ಮೆಂಟಿಗೆ ಹಕ್ಕು, ಅಧಿಕಾರ ಇದ್ದರೇನೇ ಸೆಂಟ್ರಲ್ ಗವರ್ನ್‌ಮೆಂಟಿನವರು ಕೊಡುತ್ತಾರೆ. ನಮಗೆ ಅಧಿಕಾರವಿಲ್ಲದಿದ್ದರೆ ಅವರು ಏಕೆ ಕೊಡುತ್ತಾರೆ? It looks as though the Central Government gives like a boon. They give us because we are entitled to get it.

ಮತ್ತೆ ನನ್ನ ಸ್ನೇಹಿತರು ವಿದ್ಯುಚ್ಛಕ್ತಿಯ ವಿಷಯ ಚರ್ಚೆಮಾಡುವಾಗ ಮದ್ರಾಸನ್ನು ಪ್ರಶಂಸೆಮಾಡಿದರು. ನಾನು ಈಗ ಅಂಕಿ ಅಂಶಗಳನ್ನು ತೋರಿಸಿದೆ. ಸೌತ್ ಕೆನರ ಮದ್ರಾಸಿನಲ್ಲಿರುವವರೆಗೆ 53 ಹಳ್ಳಿಗಳಲ್ಲಿ ದೀಪಇತ್ತು. ಎಷ್ಟು ವರ್ಷದಿಂದ ಇವರು ಮದ್ರಾಸಿನಲ್ಲಿದ್ದರು ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ಅವರು ಯೋಚನೆ ಮಾಡುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—1-11-1956ರಲ್ಲಿ, ಇಂಟಿಗ್ರೇಷನ್ ಆಗುವುದಕ್ಕೆ ಮುಂಚೆ, 53 ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇತ್ತು ; ಈಗ ಮೂರು ನಾಲ್ಕು ವರ್ಷಗಳಿಂದ 98 ಹಳ್ಳಿಗಳಲ್ಲಿ ಇದೆ. ಮದ್ರಾಸಿನಲ್ಲಿ ನೀವಿದ್ದಾಗ ನಿಮಗೆ ಎಷ್ಟು ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಇತ್ತು ಎನ್ನುವುದನ್ನು ತೋರಿಸುತ್ತಾ ಇದ್ದೇನೆ. ಇರಿಗೇಷನ್ ಪ್ರಾಜೆಕ್ಟಿನಲ್ಲಿ 1-11-1956ರಲ್ಲಿ ಇಂಟಿಗ್ರೇಷನ್ ಆಗುವುದಕ್ಕೆ ಮುಂಚೆ 107 I.P.S ಸೆಟ್ಟುಗಳಿದ್ದವು. ಇವತ್ತು 511 ಪಂಪ್ ಸೆಟ್ಟುಗಳಿವೆ. ಒಟ್ಟಿನಲ್ಲಿ ಸೌತ್ ಕೆನರಾ ಹಳ್ಳಿಗಳಿಗೆ ಸೌಲಭ್ಯಗಳನ್ನು ಕೊಡಬಾರದೆಂದಲ್ಲ ಬಹಳ ಸಂತೋಷ ಕೊಟ್ಟಿದೆ. ಇನ್ನೂ ಹೆಚ್ಚಿಗೆ ಆಗಬೇಕು ; ಮಾಡುತ್ತೇವೆ. ಸೌತ್‌ಕೆನರದಲ್ಲಿ ಲಿಫ್ಟ್ ಇರಿಗೇಷನ್ನಿಗೆ ಸಂಪೂರ್ಣವಾದ ಅವಕಾಶವಿಲ್ಲ ; ಅಲ್ಲಿ ಹಳ್ಳ ಕೊಳ್ಳಗಳು ಬಹಳ, ಏರುತಿಟ್ಟುಗಳಿವೆ. ದೊಡ್ಡ ದೊಡ್ಡ ಯೋಜನೆಗಳು ಆಗುವುದಿಲ್ಲ. ಸಣ್ಣ ಪುಟ್ಟ ನೀರಾವರಿ ಯೋಜನೆಗಳಿಗೂ ಅನನುಕೂಲ. ಆದುದರಿಂದ lift irrigation ಮಾಡೋಣವೆಂದಿದ್ದೇವೆ. ಒಟ್ಟಿನಲ್ಲಿ ಭೂಮಿಯಿಂದ ಹೆಚ್ಚಿಗೆ ಉತ್ಪತ್ತಿ ಮಾಡಬೇಕೆಂಬ ಆಸೆ ಇದೆ. ನಮ್ಮ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುವುದಿಷ್ಟೆ. ಕಡಮೆ ಮಾಡಿದ್ದೇವೆ. ಇನ್ನೂ ಹೆಚ್ಚಿಗೆಮಾಡಿ ಎಂದು ಹೇಳಿರಿ.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಮದ್ರಾಸ್ ಸರ್ಕಾರದೊಡನೆ ಒಪ್ಪಂದ ಮಾಡಿಕೊಳ್ಳುವಾಗ, ಸೌತ್‌ಕೆನರ

ಜಿಲ್ಲೆಗೆ ಎಷ್ಟು ಎಲೆಕ್ಟ್ರಿಸಿಟಿ ಕೊಡುತ್ತೇವೆಂದು ಒಪ್ಪಂದ ಮಾಡಿಕೊಂಡಿದ್ದಿರಿ; ಅದರಲ್ಲಿ ಎಷ್ಟು ಕೊಟ್ಟಿದ್ದೀರಿ, ಅದನ್ನು ಯೋಚನೆಮಾಡಿ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಒಪ್ಪಿಕೊಳ್ಳೋಣ. Not that Government is reluctant to expand lift irrigation in South Kanara but I want to tell this House what has been done and what is proposed to be done and what we have in view so far as South Kanara is concerned.

ಉತ್ತರ ಕರ್ಣಾಟಕಕ್ಕೆ, ದಕ್ಷಿಣ ಕನ್ನಡ ಜಿಲ್ಲೆಗೆ ಮತ್ತು ಹೈದರಾಬಾದ್ ಕರ್ಣಾಟಕಕ್ಕೆ 1-11-1956 ರಿಂದ ಈಚೆಗೆ, ಯಾವ ಯಾವ ಭಾಗಗಳಿಗೆ ಎಷ್ಟೆಷ್ಟು ಮಂಜೂರಾಗಿದೆ ಎಂಬ ವಿಷಯದಲ್ಲಿ ಅಂಕಿ ಅಂಶಗಳನ್ನು ಕೊಡುತ್ತೇನೆ. ಹೈದರಾಬಾದ್ ಕರ್ಣಾಟಕದ ಮೂರು ಜಿಲ್ಲೆಗಳೂ ಸೇರಿ 1,64,52,584 ರೂಪಾಯಿಗಳನ್ನು ಸೇತುವೆ, ರಸ್ತೆಗಳಿಗೋಸ್ಕರ ಮಂಜೂರು ಮಾಡಿದ್ದೇವೆ.

ಬೊಂಬಾಯಿ ಕರ್ಣಾಟಕದಲ್ಲಿ ಸೇತುವೆಗಳು, ರಸ್ತೆಗಳು ಮುಂತಾದವುಗಳಿಗೆ ರೂ. 3,93,78,342 ಮಂಜೂರು ಮಾಡಿದ್ದೇವೆ, ಕೆಲಸಗಳು ನಡೆಯುತ್ತಿವೆ. ಹೈದರಾಬಾದು ಕರ್ಣಾಟಕದಲ್ಲಿ ರಾಯಚೂರು ಜಿಲ್ಲೆಗೆ 1957-58 ರಲ್ಲಿ ಹತ್ತು ಲಕ್ಷ ರೂಪಾಯಿ ಖರ್ಚಾಗಿದೆ, ಹೋದವರ್ಷ 18ಲಕ್ಷ ಆಗಿದೆ, ಈವರ್ಷ 30ಲಕ್ಷಕ್ಕೆ ಮೇಲ್ಪಟ್ಟು ಹೋಗುತ್ತದೆ. ಈ ಮೂರು ವರ್ಷಗಳಲ್ಲಿ ಒಂದಕ್ಕೆ ಒಂದೂವರೆ ಎರಡರಷ್ಟು ಹೆಚ್ಚು ಖರ್ಚಾಗಿದೆ.

Sri J. P. SARVESH (Serum).—How much has lapsed?

Sri H. M. CHANNABASAPPA.—I will come to that. I shall tell you how much has lapsed and how much we have spent.

ಇನ್ನು ಗುಲ್‌ಬರ್ಗ ಜಿಲ್ಲೆಯಲ್ಲಿ 1957-58 ರಲ್ಲಿ 14·66 ಲಕ್ಷ ಖರ್ಚಾಗಿದೆ, 1958-59ರಲ್ಲಿ 17·48ಲಕ್ಷ ಖರ್ಚಾಗಿವೆ; 1959-60ರಲ್ಲಿ ಜನವರಿ ಕೊನೆಯುವರೆಗೆ 19 ಲಕ್ಷ ಖರ್ಚಾಗಿದೆ, ಇನ್ನೂ ಆರೇಳುಲಕ್ಷ ಖರ್ಚಾಗುತ್ತದೆ.

ಬೀದರ್ ಜಿಲ್ಲೆಯಲ್ಲಿ 1957-58ರಲ್ಲಿ 2·78 ಲಕ್ಷ ರೂಪಾಯಿ ಖರ್ಚಾಗಿದೆ, ಹೋದವರ್ಷ 10·56 ಲಕ್ಷ, ಈವರ್ಷ ಜನವರಿವರೆಗೆ 10 ಲಕ್ಷ ಆಗಿದೆ, ಇನ್ನೂ ಐದಾರು ಲಕ್ಷ ಖರ್ಚಾಗುತ್ತದೆ. ಆದುದರಿಂದ ಹೈದರಾಬಾದು ಕರ್ಣಾಟಕದವರು ನಮಗೇನೂ ಮಾಡಿಲ್ಲವೆಂದು ಹೇಳಲು ಅವಕಾಶವಿಲ್ಲ. ಒಂದಕ್ಕೆ ಎರಡು ಮೂರರಷ್ಟು ಖರ್ಚು ಮಾಡಿದ್ದೇವೆ. I do concede that there is need for it. I do not for a moment say that we have been doing any generous act. It is necessary for us to do it.

Sri B. SHAMSUNDER (Bhalki).-Is it in order to say that no member should open his month?

Sri H. M. CHANNABASAPPA.—That is like a statement requesting you not to say that we have not done anything. But you may ask for more.

Sri C. J. MUCKANNAPPA.—Five crores have been spent for Bombay and Hyderabad Karnataka areas. What have you spent for old Mysore?

Sri H. M. CHANNABASAPPA.—The progress in old Mysore cannot under any circumstances be retarded; it must keep pace, at least as much pace as we had in old Mysore. At the same time we must not forget that a certain amount of weightage has to be given to certain backward areas so that they may also develop, so that in course of time all parts may develop equally.

ಶ್ರೀ ಎನ್. ಜಿ. ನರಸಿಂಹೇಗೌಡ.—ನೀರಾವರಿ, ರಸ್ತೆಗಳು ಸೇತುವೆಗಳ ಸಂಬಂಧವಾಗಿ ಜಿಲ್ಲಾವಾರು ಅಂಕಿ ಅಂಶಗಳನ್ನು ಕೊಡುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಜಿಲ್ಲಾವಾರು, ತಾಲ್ಲೂಕು ವಾರು, ಹೋಬಳಿವಾರು ಬೇಕಾದರೂ ಕೊಡುತ್ತೇನೆ. The Hon'ble Members must know what has happened in all parts of the State.

ಕೋಲಾರ ಒಂದು ಜಿಲ್ಲೆಯಲ್ಲೇ ಈ ವರ್ಷ ಮೈನರ್ ಇರಿಗೇಷನ್ನಿಗೆ ಹತ್ತು ಲಕ್ಷ ರೂಪಾಯಿ ಖರ್ಚುಮಾಡುತ್ತೇವೆ. ಒಂದು ವೇಳೆ ಯಾವುದಾದರೂ ಪ್ರದೇಶಕ್ಕೆ ಸಾಕಷ್ಟು ಆಗದೇಯಿದ್ದರೆ, ಅದರ ವಿಷಯದಲ್ಲಿ ಅನಾದರಣೆ ಎಂದು ಹೇಳಬಾರದು. ಹಳೆಯ ಮೈಸೂರಿನಲ್ಲಿ ಯಾವ ಕಾರಣದಿಂದಲೂ ಕಡಮೆ ಮಾಡುವುದಕ್ಕಾಗುವುದಿಲ್ಲ.

ಶ್ರೀಮಾನ್ ರಾಜಯ್ಯ ಶೆಟ್ಟರು ಬೊಮ್ಮಲ ದೇವರ ಹಳ್ಳಿಕೆರೆ ಮತ್ತು ದೇವರಮರಡಿ ಕೆರೆಯ ವಿಷಯವನ್ನು ಕೇಳಿ, ಮಂತ್ರಿಗಳ ಮನಸ್ಸಿನಲ್ಲಿ ಏನೋ ಒಂದು ಸಂಶಯವನ್ನಿಟ್ಟುಕೊಂಡಿದ್ದಾರೆಂದು ಹೇಳಿದರು, ಇದನ್ನು ಕೇಳಿ ನನಗೆ ವ್ಯಥೆಯಾಗಿದೆ......

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಹತ್ತು ವರ್ಷವಾಗಿದೆ, ಇನ್ನೂ ಏನೂ ಮಾಡಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ದೇಶದಲ್ಲಿ ಸಾವಿರಾರು ಕೆರೆಗಳೂ, ಸಾವಿರಾರ ರಸ್ತೆಗಳೂ ಇವೆ, ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದ್ದೇವೆ......

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಏನೂ ಮಾಡಿಲ್ಲವೆಂದು ಹೇಳಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ನಿನ್ನೆ ತಾನೆ ಸಿರಾ, ಪಾವಗಡ ತಾಲ್ಲೂಕುಗಳಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಿದ್ದೇನೆ. ಅಂಕಿ ಅಂಶಗಳನ್ನು ಕೊಡುತ್ತೇನೆ, ಬೊಮ್ಮಲದೇವರಹಳ್ಳಿ ಕೆರೆಗೆ 1956-57ರಲ್ಲಿ 80 ಸಾವಿರ ರೂಪಾಯಿ ಮಂಜೂರಾಗಿ ಅದನ್ನು ಕಟ್ಟಿದರೆ ಬೋರನ ಕಣಿವೆಗೆ ನೀರು ಕಡಮೆಯಾಗುತ್ತದೆಂದು ಅವ ಕೈಬಿಟ್ಟೆವು. ಪುನಃ ಈ ಪ್ರಶ್ನೆಯನ್ನೆತ್ತಿದ ಮೇಲೆ, ಬೋರನ ಕಣಿವೆಯ ಮೇಲಿರುವ ಕೆರೆಗಳು ಹೂತು ಹೋಗಿವೆಯಾದುದರಿಂದ ಹೆಚ್ಚು ನೀರು ಬರಬಹುದು, ಆದರೂ ಬೋರನಕಣಿವೆಗೆ ನೀರು ಕಡಮೆಯಾಗುತ್ತದೆಯೋ ಇಲ್ಲವೋ ಪರಿ-

(ಶ್ರೀ ಎಚ್. ಎಂ. ಚನ್ನಬಸಪ್ಪ)
ಶೀಲನೆ ಮಾಡಿ ಈ ಕೆರೆಯನ್ನು ತೆಗೆದುಕೊಳ್ಳಲು ಸಾಧ್ಯವೆ ಎಂಬುದನ್ನು ಪರಿಶಿಲಿಸಿ ಎಂದು ಇಲ್ಲಿಂದ ಕೆಳಕ್ಕೆ ಕಳುಹಿಸಿದ ಮೇಲೆ ಅದು ಸೂಪರಿಂಟೆಂಡಿಂಗ್ ಇಂಜಿನಿಯರಿಂದ, ಚೀಫ್‌ಇಂಜಿನಿಯರಿಗೆ ಬಂದು ಕೆಲವು ತಿಂಗಳ ಹಿಂದೆ ಅವರು ಕೆಲವು observations ಮಾಡಿ ಕಳುಹಿಸಿದ್ದಾರೆ. ಕೇವಲ technical ಪರಿಶೀಲನೆ ಯಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಇದೆಲ್ಲ ಪರಿಶೀಲನೆ ಯಾಗಿ ಗ್ರಾಂಟ್ ಕೂಡ ಕೊಟ್ಟಿರಲಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಕೆರೆಯಾಗಿ ಅದರಿಂದ ಜನರಿಗೆ ಅನುಕೂಲವಾದರೆ ನಮಗೆ ಸಂತೋಷ.

ದೇವರ ಮರಡಿಕೆರೆಗೆ ಒಂದು ಲಕ್ಷ 88 ಸಾವಿರಕ್ಕೆ 1955ರಲ್ಲಿ ಮಂಜೂರಾಗಿ ಟೆಂಡರ್ ಕರೆದು, ಸ್ವಲ್ಪ ಕೆಲಸ ನಡೆದ ಮೇಲೆ ಚೀಫ್‌ಇಂಜಿನಿಯರು, ಆ ಅಂದಾಜು ಸರಿಯಾಗಿಲ್ಲ ರಿವೈಜ್ ಆಗಬೇಕೆಂದು ಹೇಳಿದನಂತರ ರಿವೈಜ್ ಅಂದಾಜು ಮೂರು ಲಕ್ಷ 88 ಸಾವಿರಕ್ಕೆ ಏರಿತು. ನೀರಾವರಿ ಆಗತಕ್ಕ ಜಮೀನಿನ ವಿಸ್ತೀರ್ಣವನ್ನು ನೋಡಿದರೆ ಅದು ಕಡಮೆ, ಆದಕಾರಣ ಅದು ಲಾಭದಾಯಕವಲ್ಲವೆಂದು, ಖರ್ಚು ಕಡಮೆಯಾಗುವಂತೆ ಮಾಡಲು ಸಾಧ್ಯವೆ ಎಂದು ನೋಡಲು ಚೀಫ್‌ಇಂಜಿನಿಯರಿಗೆ ಪುನಃ ಆ ಅಂದಾಜನ್ನು ಕಳುಹಿಸಿದೆ. ಆದುದರಿಂದ ಟೆಕ್ನಿಕಲ್ ಕಾರಣ ಗಳಿಗಾಗಿ ತೊಂದರೆಯಾಗಿದೆ. ಸಿರಾ ಮತ್ತು ಪಾವಗಡ ತಾಲ್ಲೂಕುಗಳಲ್ಲಿ ಹೆಚ್ಚು ಕೆರೆಗಳಾದರೆ ನಮಗೆ ಸಂತೋಷ, ತಲೆನೋವು ಕಡಮೆಯಾಗುತ್ತದೆ.

Sri C. K. RAJIAH SETTY.—I am admiring your spirit and capacity; you are able to do such big things, spending crores of rupees. But I am soery that simple things are not going to be conceded.

Sri H. M. CHANNABASAPPA.—This moment I am going to grant, but there must be technical clearance from those people and I try to see that those things which are pending are cleared up quickly. I quite appreciate that there has been lapse of some time. I will see that the Chief Engineer is instructed that the matter be examined quickly in view of the fact that it is pending for a long time and that *aysa pisa* decision is taken.

Sri C. J. MUCKANNAPPA.—If the departmental head gave the technical sanction to start the work and after spending so much of money, what business the other Superintending Engineer has to ask the contractors to stop the work ? Again you are asking the same man to go to the spot and revise the estimate. What was the difficulty ? How did this man come in the way of executing the work ?

Sri H. M. CHANNABASAPPA.—I do not know which Engineer examined and which Engineer asked the contractors to stop the work. I am not aware of these things. Anyway I am telling you the facts before me. I do share the anxiety of the Hon'ble Members that these matters should not be delayed unnecessarily and unduly and I will try to see that as early as possible technical clearance is given.

ಶ್ರೀಮಾನ್ ಎ. ಎಂ. ಬಸವೇಗೌಡರು ಮಲ್ಲೇಗೌಡ ಜನರಲ್ ಆಸ್ಪತ್ರೆ ಕಟ್ಟಡದ ಕೆಲಸ ನಿಂತು ಹೋಗಿದೆ ಎಂದು ಹೇಳಿದರು. ಇದಕ್ಕೆ ಎರಡು ಸಲ ಟೆಂಡರ್‌ಗಳನ್ನು ಕರೆಯಲಾಗಿತ್ತು. ಎರಡು ಸಲವೂ ಯಾರೂ ಕಳಿಸಲಿಲ್ಲ. ಮೂರನೆಯ ಸಾರಿ ಕರೆದಿದ್ದೇವೆ. ಮಾರ್ಚಿ 25 ನೆಯ ತಾರೀಖು ಕೊನೆಯ ದಿವಸ. ಮಾನ್ಯ ಸದಸ್ಯರಿಗೆ ಏನು ಕಷ್ಟವಿದೆ ಎನ್ನುವುದು ಗೊತ್ತಿರುತ್ತದೆ. ಕಂಟ್ರಾಕ್ಟರುಗಳು ಮುಂದೆ ಬಂದಿಲ್ಲ. I quite appreciate his anxiety to get this work done, but my difficulty is to get contractors to do the work. He is a very influential man in the locality. Let him prevail upon contractors to come forward to do this work. ಕಂಟ್ರಾಕ್ಟರುಗಳು ಮುಂದೆ ಬಂದ ಪಕ್ಷದಲ್ಲಿ ಅಗತ್ಯವಾಗಿ ಮಾಡಿಸಿಕೊಡುತ್ತೇನೆ. ಹರಿಜನ ಹಾಸ್ಟಲ್ ಸಂಬಂಧ ದಲ್ಲಿ ಟೆಂಡರ್ ಕರೆದಿದ್ದೇವೆ. ಟೆಂಡರ್ ಬಂದಕೂಡಲೇ ಮಂಜೂರುಮಾಡಿ ಕೆಲಸ ಮಾಡುತ್ತೇವೆ. ಮಲ್ಟಿ ಪರ್ಪಸ್ ಹೈಸ್ಕೂಲ್ ಕಟ್ಟಡ execute ಮಾಡಲು ಸಂಬಂಧಪಟ್ಟ ಕಾಗದ ನಮ್ಮ ಇಲಾಖೆಗೆ ಬಂದೇಇಲ್ಲ. ಇನ್ನೂಕೂಡ ವಿದ್ಯಾಭ್ಯಾಸ ಇಲಾಖೆಯಲ್ಲಿಯೇ ಪರಿಶೀಲನೆಯಲ್ಲಿದೆ.

Sri M. C. NARASIMHAN.—Is this held up only because contractors do not come forward ?

Sri H. M. CHANNABASAPPA.—Yes. If contractors do not come forward, it is my duty and also your duty to see that contractors are induced to come forward. If you want your area to develop you must encourage the contractors to come forward to take up the work. What can the Engineer do if no contractors come forward ? Can you ask the Engineer to build it ?

Sri M. C. NARASIMHAN.—You can do the work departmentally.

Sri H. M. CHANNABASAPPA.—We have had very bitter experience of departmental working.

Sri A. M. BASAVE GOWDA (Chikmagalur).—The difficulty is about rates ? You have to revise them.

Sri H. M. CHANNABASAPPA.—Nothing prevents a contractor from quoting his own rates. Our rate may be anything, but he can say that he would do the work at such and such a rate. Let him quote any reasonable figure. We have now enhanced the sanctioning powers of the Executive Engineers and Superintending Engineers and there should be no difficulty.

ಶ್ರೀಮತಿ ಮಿರ್ಜಾಂಕರ್‌ರವರು ಸಿರ್ಸಿ–ಜೋಗ್ ರಸ್ತೆಯ ವಿಷಯದಲ್ಲಿ ಬಹಳ ಕಳವಳಪಟ್ಟು ಹೇಳಿದರು. ಆ ರಸ್ತೆಗಾಗಿ ಈಗಾಗಲೇ ಹತ್ತು ಲಕ್ಷ ರೂಪಾಯಿ ಮಂಜೂರು ಮಾಡಿದ್ದೇವೆ. ಇದರ ಜೊತೆಗೆ ಕೇಂದ್ರ ಸರ್ಕಾರ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಸಂಸ್ಥಾನ ಸರ್ಕಾರದ ಭಾಗವಾದ ಹತ್ತು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡುವುದಕ್ಕೆ ಫೈಲ್ ಬಂದಿದೆ. ತಕ್ಷಣವೇ ಮಂಜೂರು ಮಾಡುತ್ತೇವೆ.

ಶ್ರೀಮಾನ್ ಶಂಕರಪ್ಪನವರು ಹೊಸದುರ್ಗ ಸೇತುವೆ ಮತ್ತು ವಜ್ರಪ್ರಾಜೆಕ್ಟ್ ವಿಷಯ ಹೇಳಿದರು. ಹೊಸದುರ್ಗ ಸೇತುವೆಗೆ ಟೆಂಡರ್ ಕರೆದು ಆರ್ಡರ್ ಕೊಟ್ಟಿದ್ದು ನಿಜ. ಆ ಕೆಲಸವನ್ನು ಇನ್ನೂ ಮಾಡಿಲ್ಲದೆಹೋದರೆ ತಕ್ಷಣ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೇವೆ. ವಜ್ರಪ್ರಾಜೆಕ್ಟನ್ನು Investigate ಮಾಡಲು ಹೇಳಿದ್ದೇವೆ. Investigate ಆಗಿ ಇಂಜನಿಯರ್ ಪರಿಶೀಲನೆ ಮಾಡಿ ಕಳಿಸಿಕೊಟ್ಟರೆ, feasible ಆಗಿದ್ದರೆ ಮಾಡಿಕೊಡುತ್ತೇವೆ. ಮಾನ್ಯ ಸದಸ್ಯರೇನೋ feasible ಆಗಿದೆ ಎಂದು ಹೇಳಿದರು. ಆದರೆ ಇಲಾಖೆಯವರು ಪರಿಶೀಲನೆ ಮಾಡಿದ ನಂತರ ಈ ವಿಚಾರ ನೋಡಬೇಕು.

ಶ್ರೀಮಾನ್ ಕರುಂಬಯ್ಯನವರು ಕೊಂಡಗೇರಿ ಸೇತುವೆ ವಿಷಯವಾಗಿ ಹೇಳಿದರು. ಅದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇನೆ. ಟೆಂಡರ್‌ಗಳನ್ನು ಕರೆದಿದ್ದೇವೆ. ಬೇಗ ಕೆಲಸ ಪ್ರಾರಂಭ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಹಾಗೆಯೇ ಕೊಟ್ಟಮುಡಿ ತಾಲೂರು ಮತ್ತು ಇತರ ಸೇತುವೆ ಕೆಲಸಗಳು ಮಂಜೂರಾಗಿವೆ. ಕೆಲಸ ಮಾಡಿಕೊಡುತ್ತೇವೆ.

ಶ್ರೀಮಾನ್ ಮಲ್ಲಾರಾಧ್ಯರು "Rules under Betterment Levy Act ಏಕೆ ಮಾಡಿಲ್ಲ. ಸರ್ಕಾರಕ್ಕೆ ಬರತಕ್ಕ ವರಮಾನ ಹೋಯಿತು" ಎಂದು ಕಳವಳದಿಂದ ಹೇಳಿದರು. ವಾಸ್ತವ, ರೂಲ್ಸ್ ಮಾಡಿದ್ದೇವೆ. ಆದರೆ ಜಾರಿಗೆ ಕೊಟ್ಟಿಲ್ಲ. ಕಾರಣ 500 ರೂಪಾಯಿಗಳಿಗೆ ಮೇಲ್ಪಟ್ಟು betterment levy ವಿಧಾಯಕ ಮಾಡಕೂಡದೆಂದು ಈ ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದೆ. ಆದರೆ ಅದನ್ನು ಕಾರ್ಯಗತ ಮಾಡುವುದು ಅಷ್ಟು ಸಮರ್ಪಕವಾಗಿಲ್ಲವೆಂದು ಕಂಡುಬಂದುದರಿಂದ ಹೆಚ್ಚಿಗೆ ಮಾಡುವುದಕ್ಕೆ ಅವಕಾಶವಿರಬೇಕೆಂದು ಒಂದು ತಿದ್ದುಪಡಿ ಸಭೆಯ ಮುಂದೆ ಬರುತ್ತದೆ. ಅದು ಪಾಸಾದ ಮೇಲೆ ರೂಲ್ಸ್ ಜಾರಿಗೆ ಕೊಟ್ಟು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಅಪ್ಪರ್ ಕೃಷ್ಣ ಪ್ರಾಜೆಕ್ಟ್ ವಿಷಯದಲ್ಲಿ ಶ್ರೀಮಾನ್ ಸಿದ್ಧಾಂತಿಯವರು ಬಹಳ ವಿಸ್ತಾರವಾಗಿ ಹೇಳಿದರು. ಸೈಟ್ ನೋಡಿಕೊಂಡು ಬಂದಿದ್ದೇವೆ. ಟೆಕ್ನಿಕಲ್ ಕಮಿಟಿಯವರು ಮೊನ್ನೆ ಎಂಟನೆಯ ತಾರೀಖಿನ ದಿನ ಆಲಮಟ್ಟಿ, ನಾರಾಯಣಪುರ, ಮತ್ತು ಕಮಲದಿಣ್ಣಿ ಈ ಮೂರು ಸೈಟ್‌ಗಳನ್ನು ನೋಡಿಕೊಂಡು ಬಂದಿದ್ದಾರೆ. 20ನೆಯ ತಾರೀಖಿನ ದಿವಸ ಮೀಟಿಂಗ್ ಇದೆ. 21ನೆಯ ತಾರೀಖಿನ ದಿವಸ ಯಾವ ಸ್ಥಳದಲ್ಲಿ ಕಟ್ಟಬೇಕು, ಯಾವ ಯಾವ combination ನಿಂದ ಕಟ್ಟಬೇಕು, ಎನ್ನುವುದರ ಬಗ್ಗೆ ಅವರು ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಬೆಟರ್‌ಮೆಂಟ್ ಲೆವಿಯಿಂದ ಎಷ್ಟು ಹಣ ಸರ್ಕಾರಕ್ಕೆ ಬರುತ್ತದೆಂದು ಅಂದಾಜಾಗಿದೆ ಎಂಬುದನ್ನು ಹೇಳುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಬೆಟರ್ ಮೆಂಟ್ ಲೆವಿ ಸಂಬಂಧದಲ್ಲಿ ಏನೇನು ಕಾರ್ಯಕ್ರಮ ಬೇಕೋ ಅದನ್ನೆಲ್ಲ ತೆಗೆದುಕೊಳ್ಳುತ್ತೇವೆ. Specific ಆಗಿ ಯಾವುದಾದರೂ ತಿಳಿಸಿದರೆ ಎಷ್ಟು ಸಮಾಚಾರ ಒದಗಿಸುವುದಕ್ಕೆ ಸಾಧ್ಯವೊ ಅಷ್ಟನ್ನೂ ಕೊಡುತ್ತೇನೆ.

ಶ್ರೀಮತಿ ಸುಮಂಗಲಮ್ಮನವರು ಬಳ್ಳಾರಿ ನೀರು ಸರಬರಾಜು ವಿಷಯವನ್ನು ಬಹಳ ಕಳಕಳಿಯಿಂದ ಹೇಳಿದರು. ಆ ಕೆಲಸ ಈಗಾಗಲೇ ಮಂಜೂರಾಗಿ ಅಧಿಕಾರಿಗಳನ್ನು ಅಲ್ಲಿಗೆ ಕಳಿಸಿದ್ದೇವೆ. ಆದಷ್ಟು ಬೇಗ ಕೆಲಸ ತೆಗೆದುಕೊಳ್ಳುತ್ತೇವೆ. ರಸ್ತೆಗಳ ವಿಷಯ ಹೇಳಿದರು. ನಾನು ನಿನ್ನೆ ಅವರು ಮಾತನಾಡುವಾಗಲೇ ಹೇಳಿದೆ. ಆಯಕಟ್ಟು ರಸ್ತೆಗಳು ಬಳ್ಳಾರಿ ಪ್ರದೇಶದಲ್ಲಿ ಮಂಜೂರಾಗಿ ಎರಡು ಮೂರು ತಿಂಗಳಾದುವು, ಕೆಲಸ ಕಾರ್ಯಗಳು ಪ್ರಾರಂಭವಾಗಿ, ನಡೆಯುತ್ತಿವೆ. ಆದುದರಿಂದ ಏನೂ ಕಳವಳ ಪಡಬೇಕಾಗಿಲ್ಲ, ಕೆಲವು ದಿವಸಗಳಲ್ಲಿಯೇ ಕೆಲಸ ಮುಗಿಯುತ್ತದೆಂದು ಹೇಳುತ್ತೇನೆ.

ಶ್ರೀಮಾನ್ ಚಾಮಯ್ಯನವರು ನನ್ನ ವಿಷಯ ಹೇಳಲಿಲ್ಲ ಎಂದರು. ಅವರ ಕೆಲಸವೆಲ್ಲ ಆಗಿದೆ.

ಶರಾವತಿಯ ವಿಚಾರದಲ್ಲಿ ಮಾತನಾಡುವಾಗ ಮೇಲ್ಮನೆಯ ಒಬ್ಬಿಬ್ಬರು ಮತ್ತು ಈ ಮಾನ್ಯ ಸಭೆಯಲ್ಲಿ ಒಬ್ಬರು ಬಹಳ ಕಟುವಾಗಿ ಟೀಕೆಮಾಡಿದರು.

ಶ್ರೀ ಎಂ. ರಾಮಪ್ಪ.—ಮೇಲ್ಮನೆಯಲ್ಲಿ ಟೀಕೆ ಮಾಡಿದರೆನ್ನುವ ವಿಷಯ ಈ ಮನೆಯಲ್ಲಿ ಏಕೆ, ಸ್ವಾಮಿ? ಬೇರೆ ಕಡೆಯಲ್ಲಿ ನಡೆದುದನ್ನು ಇಲ್ಲಿ ಏಕೆ ಪ್ರಸ್ತಾಪಿಸಬೇಕು?

ಉಪಾಧ್ಯಕ್ಷರು.—ಬೇರೆಕಡೆ ನಡೆದುದನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿಲ್ಲ.

Sri C. J. MUCKANNAPPA.—Sir, are we not entitled to criticise or question the propriety of a statement made by a Minister or a member in the other House? Cannot we at least quote it here and question its propriety?

4 P.M.

Mr. DEPUTY SPEAKER.—No, you cannot.

Sri C. M. ARUMUGHAM.—Under what rule can we not do that?

Mr. DEPUTY SPEAKER.—You cannot question anything said outside this House.

ಶ್ರೀ ಎಚ್. ಎಂ. ಚನ್ನಬಸಪ್ಪ.—ಶರಾವತಿಯ ವಿಷಯವಾಗಿ ಕೊನೆಯದಾಗಿ ಮಾತನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಈಗಾಗಲೇ ಡಿಸೆಂಬರ್ 18ನೆಯ ತಾರೀಖಿನದಿವಸ ಈ ವಿಷಯ

(ಶ್ರೀ ಎಚ್. ಎಂ. ಚನ್ನಬಸಪ್ಪ)

ದಲ್ಲಿ ಕಂಟ್ರಾಕ್ಟ್ ಕೊಟ್ಟ ಬಗ್ಗೆ ಸವಿಸ್ತಾರವಾದ ಸ್ಟೇಟ್‌ಮೆಂಟ್‌ನ್ನು ಈ ಸಭೆಯಲ್ಲಿ ಮಾಡಿದೆ. ಮಾನ್ಯ ಸದಸ್ಯರು ಅದನ್ನು ಏಕೆ ಮಾಡಿದಿರಿ ಎಂದು ಕೇಳಿದರು. ನನಗಂತೂ ಬಹಳ ವ್ಯಸನವಾಯಿತು. ಆ ಪುಸ್ತಕ ಓದಿದ್ದಾರೋ ಇಲ್ಲವೋ ಎಂದು ಅನುಮಾನ ಬಂತು. ಏಕೆ ಸ್ಟೇಟ್‌ಮೆಂಟ್ ಮಾಡಿದೆ ಎಂಬುದನ್ನು ಮೊದಲನೆಯ ಪುಟದಲ್ಲೇ ಹೇಳಿದೆ. ಜನಗಳ ತಿಳಿವಳಿಕೆಗೆ ಮತ್ತು ಸಭೆಯ ಮಾನ್ಯ ಸದಸ್ಯರ ತಿಳಿವಳಿಕೆಗೆ ಒಂದು ಕಡೆಯಿಂದ ಕೊನೆಯ ವರೆಗೂ ನಿಮ್ಮ ಮನಸ್ಸಿನಲ್ಲಿ ಏನು ಅಭಿಪ್ರಾಯ ಹುಟ್ಟಬಹುದು, ಏನು ಪ್ರಶ್ನೆ ಹಾಕಬಹುದು ಎಂಬುದೆಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಪ್ರತಿಯೊಂದನ್ನು ಕೂಡ ಸವಿಸ್ತಾರವಾಗಿ ಆ ಸ್ಟೇಟ್‌ಮೆಂಟ್‌ನಲ್ಲಿ ತಿಳಿಸಿದೆ. ಏನು ಪ್ರೊಸೀಜರ್ ಅನುಸರಿಸಿದ್ದೇವೆ, ಯಾವ ರೀತಿಯಲ್ಲಿ ರೇಟ್ ನಿರ್ಧಾರ ಮಾಡಿದ್ದೇವೆ ಎಂಬುದನ್ನು ಕೊಟ್ಟಿದ್ದೇವೆ. ಆದುದರಿಂದ ಅದನ್ನು ಪುನಃ ಹೇಳಿದರೆ ಪುನರುಕ್ತಿಯಾಗುತ್ತದೆ. ಮಾನ್ಯ ಯುವಕ ಸ್ನೇಹಿತರಾದ ಆರ್ಮುಗಂ ಅವರು ಇದನ್ನು ಓದಿದ್ದರೆ ಆ ಪ್ರಶ್ನೆ ಹಾಕುತ್ತಾ ಇರಲಿಲ್ಲ. ಈಗ ಶರಾವತಿಯ ಪ್ರಶ್ನೆಯಲ್ಲಿ ನಾವು ವಿಚಾರ ಮಾಡಬೇಕಾದದ್ದು ಮೂರೇ ಭಾಗ. ಒಂದನೆಯದು Rules of Procedure. P.W.D. ಕೋಡ್ ಪ್ರಕಾರ ಮತ್ತು ಏನೇನು ಪದ್ಧತಿ ಇಟ್ಟುಕೊಂಡು ಬಂದಿದ್ದೇವೆಯೋ ಅದನ್ನು ಸರಿಯಾಗಿ, ಸಮರ್ಪಕವಾಗಿ ಅನುಷ್ಠಾನಕ್ಕೆ ತಂದಿದ್ದೇವೆಯೇ, ಇಲ್ಲವೇ; competent authority ಮೂಲಕ ಆಗಿದೆಯೇ, ಇಲ್ಲವೇ ಎಂಬುದು.

ಎರಡನೆಯದು ರೇಟ್ ವಿಷಯ. ಕ್ರಮವಾಗಿ ರೇಟ್ ನಿರ್ಧಾರವಾಗಿದೆಯೇ ಇಲ್ಲವೇ, ಯಾರ್ಯಾರು ನಿರ್ಧಾರ ಮಾಡುವುದು ಎಂದು ಇದೆಯೋ ಅದಕ್ಕನುಗುಣವಾಗಿ ಆಗಿದೆಯೇ ಇಲ್ಲವೇ ಎಂಬುದು. ಇದಿಷ್ಟನ್ನೂ ಇಲ್ಲಿ ವಿಸ್ತಾರವಾಗಿ ಕೊಟ್ಟಿದೆ. ಮೊದಲನೆಯದಾಗಿ procedure ಏನು ಎಂಬುದನ್ನು ವಿವರವಾಗಿ ಕೊಟ್ಟಿದೆ. ಫಾರಿನ್ ಎಕ್ಸ್‌ಚೇಂಜ್ ಇಲ್ಲವೇ, ಮೆಷಿನರಿ ಇಲ್ಲವೇ, ಕಂಟ್ರಾಕ್ಟ್ ಏಕೆ ಕೊಡಬೇಕಾಗಿತ್ತು ಎಂದು ಹೇಳಿ ಪ್ರಶ್ನೆಮಾಡಿದರು. ನನಗೆ ಪಶ್ಚಾತ್ತಾಪವಾಯಿತು. ಅವರಿಗೆ ಈ ವಿಷಯದಲ್ಲಿ ಅನುಭವ ಕಡಿಮೆ ಎಂದು ಅನಿಸಿತು. ಸರ್ಕಾರಕ್ಕೆ ಶಕ್ತಿ, ಸಾಮರ್ಥ್ಯ ಇಲ್ಲ ಎಂದಲ್ಲ. ಫಾರಿನ್ ಎಕ್ಸ್‌ಚೇಂಜೂ ಇದೆ, ಹಣದ ಶಕ್ತಿಯೂ ಇದೆ. ಇಂಜನಿಯರುಗಳೂ ಇದ್ದಾರೆ. ಪೂರ್ವ ಕಾಲದಲ್ಲಿ ಸಣ್ಣಪುಟ್ಟ ಕಾಂಗಾರಿಗಳು ಎಂದರೆ ಕೃಷ್ಣರಾಜಸಾಗರ, ತುಂಗಭದ್ರಾ ಮತ್ತು ಭದ್ರಾ ಈ ಕೆಲಸಕಾರ್ಯಗಳನ್ನು ನಡೆಸಿದ ಕಾಲಕ್ಕೆ ಸರ್ಕಾರ ಕಾನೂನು ಬಿಟ್ಟು ಆಜ್ಞೆಮಾಡಿ ಡಿಪಾರ್ಟ್‌ಮೆಂಟಲ್ ಆಗಿ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿದರು. ರೂಲ್ಸ್ ಪ್ರಕಾರ ಮಾಡಬೇಕಾದರೆ ಟೆಂಡರ್ ಕರೆದು, ಕಂಟ್ರಾಕ್ಟ್ ಕೊಟ್ಟು ಆ ಮೂಲಕವೇ ಮಾಡಿಸಬೇಕು. ಆದ್ದರಿಂದ ಇಲ್ಲಿ ಮಾಡಿರುವುದು ನಿಯಮಬದ್ಧವಾಗಿದೆಯೇ ವಿನಾ ನಿಯಮಕ್ಕೆ ವಿರುದ್ಧವಾಗಿಲ್ಲ. ಎರಡನೆಯದು ಈ ವಿದ್ಯುತ್ ಯೋಜನೆಗಳ ಕೆಲಸಕಾರ್ಯಗಳು ಸಮರ್ಪಕವಾಗಿ ನಡೆಯುವಾಗ ಸಾಂಪ್ರದಾಯಿಕವಾಗಿ ಇರತಕ್ಕ Red tape procedure ಎಲ್ಲಾ ಕಡಮೆ ಆಗಿ ಆಜ್ಞೆಗಳನ್ನು ಆಗಿಂದಾಗ್ಗೆ ತಕ್ಷಣ ತೆಗೆದುಕೊಂಡು ಕೆಲಸಕಾರ್ಯಗಳು ಸುಸೂತ್ರವಾಗಿ ನಡೆಯುವುದಕ್ಕೆ ಹೈಪವರ್ ಬೋರ್ಡನ್ನು ಏರ್ಪಾಡುಮಾಡಿದ್ದೇವೆ. ಅವರಲ್ಲಿ 8 ಜನ ರಿಟೈರ್ಡ್ ಚೀಫ್ ಇಂಜನಿಯರುಗಳು ಇದ್ದಾರೆ. ಅವರ ಪೈಕಿ ಮೈಸೂರು ಸಂಸ್ಥಾನದ ರಿಟೈರ್ಡ್ ಚೀಫ್ ಇಂಜನಿಯರು ಆರು ಜನರಷ್ಟೇ ಅಲ್ಲದೆ ಇಡಿಯ ಭಾರತದಲ್ಲಿಯೇ ವಿಖ್ಯಾತರಾದ ಇಬ್ಬರು ರಿಟೈರ್ಡ್ ಇಂಜನಿಯರುಗಳು ಇದ್ದಾರೆ, ಅವರ ಜೊತೆಗೆ ಫೈನಾನ್ಸ್ ಡಿಪಾರ್ಟ್‌ಮೆಂಟಿನ ಪ್ರತಿನಿಧಿಗಳು ಸೆಕ್ರೆಟರಿಗಳಾಗಿದ್ದಾರೆ. ಪಿ. ಡಬ್ಲ್ಯು. ಡಿ. ಸೆಕ್ರೆಟರಿ, ಪ್ಲಾನಿಂಗ್ ಸೆಕ್ರೆಟರಿಅವರು ಇದ್ದಾರೆ. ಅವರು ಕಂಟ್ರಾಕ್ಟ್ ಕೊಡುವುದು, ರದ್ದುಮಾಡುವುದು, ಬದಲಾವಣೆ ಮಾಡುವುದು ಇದನ್ನೆಲ್ಲಾ ಮಾಡುತ್ತಾರೆ. ಆ ಅಧಿಕಾರಗಳನ್ನೆಲ್ಲಾ ಅವರಿಗೆ ಕೊಡಲಾಗಿದೆ.

"The functions of this Board are to consider from time to time and take decision, on the following matters :—

(*a*) To give financial sanction to specific detailed items of expenditure within the limits of budget provision in each year ;

(*b*) To make contracts and sanction tenders in respect of matters which may be beyond the limits of powers delegated to the Chief Electrical Engineer and the Special Chief Engineer ;

(*c*) To make variations of contracts and estimates, sanction for which may be beyond the competence of the Chief Electrical Engineer and the Special Chief Engineer, etc., etc."

ಅವರು ಯಾವ ಕ್ರಮವನ್ನು ಅನುಸರಿಸುತ್ತಾರೆ ಎಂಬುದನ್ನು ತಿಳಿಸಿದ್ದೇವೆ. ವಿಶೇಷ ರೀತಿಯ ಆಜ್ಞೆ ಮಾಡಿ,—ಪೀಸ್‌ವರ್ಕ್ಸ್ ಕೊಡಬೇಕೇ ಇಲ್ಲವೇ ಎಂಬುದೂ, ಕಾನೂನು ಪ್ರಕಾರ ಟೆಂಡರ್ ಕರೆಯಬೇಕು, ಕಂಟ್ರಾಕ್ಟ್ ಕೊಡಬೇಕು ಎನ್ನುವ ವಿಷಯವು ಕೂಲಂಕಷವಾಗಿ ಬೋರ್ಡಿನಲ್ಲಿ ಚರ್ಚೆ ಆಗಿ, ಈ ಕೆಲಸ ಬಹಳ ಮಹತ್ವದ್ದು ಇದೆ, ಅತಿ ಶೀಘ್ರವಾಗಿ ಆಗ ಬೇಕಾದ ಕೆಲಸ, ಸುಮಾರು 6 ಕೋಟಿ ಘನ ಅಡಿ ಕಟ್ಟಡ ಆಗಬೇಕು, 1962ನೆಯ ಇಸವಿ ಡಿಸೆಂಬರ್‌ನಲ್ಲಿ ಆಗಬೇಕಾಗಿದೆ, ಹೀಗಿರುವುದರಿಂದ ನಮ್ಮಲ್ಲಿರತಕ್ಕ ಸಾಧನ ಸಂಪತ್ತು, ಸಿಬ್ಬಂದಿ ಎಷ್ಟಿದೆ ಎಂಬುದನ್ನೆಲ್ಲಾ ಲೆಕ್ಕ ಹಾಕಿ, ಕಾಲಕ್ಕೆ ಸರಿಯಾಗಿ ಆಗಬೇಕಾದ ಪಕ್ಷದಲ್ಲಿ ದೇಶದಲ್ಲಿ ಯಾವ ಯಾವ ವ್ಯಕ್ತಿಗಳಿದ್ದಾರೆ, ಅವರಿಂದ ಎಷ್ಟೆಷ್ಟು ಕೆಲಸ ಮಾಡಿಸಿಕೊಳ್ಳಬಹುದು ಎಂಬುದನ್ನೆಲ್ಲಾ ಯೋಚನೆ ಮಾಡಿ ಒಂದು ತೀರ್ಮಾನವನ್ನು ಆ ಬೋರ್ಡ್ ತೆಗೆದುಕೊಂಡಿತು. ಆದುದರಿಂದ ಶ್ರೀ ಆರ್ಮುಗಂಅವರಿಗೆ ಮಿನಿಸ್ಟರೇ ಕುಳಿತುಕೊಂಡು ತೀರ್ಮಾನ ತೆಗೆದುಕೊಂಡರು ಎನ್ನುವ ಅಭಿಪ್ರಾಯವಿದ್ದರೆ ಅದು ಸರಿಯಲ್ಲ ತಪ್ಪು ಎಂದು ಹೇಳುತ್ತೇನೆ.

"There has of late been some criticism about the entrustment

of the Civil Works in Sharavathy Project like construction of Dams and Tunnels......................It has been complained that this procedure has put out of employment thousands of piece workers and labourers working in the Project..........................It is therefore considered necessary to clear the misapprehension in this behalf."

ಟೆಂಡರ್ಸ್ ಕರೆದ ಮೇಲೆ ಪ್ರತಿಯೊಂದಕ್ಕೂ ಎಷ್ಟು ಟೆಂಡರ್ ಬಂತೋ ಅದನ್ನೆಲ್ಲಾ ಚೀಫ್ ಇಂಜನಿಯರು ಟೆಂಡರ್‌ದಾರರ ಮುಂದೆ ತೆಗೆದು ಕಂಪ್ಯಾರೆಟಿವ್ ಸ್ಟೇಟ್‌ಮೆಂಟ್ ಹಾಕಿ ಅವರವರ ಯೋಗ್ಯತೆ ಏನು, ಅವರ ಹಿಂದಿನ ಮುಂದಿನ ಚರಿತ್ರೆ ಏನು, ಶಕ್ತಿ ಸಾಮರ್ಥ್ಯ ಏನು, ಏನೇನು ಕೆಲಸ ಮಾಡಿದ್ದಾರೆ ಇತ್ಯಾದಿಗಳ ನೋಟ್ ಹಾಕಿ ಆ ಬೋರ್ಡಿನ ಮುಂದೆ ಇಟ್ಟರು. ಇಟ್ಟಮೇಲೆ ಇದನ್ನೆಲ್ಲಾ ಟೆಕ್ನಿಕಲ್ ಸಬ್ ಕಮಿಟಿ ಅವರು ಪರಿಶೀಲನೆ ಮಾಡಿ ಹಿಂದೆ ಡೆಟ್‌ರೇಟ್ ಎಂದು prepare ಮಾಡುತ್ತಾ ಇದ್ದರು. ಆ ರೀತಿ ಯಾವ ಯಾವ ಕೆಲಸಕ್ಕೆ ಆ ಸ್ಥಳದಲ್ಲಿ ಎಷ್ಟು ಖರ್ಚು ಆಗಬಹುದು ಎಂಬ ಪಟ್ಟಿ ಮಾಡಿ, ಅವನ್ನು ಸ್ಕ್ರೂಟಿನೈಸ್ ಮಾಡಿ ಅದನ್ನು ಎಡಗಡೆ ಇಟ್ಟುಕೊಂಡು ಬಲಗಡೆ ಇವರು ಕೊಟ್ಟಿರುವ ಪಟ್ಟಿ ಇಟ್ಟುಕೊಂಡು ಯಾವುದು ಸರಿ ಯಾವುದು ತಪ್ಪು ಯಾವುದು ಕಡಮೆ ಯಾವುದು ಹೆಚ್ಚು ಎಂಬುದನ್ನು ಪರಿಶೀಲನೆ ಮಾಡಿ ಅವರು ತಮ್ಮ ಸಲಹೆಗಳನ್ನು ಬೋರ್ಡ್ ಮುಂದೆ ಇಡುತ್ತಾರೆ. ಟೆಕ್ನಿಕಲ್ ಸಲಹೆಗಳಲ್ಲದೆ ಹಣಕಾಸಿನ ದೃಷ್ಟಿಯಿಂದಲೂ ಆಡಳಿತೆಯ ವಿಚಕ್ಷಣೆಯಿಂದಲೂ ಕೊಟ್ಟಿರತಕ್ಕಂಥ ಸಲಹೆಗಳನ್ನು ಪರಿಶೀಲನೆ ಮಾಡಿ ಈ ಬೋರ್ಡು ತೀರ್ಮಾನ ಮಾಡುವಾಗ ಅನೇಕ ವಿಷಯಗಳನ್ನು ಚರ್ಚೆ ಮಾಡಿ ತಿಳಿದುಕೊಳ್ಳಬೇಕಾಗುತ್ತದೆ. ಬರಿಯ negotiations ಮಾಡುತ್ತಾರೆ, ಟೆಂಡರ್ ಕಾಲ್‌ಫಾರ್ ಮಾಡುವುದಕ್ಕೆ ಮುಂಚೆ discuss ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ, Tender call for ಮಾಡಿ ಕಮಿಟಿಯವರು ಕುಳಿತುಕೊಂಡು ಕೆಲಸ ಮಾಡಬೇಕಾಗುತ್ತದೆ. ಅವಶ್ಯಕವಿದ್ದ ಪಕ್ಷದಲ್ಲಿ ಯಾವ ಕಾರಣಗಳಿಗೋಸ್ಕರ negotiations ಮಾಡಬೇಕಾಗುತ್ತದೆ, ಎಂಬುದನ್ನ ತಿಳಿದುಕೊಳ್ಳಬೇಕು. Negotiations are more or less inevitable in the case of big tenders. In most cases, it is very essential. ಇದು ಅವಶ್ಯಕ. ಇದೇನು ಒಂದು ಸಣ್ಣ ಬ್ರಿಡ್ಜ್ ಕಟ್ಟಿಸುವ ಕೆಲಸವಲ್ಲ, ಮೈಸೂರು ಸಂಸ್ಥಾನದಲ್ಲಿ, ಇಡಿಯ ಭರತ ಖಂಡದಲ್ಲಿ ಇಡಿಯ ಪ್ರಪಂಚದಲ್ಲಿಯೇ ದೊಡ್ಡ ದೊಡ್ಡ ಕೆಲಸ ಕಾರ್ಯಗಳನ್ನು ನಡೆಸಿದಂಥವರನ್ನು ಕರೆಸಿ elucidation of further facts ನೋಡಿ, ಬರೆದಿರತಕ್ಕಂಥ conditions ಏನೇನು ಇವೆ, ಅವುಗಳಲ್ಲಿ ಯಾವುದನ್ನಾದರೂ withdraw ಮಾಡುವುದಕ್ಕೆ ಸಿದ್ಧವಿದ್ದಾರೆಯೇ ಎಂಬುದನ್ನು ಚರ್ಚೆ ಮಾಡಬೇಕಾಗಿ ಬರುತ್ತದೆ. ಆದುದರಿಂದ negotiations ಅವಶ್ಯಕವಾಗಿದೆ.

"1. Finalise terms and conditions regarding the grant of foreign exchange, advance, machinery and equipment, payment of sales-tax and other taxes."

ಇದರ ವಿಷಯದಲ್ಲಿ ಅವರು conditions ಹಾಕಿರುತ್ತಾರೆ. ಯಾವುದನ್ನಾದರೂ withdraw ಮಾಡುತ್ತಾರೆಯೋ, ಯಾವುದನ್ನು ಮಾಡುವುದಿಲ್ಲ ಎಂಬುದನ್ನು ಚರ್ಚೆ ಮಾಡಬೇಕಾಗಿ ಬರುತ್ತದೆ. ಸರ್ಕಾರಕ್ಕೆ ಅನುಕೂಲವಾದ conditions, terms ಗಳಿಗೆ ಅವರನ್ನು ಒಪ್ಪಿಸಬೇಕಾಗುತ್ತದೆ.

"2. Finalise regarding the possible increase in rates owing to Governmental actions."

ಕೇಂದ್ರ ಸರ್ಕಾರದವರು ಟೈರ್ ಮೆಷಿನರಿ ಮೇಲೆ ಟ್ಯಾಕ್ಸ್ ಹಾಕಿಬಿಟ್ಟರೆ, ಅವರ ಆಜ್ಞೆಗಳ ದೆಸೆಯಿಂದ ಏನಾದರೂ ಹೆಚ್ಚು ಕಡಮೆಯಾದರೆ ಅದಕ್ಕೆ ನಾವು ಜವಾಬ್ದಾರರಲ್ಲ, ಸರ್ಕಾರಿ ಆಜ್ಞೆಯ ಮೂಲಕ ದರದಲ್ಲಿ ಏನಾದರೂ ಏರು ಪೇರು ಆದರೆ ಅದಕ್ಕೆ ನಾವು ಜವಾಬ್ದಾರರಲ್ಲ.

"3. Controlled articles like steel and cement."

ಈ ಪದಾರ್ಥಗಳು ಅವಶ್ಯಕವಾದುವುಗಳು. ಇವುಗಳನ್ನು supply ಮಾಡತಕ್ಕವರು ಯಾರು, ಅವರು ಕೊಂಡುಕೊಳ್ಳುವಾಗ ಧಾರಣೆಯಲ್ಲಿ ಏನಾದರೂ ಏರು ಪೇರು ಆದರೆ ಏನು ಮಾಡಬೇಕು ಎಂಬುದನ್ನು ನಿರ್ಧಾರ ಮಾಡಬೇಕಾಗುತ್ತದೆ.

"4. Alternative designs and specifications."

ಕೊಟ್ಟಿರುತ್ತಾರೆ. ಕಡಮೆ ರೇಟು ಇರುತ್ತದೆ ಅವು ಸಮರ್ಪಕವಾಗಿವೆಯೇ ಸರಿಯಾಗಿ ಇವೆಯೇ ಎಂಬುದನ್ನು ಅವರನ್ನು ಕೇಳಿ further details elucidation ಮಾಡಬೇಕಾಗುತ್ತದೆ.

"5 Financial and other abilities, technical personnel and machinery required."

ಅವರು ಎಲ್ಲೆಲ್ಲಿ ಯಾವ ಯಾವ ದೊಡ್ಡ ದೊಡ್ಡ ಕೆಲಸಗಳನ್ನು ಎಷ್ಟೆಷ್ಟು ಕಾಲದಲ್ಲಿ ಮಾಡಿರುತ್ತಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ.

"6. Collaboration, if any."

ಇನ್ನೊಬ್ಬರು collaborate ಮಾಡಿದ್ದಾರೆಯೇ, ಅವರಿಗೆ ಈ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಶಕ್ತಿ ಸಾಮರ್ಥ್ಯವಿದೆ ಎಂದು ಸಮರ್ಥನೆ ಮಾಡಿದ್ದಾರೆಯೇ ಎನ್ನುವುದನ್ನು ತಿಳಿದುಕೊಳ್ಳಬೇಕಾಗುತ್ತದೆ. Negotiations ಇಲ್ಲದೆಯೇ ಮಾಡುವುದಕ್ಕಾಗುತ್ತದೆಯೇ? ಇದೇನು ಒಂದು ಸಣ್ಣ ಸ್ಕೂಲ್ ಬಿಲ್ಡಿಂಗ್ ಕಟ್ಟಿಸುವ ಕೆಲಸವಲ್ಲ, ಬೋರ್ಡಿನಲ್ಲಿ ತೀರ್ಮಾನ ಮಾಡುವಾಗ್ಗೆ ಕುಳಿತುಕೊಂಡು negotiations ಮಾಡಿದ ಮೇಲೆ ತೀರ್ಮಾನ ಮಾಡಬೇಕಾಗುತ್ತದೆ. ದೊಡ್ಡ ದೊಡ್ಡ ಟೆಂಡರುಗಳ ಬಗ್ಗೆ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ವಿಚಾರಮಾಡಿ ನಿರ್ಧಾರ ಮಾಡಬೇಕಾಗುತ್ತದೆ.

ಇನ್ನು ರೇಟ್ ಬಗ್ಗೆ ಹೇಳಿದ್ದನ್ನು ಕೇಳಿದರೆ ನನಗೆ ಆಶ್ಚರ್ಯವಾಗಿದೆ. ಈ ಮಾನ್ಯ ಸಭೆಯನ್ನು ಕೇಳ

(ಶ್ರೀ ಎಚ್. ಎಂ. ಚನ್ನಬಸಪ್ಪ)

ದೆಯೇ tender call for ಮಾಡಿದರು ಎಂದು ಅವರು ಹೇಳಿದರು. ಅವರ ಅನುಭವ ಎಷ್ಟು ಪ್ರಮಾಣದ್ದಿದೆ ಎಂಬುದು ಇದರಿಂದ ಗೊತ್ತಾಗುತ್ತದೆ ಈ ಸಭೆಯ ಕೆಲಸ ಕಾರ್ಯಗಳೇ ಬೇರೆ.

Sri C. M. ARUMUGHAM.—I said that when major projects were taking place, you should have consulted the House.

Sri H. M. CHANNABASAPPA.—It is not correct for the Government to come before this House to decide whether to call for tenders or to do it departmentally or at what rate it should be given. I tell you, it is not correct and it is not the correct procedure. Nowhere in the history of the world or in the history of Parliament is it done. I am only sorry he is lacking in information.

Sri C. M. ARUMUGHAM.—You know everything.

Sri H. M. CHANNABASAPPA.—Somebody has briefed you and you come and repeat it here, parrot-like.

Sri C. M. ARUMUGHAM.—Equally somebody has briefed you and you are saying this.

Sri M. DANAPPA (Harapanahalli).—After knowing all facts only, the Hon'ble Member Sri Arumugham has stated it here. If what he says is not correct, will you appoint a committee to investigate ?

Sri B. SHAMSUNDER.—Are you going to appoint a Committee to investigate the truth of it ?

Sri H. M. CHANNABASAPPA.—I will tell you about it. Please have patience. Sir, the Hon'ble Members are interrupting me, although I have not yielded.

ಆದುದರಿಂದ ಈ ಸಭೆಯ ಗಮನಕ್ಕೆ ತಂದು tender call for ಮಾಡತಕ್ಕಂಥಾದ್ದಾಗಲಿ ಕೆಲಸ ಕಾರ್ಯಗಳನ್ನು ನಡೆಸತಕ್ಕಂಥಾದ್ದು ಆಗಲಿ ಅದು ಸರಿಯಲ್ಲ, ಸಮರ್ಪಕವಲ್ಲ, ರೂಲ್ಸ್ ಪ್ರಕಾರ ಅಲ್ಲ; ಈ ವಿಷಯವನ್ನು ತಾವು ತಿಳಿಯಬೇಕು ಎಂದು ನನ್ನ ಆಶೆ.

ಇನ್ನು ಈ ರೇಟುಗಳನ್ನು ನಿರ್ಧಾರ ಮಾಡತಕ್ಕಂತವರು ಯಾರು ? ಮತ್ತು ಯಾವ ಆಧಾರದ ಮೇಲೆ ಮಾಡಬೇಕು ಎನ್ನತಕ್ಕಂಥಾದ್ದು ಎರಡನೆಯ ಪ್ರಶ್ನೆ. ಈ ದರಗಳನ್ನು ನಿಗದಿ ಮಾಡುವಾಗ ಅನೇಕ ವಿಷಯಗಳು ಇದರಲ್ಲಿ ಒಳಗೊಂಡಿವೆ. ಒಂದೇ ಕೆಲಸದ ವಿಷಯದಲ್ಲಾದರೂ ದರಗಳನ್ನು ನಿಗದಿ ಮಾಡುವಾಗ ಕೆಳಕಂಡಂತೆ ಕೆಲವು ಅಂಶಗಳನ್ನು ಸಾಮಾನ್ಯವಾಗಿ ಗಮನಿಸಬೇಕಾಗುತ್ತದೆ. ಒಂದನೆಯದು terms of agreement. ಕಂಟ್ರಾಕ್ಟರಿಗೂ ಸರ್ಕಾರಕ್ಕೂ ಯಾವ ರೀತಿ ಕಂಡೀಷನ್ ವಿಧಾಯಕವಾಗಿರುತ್ತದೆಯೋ ಅದರ ಮೇಲೆ ಕೂಡ ದರ ಡಿಪೆಂಡಾಗುತ್ತದೆ. ಎರಡನೆಯದು price level of the raw materials like stone, kankar, brick, sand etc. Price level ಮೇಲೆ ಸಹ ದರ ನಿಗದಿಮಾಡುವುದು ಡಿಪೆಂಡಾಗುತ್ತದೆ.

ಮೂರನೆಯದು situation and line of the section or work spot approach facilites for transmission of machineries. ಯಾವ ಜಾಗದಲ್ಲಿ ಕೆಲಸ ಮಾಡಬೇಕು ಆ ಜಾಗ ಯಾವ ಸ್ಥಳದಲ್ಲಿದೆ, ಅಲ್ಲಿ ಬ್ರಿಡ್ಜ್ ಫೆಸಿಲಿಟೀಸ್ ಏನಿದೆ, ಮೆಷೀನರಿ ಹೋಗಲು ಟ್ರಾನ್ಸ್‌ಪೋರ್ಟ್ ಫೆಸಿಲಿಟಿ ಏನಿದೆ ಎಂಬುದನ್ನೂ ಗಮನಿಸಬೇಕಾಗುತ್ತದೆ.

ನಾಲ್ಕನೆಯದು depth from which the height to which masonry has got to be done. ಎಷ್ಟು ಆಳದ ಕೆಳಗೆ ಕೆಲಸಮಾಡಬೇಕು, ಎಷ್ಟು ಮೇಲೆ ಹೋಗಿ ಕೆಲಸಮಾಡಬೇಕು ಎಂದು ಆಳ ಮತ್ತು ಎತ್ತರ ನೋಡಿ ದರ ನಿಗದಿ ಮಾಡಬೇಕಾಗುತ್ತದೆ.

ಐದನೆಯದು distance of surki mortar mills. ಸುರ್ಕಿ ಮಾರ್ಟರ್ ಎಷ್ಟು ದೂರದಿಂದ ತರಬೇಕೆಂಬುದನ್ನೂ ಗಮನಿಸಬೇಕಾಗುತ್ತದೆ.

ಆರನೆಯದು, natural facilities obtaining for putting up Tippa lines. Tippa line ಹಾಕುವುದಕ್ಕೆ ಅನುಕೂಲವಿರುವುದನ್ನು ಸಹ ನೋಡಬೇಕು. ಆಮೇಲೆ working space. ಕೆಲಸ ಮಾಡುವ ಕಡೆ ಜಾಗದ ಅಗಲ ಎಷ್ಟಿದೆಯೋ ಅದರ ಮೇಲೂ ದರ ಡಿಪೆಂಡಾಗುತ್ತದೆ. ಹೆಚ್ಚು working space ಇದ್ದರೆ ಹೆಚ್ಚು ಜನ ಕೆಲಸಮಾಡಬಹುದು, ಕಡಮೆ space ಇದ್ದರೆ ಕಡಮೆ ಜನ ಕೆಲಸಮಾಡಬೇಕಾಗುತ್ತದೆ.

ಅನಂತರ living conditions of the work spot ಅಮೆನಿಟೀಸ್ ಏನಿದೆಯೆಂಬುದನ್ನೂ ನೋಡಬೇಕಾಗುತ್ತದೆ. Availability of skilled and unskilled labour and wage structure. ಸ್ಥಳದಲ್ಲಿ ಕೆಲಸ ಮಾಡುವ ಜನರ ಅಭಾವವಿರಬಹುದು, ಅದನ್ನು wage structureನ್ನೂ ಗಮನಿಸಬೇಕಾಗುತ್ತದೆ.

Distance from stone and line quarries. ಕೆಲಸ ಮಾಡುವ ಜಾಗದಿಂದ ಸುಣ್ಣದ ಕ್ವಾರಿ ಮತ್ತು ಕಲ್ಲಿನ ಕ್ವಾರಿಗಳಿಗೆ ಎಷ್ಟು ದೂರವಿದೆ, ಆ ಕ್ವಾರಿಗಳಲ್ಲಿ ಎಷ್ಟು ಕಲ್ಲು ಸಿಕ್ಕುತ್ತದೆ ಮತ್ತು overload ಎಷ್ಟು ಹೋಗಬೇಕು, conditions of the quarries, their potentialities and the overburden to be removed and the speed with which it has got to be removed ಇವನ್ನು ಸಹ ಗಮನದಲ್ಲಿಡಬೇಕಾಗುತ್ತದೆ. ನಾಲ್ಕು ವರ್ಷ ಕೆಲಸಮಾಡಿದರೆ ಒಂದು ದರ, ಮೂರು ವರ್ಷ ಮಾಡಿದರೆ ಒಂದು ದರ, ಒಂದೇ ವರ್ಷದಲ್ಲಿ ಮಾಡಬೇಕಾದರೆ ಒಂದು ದರ ಹೀಗೆಲ್ಲಾ ಇರುತ್ತದೆ. ದರ ನಿರ್ಧಾರ ಮಾಡುವಾಗ ಎಷ್ಟು ವೇಗದಲ್ಲಿ ಕೆಲಸ ನಡೆಯಬೇಕೆಂಬುದನ್ನು ಕೂಡ ಗಮನಿಸಬೇಕು. ಮತ್ತು ಯಾವ ಯಾವ ತರಹ ಮೆಷೀನರಿ ಉಪಯೋಗಮಾಡಬೇಕಾಗುತ್ತದೆ, Terms and conditions under which the works are to be carried out, conditions of payment, supply of foreign exchange,

penalty for breach of terms of the contract ಮುಂತಾದುವನ್ನೆಲ್ಲಾ ಗಮನಿಸಬೇಕಾಗುತ್ತದೆ. ಒಪ್ಪಂದ ಬ್ರೀಚ್ ಆದರೆ ಹೆಚ್ಚು ಕಡಮೆಯಾಗುತ್ತದೆ. ದೊಡ್ಡ ದೊಡ್ಡ ಕೆಲಸಗಳಲ್ಲಿ ಇವೆಲ್ಲವನ್ನೂ ದೃಷ್ಟಿಯಲ್ಲಿಟ್ಟು ಒಂದು ತೀರ್ಮಾನಮಾಡಬೇಕಾಗುತ್ತದೆ.

Sri G. VENKATAI GOWDA (Palaiyam).—We agree with all that. The point is, after having accepted the tender, why were the rates revised?

Sri H. M. CHANNABASAPPA.—It is not so. I am only giving you a background as to who is giving these rates and who is approving them, etc.

ಈ ದರಗಳನ್ನು ನಿರ್ಧಾರ ಮಾಡಿ ತಪ್ಪು ಸರಿ ಎಂದು ಹೇಳುವವರು ಇಂಜನಿಯರುಗಳು. ಈ ರೀತಿಯ ಕೆಲಸ ಮಾಡುವಾಗ ಷೆಡ್ಯೂಲ್ ಆಫ್ ರೇಟ್ಸ್ ಎಂದಿರುತ್ತದೆ. ಏನು ಡೇಟಾ ಇದೆ, ವರ್ಕಿಂಗ್ ರೇಟ್ ಹೇಗೆ ನಿರ್ಧಾರವಾಗುತ್ತದೆ ಎಂಬುದನ್ನೆಲ್ಲಾ ತಿಳಿದುಕೊಂಡರೆ ವಿಚಾರ ಚೆನ್ನಾಗಿ ಗೊತ್ತಾಗುತ್ತದೆ. ಎಲ್ಲಕ್ಕೂ ಡೇಟಾ, ದರ ಮುಂತಾದವನ್ನು ಇಂಜನಿಯರುಗಳು ಸಿದ್ಧಮಾಡಿದ್ದಾರೆ. ಟೆಂಡರ್ ಕಾಲ್‌ಫಾರ್ ಮಾಡುವ ಮುನ್ನ ಪ್ರತಿಯೊಂದು ಕೆಲಸಕ್ಕೂ ಡೇಟಾ ಮತ್ತು ದರ ಸಿದ್ಧ ಮಾಡಿದ ಮೇಲೆ ಕನ್ಸಲ್ಟೇಟಿವ್ ಇಂಜನಿಯರಿಂಗ್ ಕಮಿಟಿಯಿದೆ, ಇಂಜನಿಯರಿಂಗ್ ಸಬ್ ಕಮಿಟಿಯಿದೆ, ಟೆಕ್ನಿಕಲ್ ಮ್ಯಾಟರ್ ಬಂದರೆ ಇಂಜನಿಯರುಗಳು ಅಂಗೀಕಾರಮಾಡುತ್ತಾರೆ. ಟೆಂಡರ್ ಕರೆದ ಮೇಲೆ ಯಾವ ದರಕ್ಕೆ ಒಪ್ಪಿದ್ದಾರೆಂಬುದನ್ನು ನೋಡಿ; ಕನ್ಸಲ್ಟೇಟಿವ್ ಕಮಿಟಿ ಅದು ಸರಿಯೆ, ತಪ್ಪೆ, ಹೆಚ್ಚೇ ಅಥವಾ ಕಡಮೆಯೇ ಎಂದು ನೋಡಿ ಕ್ರಮಕೈಕೊಳ್ಳಬೇಕಾಗುತ್ತದೆ. ಕೆಲವು ವೇಳೆ ಲೋಯೆಸ್ಟ್ ದರ ಸಮರ್ಪಕವಾಗಿಲ್ಲ re-tender ಮಾಡಿ ಎಂದು ಸಮಿತಿ ಹೇಳಿರುವುದುಂಟು. ರಿಬೇಟ್ ಕೊಡಲು ಸಾಧ್ಯವೆ ಎಂದು ಕೇಳಿದಾಗ ಇಲ್ಲವೆಂದು ಹೇಳಿ ರೀಟೆಂಡರ್ ಮಾಡಿ ಎಂದು ಹೇಳಿದೆ. ಆದುದರಿಂದ ಇಲ್ಲಿ ಹೇಳಿರುವ ಅಭಿಪ್ರಾಯ ಸರಿಯಲ್ಲ ದರ ತೀರ್ಮಾನಿಸಲು ಡೇಟಾ ನಾನು ಹೇಳಿದಂತೆ ಆಧಾರವಾಗಿಟ್ಟುಕೊಳ್ಳುತ್ತಾರೆ.

Sri G. VENKATAI GOWDA.—Were quoted and accepted rates revised?

Sri H. M. CHANNABASAPPA.—It is not correct. ಅನೇಕ ಟೆಕ್ನಿಕಲ್ ಒಪೀನಿಯನ್ಸ್ ಪ್ರಕಾರ ಕೆಲಸ ನಡೆಯುತ್ತಿದೆ. ಅವುಗಳ ಅರಿವಾಗ ಬೇಕಾದರೆ ಚೀಫ್ ಇಂಜನಿಯರನ್ನಾಗಲಿ ಅಥವಾ ನನ್ನನ್ನಾಗಲಿ ಆಫೀಸಿನಲ್ಲಿ ಯಾವತ್ತು ಬೇಕಾದರೂ ಬೇಕಾದ ವಿಷಯ ಕೇಳಿ ತಿಳಿದುಕೊಳ್ಳಬಹುದೆಂದು ಅರಿಕೆ ಮಾಡಿದ್ದೇನೆ. ಕಾರಣ ಈ ವಿಷಯದಲ್ಲಿ ತಮಗೇ ಅಲ್ಲ, ಸಾರ್ವಜನಿಕರಿಗೂ ವಿವರ ತಿಳಿದುಕೊಳ್ಳುವುದಕ್ಕೆ ಹಕ್ಕಿದೆ ಮತ್ತು ಆ ವಿವರ ಒದಗಿಸುವುದಕ್ಕೆ ಯಾವತ್ತೂ ಸರ್ಕಾರ ಸಿದ್ಧವಾಗಿದೆ. ಈ ವಿಷಯದಲ್ಲಿ ಯಾವ ಕಾಲದಲ್ಲೂ ಬೇಜಾರಿಲ್ಲ. ಕಾರಣ ಇಷ್ಟು ದೊಡ್ಡ ಕೆಲಸವಾಗುತ್ತಿರುವಾಗ ವಿವರ ತಿಳಿದುಕೊಳ್ಳುವ ಕಾತರತೆ ಜನರಿಗಿದ್ದರೆ ಅದಕ್ಕಿಂತಲೂ ಹೆಚ್ಚಿನ ಪ್ರಗತಿ ಬೇರೆ ಇಲ್ಲ.

ಶ್ರೀ ಜಿ. ವೆಂಕಟೇಗೌಡ.—ಜನರು ಎಚ್ಚೆತ್ತರೆ ಸಂಸ್ಕೃತಿ ಪ್ರಚಾರ ಬೇಕೇ ಇಲ್ಲ.

Sri H. M. CHANNABASAPPA.—The Hon'ble Members must be anxious and I have no objection to understand it. But what I take objection to is when I am giving you all details and call upon the engineers to provide all the details and clear all doubts, there is absolutely no reason why the members without taking trying to know the facts make statements which are not correct.

ಆ ವೇಳೆ ಕಾಂಟ್ರಾಕ್ಟು ಕೊಟ್ಟಿರುವ ಟನಲ್‌ಗಳು, ಲಿಂಗನಮಕ್ಕಿ ಮತ್ತು ತಲಕಳಲೆ ಡ್ಯಾಂಗಳಿಗೆ ಕಾಂಕ್ರೀಟ್ ಸರಬರಾಯಿ ವಿಚಾರ ತಿಳಿಸಬೇಕಾಗಿದೆ. ಇವತ್ತು ಪ್ರತಿಯೊಂದು ಟೆಂಡರಿನಲ್ಲೂ ಏಳು ಟೆಂಡರುಗಳವರೆಗೆ ಬಂದು ದರಗಳಲ್ಲಿ ಕಾಂಪಿಟೀಷನ್ ಇದೆ. ಈ ದರಗಳನ್ನು ಇಂಜನಿಯರಿಂಗ್ ಕಮಿಟಿ ಪರಿಶೀಲಿಸಿ ಪ್ರತಿಯೊಂದು ಸಂದರ್ಭದಲ್ಲೂ ಅತಿ ಕಡಮೆಯಿರುವ ದರವನ್ನೇ ಒಪ್ಪಿಕೊಂಡಿದೆ. ಡೆಟಾ ಆಧಾರಕ್ಕನು ಗುಣವಾಗಿ ದರ ಇದೆಯೇ, ಇಲ್ಲವೇ ಎಂಬುದನ್ನು ಪರಿಶೀಲಿಸಿ ಕಡಮೆದರವನ್ನು ಒಪ್ಪಿಕೊಳ್ಳಬಹುದೆಂದು ಇಂಜನಿಯರಿಂಗ್ ಕಮಿಟಿ ತೀರ್ಮಾನಮಾಡಿ ಸಂಬಂಧಪಟ್ಟ ಬೋರ್ಡ್ ಒಪ್ಪಿ ಸಭೆ ಸಹ ಅಂಗೀಕರಿಸಿದೆ.

4-30 P.M.

ಒಟ್ಟಿನಲ್ಲಿ ಟನೆಲ್ 'supply of surki' ಮುಂತಾದುವುಗಳಿಗೆ ಯಾವ ಯಾವ ಟೆಂಡರ್ಸ್ ಎಷ್ಟೆಷ್ಟು ಬಂತು ಏನೇನು ಕಾರ್ಯ ಆಯಿತು ಎಂಬುದನ್ನು ಎಲ್ಲವನ್ನು ಕೂಡ ಪಬ್ಲಿಕ್ಕಿಗೆ ತಿಳಿಸುವುದಕ್ಕೆ ಸಿದ್ಧರಾಗಿದ್ದೇವೆ. ಒಂದು ತಿಳಿಸಬೇಕು, ಒಂದು ತಿಳಿಸಬಾರದು ಎಂಬ ಪ್ರಶ್ನೆಯೇ ಇಲ್ಲ. ಇದು ದೇಶದ ಸಮಸ್ಯೆ. ಅಂಕಿ ಅಂಶಗಳನ್ನು ಸಿದ್ಧವಾಗಿಟ್ಟುಕೊಂಡಿದ್ದೇವೆ. ಅದನ್ನು ಬೇಕಾದರೆ ಸಾರ್ವಜನಿಕರಿಗೆ ತಿಳಿಸಬಹುದು.

ಶ್ರೀ ಜಿ. ವೆಂಕಟೇಗೌಡ.—ಕಮಿಟಿಯವರು ಮಾಡಿದ ಡೇಟಾವನ್ನು ಸರ್ಕಾರದವರು ಒಪ್ಪಿಕೊಂಡರುತಾನೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದನ್ನು ಒಪ್ಪಿಕೊಳ್ಳದೆ ನಾವೇನು ಮಾಡುವುದಕ್ಕಾಗುತ್ತದೆ? ಡೇಟಾ ರೇಟು ಏನು ಎನ್ನುವುದು ಪ್ರತಿಯೊಂದು ಐಟಂ ಕೂಡ ವರ್ಕ್ ಔಟ್‌ಮಾಡಿದ್ದೇವೆ. ಪ್ರತಿಯೊಂದು ಅಂಕಿ ಅಂಶಗಳೂ ಇವೆ. ಯಾರು ನೋಡಿ ತಿಳಿದುಕೊಳ್ಳಬೇಕು ಎಂದು ಇಚ್ಛೆಪಟ್ಟರೂ ಕೂಡ ಡೇಟಾ ರೇಟನ್ನು ಎಕ್ಸ್‌ಪ್ಲೈನ್‌ಮಾಡುತ್ತೇವೆ. There is nothing wrong in the procedure ಯಾವ ಒಂದು ತಪ್ಪನ್ನು ಇಂಥಾ ರೂಲ್ಸ್ ಪ್ರಕಾರ ಮಾಡಿದ್ದೇವೆಂದು ಯಾರೂ ಬೆರಳು ತೋರಿಸುವಂತಿಲ್ಲ. ಎರಡನೆಯದು ರೇಟ್ಸ್ ವಿಷಯದಲ್ಲಿ ನಿನ್ನೆ ಮಾತನಾಡುವಾಗ current schedule of ratesಗಿಂತ 35 ಪರ್ಸೆಂಟ್ ಹೆಚ್ಚಿಗೆ ಕೊಟ್ಟಿದ್ದೇವೆ, ಎಂದು ಹೇಳಿದರೂ ಕರಾರ್‌ವಾಕಾಗಿ ಎಷ್ಟೆಷ್ಟು ಆಗಿದೆ ಎಂದು ಕೊಟ್ಟಿದೆ. ಪೇಜ್ 1 ರಲ್ಲಿ ಮೊದಲನೆ ಕಾಲಂನಲ್ಲಿ "Estimated amount according to current schedule of rates" ಎಂಬುದನ್ನೂ ಎರಡನೆಯ ಕಾಲಂನಲ್ಲಿ Estimated amount according to accepted tenders" ಎಂಬುದನ್ನೂ ಮೂರನೆಯ ಕಾಲಂನಲ್ಲಿ ಸರ್‌ಪ್ಲಸ್ ಯಾವ ಯಾವುದರಲ್ಲಿ ಎಕ್ಸೆಸ್ ಯಾವ ಯಾವುದು ಆಗಿದೆ ಕಡಿಮೆ ಯಾವ ಯಾವುದು ಆಗಿದೆ ಎಂಬುದನ್ನೂ ಕೊಟ್ಟಿದೆ ಲಿಂಗನ ಮಕ್ಕಿ ಡ್ಯಾಂನಲ್ಲಿ ಶೇಕಡ current schedule 7.64 ಹೆಚ್ಚಾಗಿದೆ ತಳಕಳಲೆ ಡ್ಯಾಂನಲ್ಲಿ 10.29 ಪರ್‌ಸೆಂಟ್ ಕಡಮೆ

(ಶ್ರೀ ಎಚ್. ಎಂ. ಚನ್ನಬಸಪ್ಪ)

ಯಾಗಿದೆ. Supply of surki 2.1 ಪರ್ಸೆಂಟ್ ಹೆಚ್ಚಾಗಿದೆ. ಸಪ್ಲೈ ಆಫ್ ಬರ್ನ್ಟ್ ಲೈಮಿನಲ್ಲಿ 5.07 ಪರ್ಸೆಂಟ್ ಕಡಮೆ ಆಗಿದೆ. ಒಟ್ಟಿನಲ್ಲಿ 2.9 ಪರ್ಸೆಂಟ್ ಕರೆಂಟ್ ಷೆಡ್ಯೂಲ್ ರೇಟಿಗಿಂತ ನಾವು ಎಕ್ಸ್‌ಪೆಕ್ಟ್ ಮಾಡಿರತಕ್ಕ ರೇಟಿಗಿಂತ ಹೆಚ್ಚಿಗೆ ಖರ್ಚಾಗಿದೆ ಎಂದರೆ 34,71,385 ರೂಪಾಯಿಗಳು ಅಥವಾ 2.9 ಪರ್ಸೆಂಟ್ ಕರೆಂಟ್ ಷೆಡ್ಯೂಲ್ ರೇಟಿಗಿಂತ ಜಾಸ್ತಿ ವರ್ಕ್‌ಔಟ್ ಆಗುತ್ತದೆ.

Sri C. M. ARUMUGHAM.—Is the current schedule of rate different from 1954-55 rates ?

Sri H. M. CHANNABASAPPA.—That rate was prevalent till 1958. You must understand what is meant by "schedule of rate." In Sharavathi there was no work done in the past. 1958-59ರಲ್ಲಿ ಒಂದು ರೇಟನ್ನು ಕೊಟ್ಟು ಏನು ಕೆಲಸ ಮಾಡುತ್ತಿದ್ದರೋ ಆ ರೇಟಿಗಿಂತ ಹೆಚ್ಚಿಗೆ ಕೊಡುತ್ತಿದ್ದೇವೆ. ಪೀಸ್‌ವರ್ಕ್‌ನಲ್ಲಿ ಅವರಿಗೆ ಕರೆಂಟ್ ರೇಟಿಗಿಂತ ಜಾಸ್ತಿಕೊಡುತ್ತೇವೆ. 1954–55 ರಲ್ಲಿ ಎಸ್ಟಿಮೇಟ್ ಮಂಜೂರಾಯಿತು. ಅರ್ತ್‌ವರ್ಕ್ ಕೆಲಸಕ್ಕೆ ನಾಲ್ಕು ರೂಪಾಯಿ ಪ್ರೊವೈಡ್ ಮಾಡಿದೆ. ಇವೊತ್ತು ಪೀಸ್‌ವರ್ಕಿಗೆ ಅವರಿಗೆ ಒಂದು ಘನ ಗಜಕ್ಕೆ 12⅛ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಆದುದರಿಂದ 1954-55ನೆಯ ಇಸವಿಯಲ್ಲಿ ನಾಲ್ಕು ರೂಪಾಯಿ ಏನು ಕೊಡುತ್ತಿದ್ದೆವು, ಅದೇ ಕೆಲಸಕ್ಕೆ 12 ರೂಪಾಯಿ ಚಿಲ್ಲರೆ ಯನ್ನು ಪೀಸ್‌ವರ್ಕಿಗೆ ಕೊಡುತ್ತಿದ್ದೇವೆ.

You cannot expect people to work at 1954-55 rates. Whatever rates might have been prevalent at that time, are the current rates. So, the schedule of rates for 1954-55 cannot hold good for 1959-60.

Sri C. M. ARUMUGHAM.—What was the rate prevailing in 1958 ?

Sri H. M. CHANNABASAPPA.—That is exactly the point. You please see page 18, Statement No. 1. If you had studied that, all these things would not have arisen. The average Departmental rates at Sharavathy at the time of calling for tenders with necessary additions for appropriate items was Rs. 222.21 for rubble masonry in cement mortar, Rs. 170.03 for rubble masonry in surki mortar, Rs. 55.86 for supply of surki and Rs. 260.35 for supply of burnt lime. That is the current schedule of working rate at that time making due provision for certain items set out in 'A'. The accepted rate is in some cases lower and in some cases higher. That is so far as the rates are concerned. They are consistant with the rates at which they were being worked at the time of calling for tenders and if you want further details, I will give the break-up of Rs. 222.21. It is not as though it is simply an off-hand figure. For the whole thing there is a break-up. If you want to see what is the break-up you are welcome to have it.

Sri C. K. RAJIAH SETTY.—When was the latest schedule of rates of that area was prepared and sanctioned ?

Sri H. M. CHANNABASAPPA.—Just before calling for tenders, they were prepared and considered by the Engineering Committee and after their examining and finalising them, these tender rates were compared with them.

Sri C. M. ARUMUGHAM.—On your demand, you can explain all that.

Sri H. M. CHANNABASAPPA.—It is not a thing which can be explained here. This is not an Engineering School. If you want to know, you must sit with the Engineers.

Sri M. RAMAPPA.—Unfortunately you have converted this House into a school.

Sri M. C. NARASIMHAN.—You too have become an Engineer. Would it be fair ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆದುದರಿಂದ ಈ ವಿವರಗಳನ್ನು ತಿಳಿಯಬೇಕು. ಎಂದರೆ ಸಭೆಯೊಳಗೆ ಚರ್ಚೆಮಾಡಿ ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಬೇಕಾದರೆ ಚೀಫ್ ಇಂಜಿನಿಯರ್ ಇದ್ದಾರೆ, ಮತ್ತೆ ಇಂಜಿನಿಯರಿಂಗ್ ಅಧಿಕಾರಿಗಳು ಇದ್ದಾರೆ, ಅವರಿಂದ ಬೇಕಾದರೂ ತಿಳಿದುಕೊಳ್ಳಬಹುದು. ನನಗೆ ತಿಳಿದ ಮಟ್ಟಿಗೆ ನಾನೂ ಎಕ್ಸ್‌ಪ್ಲೈನ್ ಮಾಡುತ್ತೇನೆ. ನನಗೆ ಮೀರಿದ್ದನ್ನು ಅವರು ಹೇಳುತ್ತಾರೆ. ಅವರಿಂದ ತಿಳಿದುಕೊಳ್ಳಬಹುದು. 35 ಪರ್ಸೆಂಟ್ ಹೆಚ್ಚಿಗೆ ಕೊಟ್ಟಿದ್ದಾರೆಂದು ಹೇಳತಕ್ಕದ್ದು ಸರಿಯಲ್ಲ. 1954-55 ನೆಯ ಇಸವಿಯಲ್ಲಿ ಇದ್ದಂತಹ ರೇಟಿಗೆ ಕಂಪೇರ್ ಮಾಡಿದರೆ 35 ಪರ್ಸೆಂಟ್ ವರ್ಕ್ ಔಟ್ ಆಗುವುದು ನಿಜ. ಪೀಸ್ ವರ್ಕ್ ಕಂಟ್ರಾಕ್ಟರ್ಸ್ ದೊಡ್ಡ ಪಾಮ್‌ಪ್ಲೇಟ್ ಹೊರಡಿಸಿ 35 ಪರ್ಸೆಂಟ್ ಹೆಚ್ಚಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಶ್ರೀ ಆರ್‌ಮುಗಂ ಅವರು ಹೇಳಿದರು. 1954-55 ರಲ್ಲಿ ಷೆಡ್ಯೂಲ್ ರೇಟ್ 125 ಇತ್ತು. ಈಗ 35 ಪರ್ ಸೆಂಟ್ ಹೆಚ್ಚಿಗೆ ಕೊಟ್ಟಿದ್ದೀರಿ ಎಂದು, ಅದು ಸರಿಯಲ್ಲ. ಆವೊತ್ತು 125 ಇದ್ದದ್ದು ಇವೊತ್ತು 154-156 ಆಗಿದೆ. ನಾವು ಎಕ್ಸ್‌ಪೆಕ್ಟ್ ಮಾಡಿರತಕ್ಕದ್ದು, it is in the neighbourhood of this rate. ಎಲ್ಲಾ ಸೆಕ್ಷನ್ನಿಗೂ ಒಂದೇ ರೇಟ್ ಮಾಡುವುದಕ್ಕಾಗುವುದಿಲ್ಲ. ಸನ್ನಿವೇಶ ತೊಂದರೆ ಅದರ ಮೇಲೆ ಹೋಗುತ್ತದೆ. ಶೇಕಡಾ 35 ಜಾಸ್ತಿ ಕೊಟ್ಟಿದ್ದೇವೆ ಎಂದು ನೀವು ತಿಳಿದಿದ್ದೀರಿ ಅದು ಸರಿಯಲ್ಲ ಶೇಕಡ 2.58 ಆಗುತ್ತದೆ. ಈ

ರೇಟು ಇವೊತ್ತಿಗೇ ಅಲ್ಲ. ಈ ವರ್ಷಕ್ಕೆ ಮುಂದಿನ ವರ್ಷಕ್ಕೆ ಅದರ ಮುಂದಿನ ವರ್ಷಕ್ಕೆ 1962 ನೆಯ ಡಿಸೆಂಬರ್ ಆಖೈರಿನವರೆಗೂ ಇದೇ ರೇಟು ಇರತಕ್ಕದ್ದು. ಅದರ ಮೇಲೆ ಹೆಚ್ಚು ಮಾಡುವುದಕ್ಕಾಗುವುದಿಲ್ಲ.

Sri C. M. ARUMUGHAM.—You have accepted tenders according to the scheduled rates and you have revised them.

Sri H. M. CHANNABASAPPA.—Seheduled rates are differnt from data rates, because these works have not been done in previous years. ಷೆಡ್ಯೂಲ್ ರೇಟ್ ತಯಾರು ಮಾಡಬೇಕಾದರೆ ಹಿಂದಿನ ವರ್ಷ ಆ ಕೆಲಸವನ್ನು ಯಾವ ಟೆಂಡರ್‌ನಲ್ಲಿ ಯಾವ ರೇಟಿನಲ್ಲಿ ಕೆಲಸ ಮಾಡಿದ್ದರು, ಅದನ್ನು ಆಧಾರವಾಗಿ ಇಟ್ಟುಕೊಂಡು ಮುಂದಿನ ವರ್ಷ ಏನು ಬದಲಾವಣೆ ಆಗಿದೆ ಎಂದು ನೋಡಿಕೊಂಡು ಷೆಡ್ಯೂಲ್ ರೇಟ್ ತಯಾರು ಮಾಡಬೇಕು.

ಹಿಂದಿನ ವರ್ಷ ಟೆಂಡರನ್ನು ಕರೆದಿರಲಿಲ್ಲ, ಕೆಲಸವೇನೂ ಇರಲಿಲ್ಲ, ಆದುರಿಂದ ಡ್ಯಾಟಾ ರೇಟಿಗಿಂತ ಎಲ್ಲ ಕೆಲಸಗಳನ್ನೂ ಮಾಡುತ್ತಾರೆ, ಸಿಮೆಂಟ್ ಕಾನ್‌ಕ್ರೀಟಿನ ಕೆಲಸ ಮಾಡುತ್ತಾರೆ. ಇದಕ್ಕೆ ಹೇಗೆ ರೇಟನ್ನು ಕೊಡಲಾಗಿದೆ ಹಾಗೆ ಸಾಯಿಲ್‌ಗಾಗಿ ಮತ್ತು ಮರಳಿಗಾಗಿ ಎಂಬತ್ತು ಮೈಲಿಗಳಿಂದ ತರುವುದಕ್ಕಾಗಿ ಏನು ರೇಟನ್ನು ಕೊಡಲಾಗಿದೆ ಎನ್ನುವ ವಿವರಗಳನ್ನೆಲ್ಲಾ ಸೇರಿಸಿ ಡ್ಯಾಟಾ ರೇಟನ್ನು ಮಾಡುತ್ತಾರೆ. ಕೆಲವು ಕಡೆಗಳಲ್ಲಿ ರೇಟು ಕೊಟ್ಟಿರುವುದು ಸರಿಯಲ್ಲ. ನಾವು ಮರಳನ್ನು ಕೊಡಲು ರಿಸರ್ವ್ ಮಾಡಿಕೊಂಡಿದ್ದೇವೆ.

Sri C. M. ARUMUGHAM.—You agree that you are selling them this sand.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆ ನಾವು 80 ಮೈಲಿ ದೂರದಿಂದ ತೆಗೆದುಕೊಂಡು ಬರಲು ರೇಟ್ ಏನಾಗುತ್ತೋ ಅದರಂತೆ ಕೊಟೇಷನ್ನು ಕೂಡ ಕೊಟ್ಟಿದ್ದಾರೆ. 80 ಮೈಲಿಗಳಿಂದ ತರುವ ಮರಳನ್ನೂ ಅವರ ಕೆಲಸಕ್ಕಾಗಿ ಕೊಟ್ಟು ಅದನ್ನೂ ಉಪಯೋಗಿಸಿಕೊಳ್ಳಬೇಕೆಂದು ಮಾಡಲಾಗಿದೆ. ಅಲ್ಲಿರತಕ್ಕ ಮರಳು ಒಂದೂವರೆ ತಿಂಗಳಿಗಿಂತ ಹೆಚ್ಚಾಗಿ ಬರುವುದಿಲ್ಲ. ಕೆಲಸ ನಡೆಯುವ ದೃಷ್ಟಿಯಿಂದ ಅಲ್ಲಿಂದ ಮರಳನ್ನು ತರಬೇಕೆಂದು ರಿಸರ್ವ್ ಮಾಡಲಾಗಿದೆ. ನಾವು ಇಟ್ಟುಕೊಂಡಿರುವುದನ್ನೂ ಅವರಿಗೇ ಮಾರುತ್ತೇವೆ. ಆದುದರಿಂದ ತಾವೇನು ಇದರ ಬಗ್ಗೆ ತಿಳಿದುಕೊಂಡಿದ್ದರೋ ಅದು ಸರಿಯಲ್ಲ. We are giving it at the rate which they have quoted (for bringing the sand from 80 miles).

Sri C. K. RAJAIAH SETTY.—You were pleased to state that you have reserved this sand for emergency conditions. When you say that you have reserved for emergency, why are you selling it ?

Sri H. M. CHANNABASAPPA.—This is a state of emergency. When surki work cannot progress, naturally work will have to be stopped. But we ask them to carry on cement work. In a contingency, we ask them to take this sand.

ಸುರ್ಕಿಯನ್ನು ತಯಾರು ಮಾಡಬೇಕಾದರೆ, ಮರಳು ಬೇಕಾಗುತ್ತದೆ, ಸಿಮೆಂಟ್ ಬೇಕಾಗುತ್ತದೆ, ಹೀಗೆ ಇವೆಲ್ಲಾ this is a state of emergency. ಇಂತಹ ಕೆಲಸಗಳಿಗೆಲ್ಲಾ ಮರಗಳನ್ನು ಕೊಡಬೇಕಾಗುತ್ತದೆ ಎಂದು ಸರ್ಕಾರದವರು ರಿಸರ್ವ್ ಮಾಡಿಕೊಂಡಿದ್ದಾರೆ. ಇದನ್ನು ಎಂಬತ್ತು ಮೈಲಿಗಳಿಂದ ತಂದರೂ ಅವರ ಕೆಲಸಕ್ಕೇ ಉಪಯೋಗಿಸಲು ಕೊಡಬೇಕಾಗುತ್ತದೆ. ಅದಕ್ಕಾಗಿ ರೇಟನ್ನೂ ಕೂಡ ಕೊಡಲಾಗುತ್ತದೆ.

ಶ್ರೀ ಜಿ. ವೆಂಕಟೇಗೌಡ.—54-55 ರಲ್ಲಿ ಆಲ್ ಇಂಡಿಯಾದಲ್ಲಿನ ಕಮರ್ಷಿಯಲ್ ಪ್ರೈಸುಗಳಿಗಿಂತ ಶೇಕಡಾ 35 ರಷ್ಟು ಹೆಚ್ಚೇಕಾಯಿತು ಎನ್ನುವುದಕ್ಕೋಸ್ಕರ ಇದನ್ನು ಕೇಳಲಾಯಿತು.

Sri H. M. CHANNABASAPPA.—I would only ask you to sit with the Consultative Engineering Committee and argue with them.

Sri C. M. ARUMUGHAM.—You are our representative.

Sri H. M. CHANNABASAPPA.—I am here to give you facts. I am not an authority. ನಾನು ಅಪ್ಪರ್ ಹೌಸಿನಲ್ಲಿ ಒಂದು ಪ್ರಶ್ನೆಗೆ ಉತ್ತರವಾಗಿ accepted rates ವಿಚಾರವಾಗಿ ವಿವರಗಳನ್ನು ಕೊಟ್ಟಿದ್ದೆ. ಅದರಂತೆ ಪಟ್ಟಿಯನ್ನು ಇಟ್ಟುಕೊಂಡು ಇಲ್ಲಿ 300 ಇದೆ, ಇಲ್ಲಿ 150 ಇದೆ, ಇವೆಲ್ಲಾ ಏಕೆ ಕೊಡಲಾಯಿತು ಎಂದು ಮಾನ್ಯ ಸದಸ್ಯರು ಕೇಳಿದರು.

Sri C. M. ARUMUGHAM.—They are my own figures.

Sri H. M. CHANNABASAPPA.—I verified them. They are figures furnished by me to a question in the Upper House.

Sri M.C. NARASIMHAN.—According to our Rules, no reference should be made to the Upper House.

Sri C. K. RAJIAH SETTY.—Copies of proceedings of the Upper House are furnished to us. Nothing prevents us from making a reference.

Sri M. C. NARASIMHAN.—But our Rules forbid us to make a reference to the Upper House Proceedings.

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಕೆಲಸ ಮಾಡುವಾಗ ಹತ್ತೆಂಟು ಕಡೆಗಳಿಂದ ಟೆಂಡರುಗಳನ್ನು ತೆಗೆದುಕೊಂಡು ಸಿಮೆಂಟು ಕಾಂಕ್ರೀಟಿಗೆ ಏನಾಗುತ್ತದೆ ಮತ್ತು ಇತರ ಸಣ್ಣಪುಟ್ಟ ಕೆಲಸಗಳಿಗಾಗಿ ಏನಾಗುತ್ತದೆ ಎಂದು ತಿಳಿದುಕೊಂಡು ಪ್ರತಿಯೊಂದು ಐಟಮ್ಮಿಗೂ ಕೂಡ ಕೊಟೇಷನ್ನುಗಳನ್ನು ತರಿಸಿಕೊಂಡು ಎಷ್ಟು ರೂಪಾಯಿಗಳ ಅಂದಾಜು ಆಗುತ್ತದೆ ಅವನ್ನೆಲ್ಲಾ ನೋಡಿಕೊಳ್ಳಲು ನಾಲ್ಕಾರು ಜನರು, ಇವನ್ನೆಲ್ಲಾ ವರ್ಕೌಟು ಮಾಡಿ ಅವುಗಳಲ್ಲಿ ಯಾವು

(ಶ್ರೀ ಎಚ್. ಎಂ. ಚೆನ್ನಬಸಪ್ಪ)

ದನ್ನೂ ಒಪ್ಪಿಕೊಳ್ಳಬೇಕಾಗುತ್ತದೆ ಎನ್ನುವುದನ್ನು ಅನಂತರ ನಿರ್ಧರಿಸಿ ರೇಟಿನ ಪಟ್ಟಿಯನ್ನು ಮಾಡಿ ಕೊಡಲಾಗುತ್ತದೆ.

ನಮ್ಮ ಈ ಮಾನ್ಯ ಸಭೆಯಲ್ಲಿ ಏನೇನು ವಿಷಯಗಳನ್ನು ತಾವು ಹೇಳಿದ್ದೀರೋ ಅವುಗಳೆಲ್ಲದರ ಬಗ್ಗೆ ಅಂಕಿ ಅಂಶಗಳ ಆಧಾರದ ಮೇಲೆ ತಮಗೆ ವಿವರಗಳೆಲ್ಲವನ್ನೂ ಒದಗಿಸಿದ್ದೇನೆ. ಇದರ ಮೇಲೆ ತಮಗೆ ಇನ್ನೂ further elucidation of facts, ಯಾವ ವಿಷಯವನ್ನಾದರೂ ತಿಳಿದುಕೊಳ್ಳಬೇಕೆಂದು ಇಚ್ಛೆ ಇದ್ದರೆ ಅವನ್ನೂ, ಯಾವ ಕಾಲದಲ್ಲಾದರೂ ಯಾವ ಸದಸ್ಯರಿಗೆ ಬೇಕಾದರೂ ಕೊಡಲು ಸಿದ್ಧವಾಗಿದ್ದೇನೆ. ಆದುದರಿಂದ ವಿಷಯಗಳನ್ನೆಲ್ಲಾ ಪೂರ್ಣವಾಗಿ ತಿಳಿದುಕೊಂಡು ಅದರ ಮೇಲೆ ಟೀಕೆ ಟಿಪ್ಪಣಿಗಳನ್ನು ಮಾಡಬೇಕೆಂದು ಕೋರುತ್ತೇನೆ. ಒಂದು ವೇಳೆ ನಾನು ಹೇಳಿರುವುದರಲ್ಲಿ ಅನೇಕರಿಗೆ ಅತೃಪ್ತಿಯಾಗಿರಬಹುದು, ಕೆಲವರಿಗೆ ತೃಪ್ತಿಯಾಗಿರಬಹುದು. ನಾನು ಹೇಳುತ್ತಿರುವುದೆಲ್ಲಾ ವೇದ ವಾಕ್ಯವೆಂದೇ ಹೇಳುತ್ತಿದ್ದೇನೆಂದು ಹೇಳುವುದು ಸರಿಯಲ್ಲ. ನಾನು ಹೇಳಿರತಕ್ಕ ವಿಚಾರಗಳನ್ನೆಲ್ಲಾ ವಿಚಾರ ಮಾಡತಕ್ಕದ್ದು ಈ ಸಭೆಯಲ್ಲಿರುವ ಎಲ್ಲ ಮಾನ್ಯ ಸದಸ್ಯರ ಕರ್ತವ್ಯ. ಇದರಲ್ಲಿ ನಮಗೆ ತೃಪ್ತಿಯಾಯಿತು ಮತ್ತು ಕೆಲವರಿಗೆ ಅತೃಪ್ತಿಯಾಗಿದೆ ಎಂದು ಅವರು ನನ್ನಲ್ಲಿ ಬಂದು ಹೇಳಲಿಕ್ಕೆ ಅಭ್ಯಂತರವಿಲ್ಲ. ಪ್ರತಿಯೊಂದು ವಿಚಾರವನ್ನು ಹೇಳಬೇಕಾದರೂ ಅದನ್ನು ಸರಿಯಾದ ರೀತಿಯಲ್ಲಿ ಸದುದ್ದೇಶಪೂರಿತವಾಗಿ, ರಚನಾತ್ಮಕವಾದ ರೀತಿಯಲ್ಲಿ ಟೀಕೆಗಳನ್ನು ಮಾಡಿ ಅವುಗಳನ್ನೆಲ್ಲಾ ನೀವು ಮತ್ತು ನಾವು ಕುಳಿತು ಸುಧಾರಿಸತಕ್ಕದ್ದು ನಮ್ಮ ಕರ್ತವ್ಯ. ಇದು ನನ್ನ ಒಬ್ಬನಿಂದಲೇ ಮಾಡತಕ್ಕದ್ದಲ್ಲ. ನಾವು, ನೀವು, ಉಭಯತ್ರರೂ ಸೇರಿ ಈ ದೇಶವನ್ನು ಕಟ್ಟತಕ್ಕದ್ದು. ಆ ಪ್ರಕಾರವಾಗಿ ನಾವು, ನೀವು ಎಲ್ಲರೂ ಸೇರಿ ಎಲ್ಲ ವಿಚಾರಗಳನ್ನೂ ಚರ್ಚೆ ಮಾಡತಕ್ಕದ್ದು ನಮ್ಮ ಕರ್ತವ್ಯ. ನಾವು ಚರ್ಚೆಗಳಲ್ಲಿ ಇಲಾಖೆಯಲ್ಲಿರುವ ಅಧಿಕಾರಿಗಳು ಕೆಲಸ ಮಾಡುವುದರ ಬಗ್ಗೆ ಅವರ ಮನಸ್ಸಿಗೆ ಬೇಜಾರು ಉಂಟಾಗುವಂತೆ, ನೋವುಂಟಾಗುವಂತೆ ಟೀಕೆಗಳನ್ನು ಮಾಡಿದರೆ ಅದರಿಂದ ಅಧಿಕಾರಿಗಳಿಗೆ ಕೆಲಸ ಮಾಡುವುದು ಕಷ್ಟವಾಗುತ್ತದೆ. ನಮ್ಮಲ್ಲಿ ಎಷ್ಟೋ ಜನ ಸತ್ಯವಂತರಾದ ಅಧಿಕಾರಿಗಳಿದ್ದಾರೆ. ಇಂತಹ ಅಧಿಕಾರಿಗಳ ವಿಷಯದಲ್ಲಿ ನೋವುಂಟಾಗುವಂತೆ ಟೀಕೆ ಮಾಡಿದರೆ ಅಂತಹ ಅಧಿಕಾರಿಗಳು ತೃಪ್ತಿಯಿಂದ ಕೆಲಸ ಮಾಡುವುದಕ್ಕೆ ಕಷ್ಟವಾಗುತ್ತದೆ. ಅದುದರಿಂದ ದೇಶದ ಹಿತ ದೃಷ್ಟಿಯಿಂದ ಯಾವ ಒಂದು ಟೀಕೆಯನ್ನು ಮಾಡಬೇಕಾದರೂ ವಿಷಯಗಳನ್ನೆಲ್ಲಾ ತಿಳಿದುಕೊಂಡು ರಚನಾತ್ಮಕವಾದ ಟೀಕೆಗಳನ್ನು ಮಾಡಬೇಕೆಂದು ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ. ರಾಚಯ್ಯ.—ಹಾಸನದಲ್ಲಿನ ಹಾಸ್ಟಲು ಕಟ್ಟಡ ಕಟ್ಟುವಾಗ ಟೆಂಡರನ್ನು ಏಕೆ ಕ್ಯಾನ್‌ಸಲ್ಲು ಮಾಡಲಾಯಿತು ಮತ್ತು ಅದಕ್ಕೆ ಕಾರಣವೇನು ಎನ್ನುವುದನ್ನು ತಿಳಿಸಲಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಬೇರೆ ಪ್ರಶ್ನೆಯನ್ನು ಈ ಬಗ್ಗೆ ಹಾಕಿದರೆ, ಆಮೇಲೆ ಉತ್ತರ ಹೇಳುತ್ತೇನೆ. ಈಗ ನನ್ನ ಮುಂದೆ ಅಂಕಿ ಅಂಶಗಳಿಲ್ಲ.

Sri J. B. MALLARADHYA.—Sir, we are sitting here from 12 o'clock. Tomorrow, let him take as much time as possible.

Sri C. M. ARUMUGHAM.—We support the suggestion of our friend, Sir.

Sri B. D. JATTI (Chief Minister).–Sir, I understand the feelings of Hon'ble Members. Let us rise at six as usual.

Sri C. J. MUCKANNAPPA.—Sir, it is nearly five now. Generally, we used to meet at one and rise at six. Today, we met at twelve and so we will have to rise at five o'clock. You should look only to the Government but you should also look to us I request the Chair to allow us to go exactly at 5 P.M.

Sri KADIDAL MANJAPPA.—Sir, on our side we have all co-operated with the Hon'ble Members when they made any request. It is only 5 o'clock now and we may rise at six. Yesterday, to accommodate Hon'ble Members who were desirous of speaking we sat till 7 or 7–30 P.M. I suppose, we deserve the same concession at the hands of the Members.

Sri J. B. MALLARADHYA.—My point is, so long as we do not exceed the maximum days for Budget Discussion and Demands, you can reserve the whole day for reply tomorrow.

Sri B. D. JATTI.—If we agree to get the same number of days, there is no difficulty. My suggestion is to sit till 6 P.M.

Sri C. J. MUCKANNAPPA.—Why ?

Sri B. D. JATTI.—I do not understand Sri Muckannappa's philosophy. When we spoke, he wanted us to sit for a longer time ; now, he wants to close early.

Sri C. J. MUCKANNAPPA.—Sir, the Chief Minister has developed a tendency of an Alsatian now-a-days. I appeal to the Chair what is the difficulty if you reply tomorrow ?

Sri B. D. JATTI.—Sir, I do not wish to intervene and you may decide any way you like.

Sri M. C. NARASIMHAN.—Sir, I would like to know if all the Ministers are going to reply because our rules prescribe that only the Finance Minister has a right of reply.

Sri B. D. JATTI.—If you are not interested in hearing the replies from other Ministers, we are not interested.

Sri KADIDAL MANJAPPA.—It is quite in order. A Minister can intervene in the debate. But the Finance Minister has the right to reply.

Mr. DEPUTY SPEAKER.—Let us sit till 6 P.M.

ಶ್ರೀ ಎಚ್. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಅನೇಕ ಮಾನ್ಯ ಸದಸ್ಯರು 1960-61ನೆಯ ಸಾಲಿನ ಆಯವ್ಯಯ ಮತ್ತು ಬಡ್ಜೆಟ್ಟಿನ ಮೇಲೆ ಚರ್ಚೆ ಮಾಡುತ್ತಾ ವ್ಯವಸಾಯ ಇಲಾಖೆ, ಅಲ್ಲದೆ ಸಮಾಜ ಕಲ್ಯಾಣ, ಹಾಗೂ ಅಬ್ಕಾರಿ ಮುಂತಾದ ನನಗೆ ಸಂಬಂಧಪಟ್ಟ ಇಲಾಖೆಗಳ ವಿಚಾರದಲ್ಲಿ ಅನೇಕ ರೀತಿ ಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಪ್ರಸ್ತಾಪ ಮಾಡುವಾಗ ಕೆಲವು ಮಾನ್ಯ ಸದಸ್ಯರು ಬಹಳ ರಚ ನಾತ್ಮಕವಾದ ಸಲಹೆಗಳನ್ನು ಮತ್ತು ಉಗ್ರವಾದ ಟೀಕೆಗಳನ್ನು ಮಾಡಿದ್ದಾರೆ. ಆ ಎಲ್ಲಾ ಮಾನ್ಯ ಸದ ಸ್ಯರನ್ನೂ ನಾನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ಕೆಲವರು ಸಲಹೆಗಳನ್ನು ಕೊಡುತ್ತಾ ವ್ಯವಸಾಯದ ಇಲಾಖೆಯ ವಿಚಾರದಲ್ಲಿ ಕೆಲವು ಉಗ್ರವಾದ ಟೀಕೆ ಗಳನ್ನೂ ಮಾಡಿದ್ದಾರೆ. ಆ ರೀತಿಯಲ್ಲಿ ಟೀಕೆ ಮಾಡು ವಾಗ ಯಾರೊಬ್ಬ ಸದಸ್ಯರೂ ಸಹ ಏನಾದರೂ ಅಂಕಿ ಅಂಶಗಳ ಮೂಲಕ ಮಾತನಾಡಿ ಕೆಲವು ನಿದರ್ಶನ ಗಳನ್ನು ಕೊಟ್ಟು ವ್ಯವಸಾಯದ ಇಲಾಖೆಯಲ್ಲಿ ಇಂಥಿಂಥ ತೊಂದರೆಗಳಾಗುತ್ತಿವೆಯೆಂದು ನಿರ್ದಿಷ್ಟ ವಾಗಿ ಹೇಳಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಡ್ಜೆಟ್ಟಿನಲ್ಲಿ ಒದ ಗಿಸಿದ್ದ ಹಣವನ್ನೇ ಪೂರ್ತಿಯಾಗಿ ಖರ್ಚು ಮಾಡಲಿಲ್ಲ. ಅಷ್ಟೇ ಸಾಕು ಅದಕ್ಕೆ ಸಾಕ್ಷಿ. ಬೇರೆ ಇನ್ನೇನು ಹೇಳ ಬೇಕಾಗಿದೆ ?

ಶ್ರೀ ಎಚ್. ರಾಚಯ್ಯ.—ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಸದ ಸ್ಯರು ಇಡಿಯ ಭಾರತ ದೇಶದಲ್ಲಿ ವ್ಯವಸಾಯ ಇಲಾಖೆ ಯಾವ ರೀತಿಯಲ್ಲಿ ಮುಂದುವರಿಯುತ್ತಿದೆ, ಇತರ ಎಲ್ಲಾ ಸಂಸ್ಥಾನಗಳಲ್ಲಿ ಈ ವ್ಯವಸಾಯ ಇಲಾಖೆಯ ಪ್ರಗತಿ ಯಾವ ರೀತಿ ಇದೆಯೆಂಬುದನ್ನು ನೋಡಬೇಕು. ಹಾಗೆಯೇ ಮೈಸೂರು ಸಂಸ್ಥಾನದಲ್ಲಿ ವ್ಯವಸಾಯ ಇಲಾಖೆ ಯಾವ ರೀತಿ ಪ್ರಗತಿ ಹೊಂದುತ್ತಿದೆ, ಆಹಾ ರೋತ್ಪಾದನೆ ವಿಚಾರದಲ್ಲಿ ನಾವು ಎಷ್ಟರಮಟ್ಟಿಗೆ ಕಾರ್ಯವನ್ನು ಸಾಧಿಸಿದ್ದೇವೆ ಎನ್ನುವುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುವುದು ನಿಜವಾಗಿ ನನಗೆ ಹೆಮ್ಮೆ ಯಾಗಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ನಮ್ಮ ಸಂಸ್ಥಾನದಲ್ಲಿ ಸುಮಾರು 200 ಲಕ್ಷ ಎಕರೆ ಜಮೀನನ್ನು ಆಬಾದುಮಾಡುವುದಕ್ಕೆ ಅವಕಾಶ ವಿದೆ. ಆದರೆ 119ಲಕ್ಷ ಎಕರೆ ಜಮೀನನ್ನು ಇವೊತ್ತಿನ ದಿವಸ ಆಬಾದುಮಾಡುತ್ತಿದ್ದೇವೆ. ಉಳಿಕೆ ಜಮೀ ನನ್ನು ಮುಂದೆ ಆಬಾದುಮಾಡುವ ಅವಕಾಶವನ್ನು ಜಾಗ್ರತೆಯಾಗಿ ಕಲ್ಪಿಸಿಕೊಂಡು ದೊಡ್ಡ ದೊಡ್ಡ ಯೋಜನೆಗಳ ಪ್ರಕಾರ ಹಿಂದೆ ಪ್ರಸ್ತಾಪ ಮಾಡಿದ ರೀತಿಯಲ್ಲಿ ವ್ಯವಸಾಯವನ್ನು ತೀವ್ರತೆಯಿಂದ ಮಾಡುತ್ತಿದ್ದೇವೆ. ನಮ್ಮ ಸಂಸ್ಥಾನಕ್ಕೆ ಬೇಕಾದಂಥ ಆಹಾರ ಪದಾರ್ಥಗಳು ಸಮಾರು 37 ಲಕ್ಷ ಟನ್ನು ಗಳು. ಈಗ 30 ಲಕ್ಷ ಟನ್ನುಗಳಷ್ಟು ಆಹಾರವನ್ನು ಉತ್ಪಾದನೆ ಮಾಡುತ್ತಿದ್ದೇವೆ. ಎರಡನೆಯ ಪಂಚ ವಾರ್ಷಿಕ ಯೋಜನೆಯ ಟಾರ್ಗೆಟ್ 5 ಲಕ್ಷ ಟನು ಗಳಷ್ಟು ಆಹಾರೋತ್ಪಾದನೆಯನ್ನು ಮಾಡುತ್ತಿದ್ದೇವೆ. ಈಗ ದ್ವಿತೀಯ ಪಂಚವಾರ್ಷಿಕ ಯೋಜನೆಯ ನಾಲ್ಕ ನೆಯ ವರ್ಷದ ಅಂತ್ಯದಲ್ಲಿದ್ದೇವೆ. ದ್ವಿತೀಯ ಪಂಚ ವಾರ್ಷಿಕದ ಐದನೆಯ ವರ್ಷದ ಮೊದಲನೆಯ ಭಾಗ ದಲ್ಲಿ ಕಾಲಿಡುತ್ತಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾದುದು ಒಂದು ಅಂಶ ವೇನೆಂದರೆ ನಾವು ಇವೊತ್ತಿನ ದಿವಸ ಸುಮಾರು 6.03 ಟನ್ನುಗಳಷ್ಟು ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ. ಬರುವ ವರ್ಷದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಆಹಾರೋತ್ಪಾದನೆಯನ್ನು ನಮ್ಮ ಸಂಸ್ಥಾನದಲ್ಲಿ ಮಾಡುವುದಕ್ಕೆ ಅವಕಾಶವಿದೆ. ನಾನು ಈಗಾಗಲೇ ಪ್ರಸ್ತಾಪ ಮಾಡಿದ ರೀತಿಯಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿರತಕ್ಕ ಪ್ರಕೃತಿ ಸೌಂದರ್ಯ, ಭೂಮಿಯ ಗುಣ, ರೈತರ ಆಸಕ್ತಿ, ಸರ್ಕಾರದ ತೀರ್ವತೆ ಇವೆಲ್ಲವನ್ನೂ ಗಣನೆಗೆ ತೆಗೆದುಕೊಂಡರೆ ಕೇವಲ ಎರಡು-ಮೂರು ವರ್ಷಗಳಲ್ಲಿಯೇ ಸ್ವಾವ ಲಂಬನೆಯಿಂದ ನಮ್ಮ ಗುರಿಯನ್ನು ಈ ವ್ಯವಸಾಯದ ಬಾಬಿನಲ್ಲಿ ಮುಟ್ಟುವುದಕ್ಕೆ ಅವಕಾಶವಿದೆಯೆಂದು ಸರ್ಕಾರಕ್ಕೆ ಪೂರ್ಣವಾಗಿ ಭರವಸೆಇದೆ. ಆದುದರಿಂದ ಈ ಆಹಾರೋತ್ಪಾದನೆಯ ವಿಚಾರದಲ್ಲಿ ಸರ್ಕಾರ ದವರು ಈಚೆಗೆ ಯಾವ ಯಾವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರು ಚೆನ್ನಾಗಿ ಅರಿತುಕೊಂಡಿದ್ದಾರೆಂದು ನಾನು ತಿಳಿಯು ತ್ತೇನೆ. ಅದರ ಜೊತೆಯಲ್ಲಿ ಈಗ ಏನಾಗಿದೆಯೆಂದರೆ ಹೆಚ್ಚಿಗೆ ಜನಸಂಖ್ಯೆಯ ಉತ್ಪಾದನೆಯೇ ತೀವ್ರವಾಗು ತ್ತಿದೆ. (ನಗು)

ಅದೆಲ್ಲವನ್ನೂ ಸರ್ಕಾರದವರು ಲೆಕ್ಕಕ್ಕೆ ಹಾಕಿ ಮಾನ್ಯ ಸದಸ್ಯರ ಮುಂದೆ ಅಂಕಿಅಂಶಗಳನ್ನು ಇಟ್ಟಿದ್ದಾರೆ. ಆದುದರಿಂದ ನಾವು ಕೆಲವು ಸಣ್ಣಪುಟ್ಟ ವಿಚಾರಗಳಲ್ಲಿ ಏನಾದರೂ ಹಣವನ್ನು ಖರ್ಚು ಮಾಡಿ ಇತರ ಕೆಲವು ಸ್ಕೀಮುಗಳ ಕೆಲಸ ಸಾಧ್ಯವಾಗದೆ ಹೋಗಿದ್ದರೆ, ಅದು ನಾನಾತರಹ ಕಾರಣಗಳಿಂದ ಆ ರೀತಿಯಾಗಿದೆಯೆಂದು ಮಾನ್ಯ ಸದಸ್ಯರು ತಿಳಿದು ಕೊಳ್ಳಬೇಕು. ಸಕಾಲದಲ್ಲಿ ಟ್ರಾಕ್ಟರುಗಳು ಮತ್ತು ಬುಲ್‌ಡೋಜರುಗಳು ಬರುವುದಿಲ್ಲ. ವ್ಯವಸಾಯ ಏಳಿಗೆಯ ಬಗ್ಗೆ ಸೂಕ್ತವಾದ ಸಲಹೆಗಳನ್ನು ನೀಡು ವಂತಹ ತರಹೇತಾದ ಜನರು ನಮ್ಮ ಸಂಸ್ಥಾನದಲ್ಲಿ ಸಾಕಾದಷ್ಟು ಇಲ್ಲ. ಅದಕ್ಕಾಗಿ ಈಗ ನಾವು ಹೆಚ್ಚಿನ ತರಹೇತನ್ನು ಈ ವ್ಯವಸಾಯದ ಏಳಿಗೆಯ ಬಗ್ಗೆ ಕೊಡುವುದಕ್ಕಾಗಿ ಹೆಚ್ಚುಹೆಚ್ಚಾಗಿ ಅಗ್ರಿಕಲ್‌ಚರಲ್ ಕಾಲೇಜುಗಳನ್ನೂ ಮತ್ತು ವೆಟರಿನರಿ ಕಾಲೇಜು ಗಳನ್ನೂ ಸ್ಥಾಪನೆ ಮಾಡುತ್ತಿದ್ದೇವೆ. ಆ ಒಂದು ದೃಷ್ಟಿಯಿಂದ ನಮ್ಮ ಸಂಸ್ಥಾನದಲ್ಲಿನ ಆಹಾರೋತ್ಪಾ ದನೆಯ ಬಗ್ಗೆ ಒಂದು ಆಶಾದಾಯಕವಾದ ವಾತಾ ವರಣವಿದೆ. ಆ ಒಂದು ನಂಬಿಕೆ, ವಿಶ್ವಾಸ ನಮಗೂ ಸರ್ಕಾರಕ್ಕೂ ಇದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

5 P.M.

ಹೀಗೆ ಪ್ರಸ್ತಾಪ ಮಾಡುವ ಕಾಲದಲ್ಲಿ ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರೂ ಮತ್ತು ಆಲೂರು ಹನುಮಂತಪ್ಪ ನವರೂ ವ್ಯವಸಾಯ ಮಾಡತಕ್ಕ ರೈತರಿಗೆ ಸರ್ಕಾರ ದವರು ಸಾಕಷ್ಟು ಪ್ರಮಾಣದಲ್ಲಿ ಕಬ್ಬಿಣ, ಗೊಬ್ಬರ, ಬಿತ್ತನೆ ಬೀಜ, ಟ್ರಾಕ್ಟರುಗಳು ಮತ್ತು ಬುಲ್‌ಡೋಜರು ಗಳು ಇತ್ಯಾದಿ ಯಾವ ಅನುಕೂಲಗಳನ್ನೂ ಒದಗಿಸಿ ಕೊಟ್ಟಿಲ್ಲ ಎಂಬ ಅರ್ಥ ಬರುವ ರೀತಿಯಲ್ಲಿ ಮಾತ

(ಶ್ರೀ ಎನ್. ರಾಚಯ್ಯ)

ನಾಡಿದ್ದಾರೆ. ಆದರೆ ಅದು ಸರಿಯಾದ್ದಲ್ಲ. ಆದರೆ ಈ ವಿಚಾರದಲ್ಲಿ ಮಾನ್ಯ ಸದಸ್ಯರು ಒಂದು ಅಂಶವನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಈ ದಿವಸ ನಮ್ಮ ರಾಜ್ಯದಲ್ಲಿರತಕ್ಕದ್ದು ಪ್ರಜಾಪ್ರಭುತ್ವ. ರಷ್ಯಾ ದೇಶದಲ್ಲಿದ್ದಹಾಗೆ ಇಲ್ಲಿ ಇಲ್ಲ. ರಷ್ಯಾ ದೇಶದಲ್ಲಿ ಎಲ್ಲ ಜವಾಬ್ದಾರಿಯನ್ನೂ ಸರ್ಕಾರ ಹೊತ್ತಿದೆ. ಉತ್ಪಾದನೆ ಮಾಡುವುದರ ಮೊದಲುಗೊಂಡು ಎಲ್ಲ ವಿಷಯಗಳೂ ಸರ್ಕಾರದ ಕೈಯಲ್ಲಿ. ಆದರೆ ಇಲ್ಲಿ ನಮ್ಮ ರಾಜ್ಯದಲ್ಲಿ ಹಾಗಿಲ್ಲ. ಆದರೆ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲ ರೈತರ ಹಾಗೂ ಕಾರ್ಮಿಕರ ಮೇಲೆ ಸರ್ಕಾರ ಒಂದು ಕೈ ಇಟ್ಟುಕೊಂಡಿರುವಂಥ ಎಂದರೆ ಅಧಿಕಾರ ವಿಟ್ಟುಕೊಂಡಿರುವಂಥ ಒಂದು ಶಾಸನವನ್ನು ಇಲ್ಲಿಯ ಶಾಸಕರು ತಯಾರಿಸಿ ನಮಗೆ ಅಂಥ ಅಧಿಕಾರವನ್ನೇನೂ ಕೊಟ್ಟಿಲ್ಲ. ಹಾಗೆ ಒಂದು ಅಧಿಕಾರವನ್ನು ಈ ಶಾಸನಸಭಾ ಸದಸ್ಯರು ಮಾಡಿಕೊಡುವ ಪಕ್ಷಕ್ಕೆ ನಾವು ನಮ್ಮ ರಾಜ್ಯದಲ್ಲಿ ಸ್ವಪರಿಪೂರ್ಣತೆ ಕೇವಲ ಒಂದೇಒಂದು ವರ್ಷದಲ್ಲಿ ಬರುವಂತೆ ಮಾಡುತ್ತೇವೆ. ಆದರೆ ನಮ್ಮ ರಾಜ್ಯದಲ್ಲಿ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ. ನಮ್ಮ ರಾಜ್ಯಾಂಗಕ್ಕೆ ಅದು ತೀರಾ ವಿರುದ್ಧವಾದದ್ದು. ಆದುದರಿಂದ ನಾವು ಈಗ ಎಲ್ಲ ರೈತ ಬಾಂಧವರನ್ನೂ ಕಾರ್ಮಿಕ ಬಾಂಧವರನ್ನೂ ಅವರವರ ವೃತ್ತಿಯಲ್ಲಿ ಅವರು ತೀವ್ರಾಸಕ್ತಿ ವಹಿಸಿ, ಅವರೆಲ್ಲರ ಸಹಕಾರವನ್ನೂ ಕ್ರೋಡೀಕರಿಸಿ ಅವರನ್ನು ಉತ್ಪಾದನೆ ಕಾರ್ಯದಲ್ಲಿ ಹುರುಪಿನಿಂದ ಮುಂದುವರಿಯುವಂತೆ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ. ಆದರೆ ಈಗಾಗಲೇ ನಮ್ಮ ರಾಜ್ಯದಲ್ಲಿ ಅಲ್ಲಲ್ಲೇ ರೈತರ ಸಂಘಗಳೂ ಯುವಕರ ಸಂಘಗಳೂ ವಿಶೇಷವಾಗಿ ಏರ್ಪಟ್ಟಿವೆ. ಇದನ್ನು ಕಂಡ ಕೇಂದ್ರದ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಪಂಜಾಬ್‌ರಾವ್ ದೇಶಮುಖ್ ಅವರು ಈ ಸಭೆಗಳ ಅಧ್ಯಕ್ಷತೆಯನ್ನು ವಹಿಸಿದ್ದಾಗ ಒಂದಾವರ್ತಿ, ಅವರು ನಮ್ಮ ದೇಶದಲ್ಲಿ ರೈತರ ತೀವ್ರಾಸಕ್ತಿ ಬಗ್ಗೆ ಮಾತನಾಡುತ್ತ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ನಾವು ಈ ರೈತರ ವಿಚಾರದಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡಿದ್ದೇವೆಂಬುದು ಈ ಒಂದರಿಂದಲೇ ಚೆನ್ನಾಗಿ ಗೊತ್ತಾಗುತ್ತದೆ. ಈ ರೀತಿಯಾಗಿ ರೈತರಿಗೆ ಒಂದು ಪ್ರೋತ್ಸಾಹ ಭರತಖಂಡದ ಬೇರಾವ ರಾಜ್ಯದಲ್ಲೂ ದೊರೆಯುತ್ತಿಲ್ಲವೆಂದು ಹೇಳಿ ಅವರು ನಮಗೊಂದು ಶಾಭಾಷ್‌ಗಿರಿಯನ್ನು ಕೊಟ್ಟಿದ್ದಾರೆ. ಆದುದರಿಂದ ಈ ದಿವಸ ರೈತ ಬಾಂಧವರೆಲ್ಲರೂ ಬಹಳ ಉತ್ಸಾಹಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಸರ್ಕಾರದವರು ಅವರಿಗೆ ಏನೇನು ಸಲಕರಣೆಗಳನ್ನು ಕೊಡಬೇಕೋ, ಅವುಗಳನ್ನೆಲ್ಲ ಕೊಡುತ್ತಿದ್ದಾರೆ. ಹೋದ ವರ್ಷ ಅವರಿಗೆ ಹೆಚ್ಚಿನ ರೀತಿಯಲ್ಲಿ ಬಿತ್ತನೆ ಬೀಜ, ಗೊಬ್ಬರ ಇತ್ಯಾದಿಗಳನ್ನೆಲ್ಲ ಒದಗಿಸಿಕೊಟ್ಟಿದ್ದೇವೆ. ಆದರೆ ಈ ವಿಚಾರದಲ್ಲಿ ನಮಗೆ ಏನು ಒಂದು ತೊಂದರೆ ಯಿದೆ ಎಂಬುದನ್ನೀಗ ನಾನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ರೈತರಿಗೆ ಬೇಕಾಗುವ ಕೃತಕ ಗೊಬ್ಬರ ಮತ್ತು ಕಬ್ಬಿಣಗಳೇನಿವೆ ಇವುಗಳನ್ನು ಹಂಚುವುದು ನಮ್ಮ ಕೈಯಲ್ಲಿಲ್ಲ. ಇದು ಕೇಂದ್ರದ ಕೈಯಲ್ಲಿದೆ. ನಮ್ಮ ರಾಜ್ಯಕ್ಕೆ ಸುಮಾರು 30 ಸಾವಿರ ಟನ್ ಕೃತಕ ಗೊಬ್ಬರ ಬೇಕಾಗುತ್ತದೆ. ಈಗ ನಮಗೆ ಕೇಂದ್ರ ಸರ್ಕಾರದವರು ಕೊಡುತ್ತಿರುವುದು 15 ಸಾವಿರ ಟನ್ ಮಾತ್ರ. ಈ ತೊಂದರೆಯನ್ನು ಬಗೆಹರಿಸಲು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪತ್ರಮುಖೇನ ಒತ್ತಾಯಪಡಿಸಲಾಗಿದೆ. ಅದಕ್ಕೆ ಕೇಂದ್ರ ಸರ್ಕಾರದವರೂ ಸಹ ಮುಂದಿನ ಖರೀಫ್ ಬೆಳೆ ಹೊತ್ತಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಈ ಗೊಬ್ಬರವನ್ನು ಒದಗಿಸಿಕೊಡುವುದಾಗಿ ತಿಳಿಸಿದ್ದಾರೆ. ಈ ವಿಚಾರವನ್ನು ಲಿಖಿತ ಮೂಲಕವಾಗಿ ತಿಳಿಸಿದ್ದಾರೆ.

ಮೇಲಾಗಿ ಮುಂಬಿನ ಸಾಲಿನಲ್ಲಿ ನಮ್ಮ ರಾಜ್ಯದಲ್ಲೇ ಒಂದು ಫರ್ಟಿಲೈಜರ್ ಫ್ಯಾಕ್ಟರಿಯನ್ನು ಸ್ಥಾಪಿಸಲು ಅನುಕೂಲವಾಗಬಹುದೆಂಬ ಅಂದಾಜಿದೆ. ಆದಕಾರಣ ಈ ಕೊರತೆ ಏನಿದೆ ಇದು ಸಧ್ಯದಲ್ಲೇ ನಮಗೆ ತಪ್ಪಿ ಹೋಗುವಂತೆ ಆಗಬಹುದು. ಇನ್ನು ತಮಗೆಲ್ಲರೂ ಗೊತ್ತಿರುವಂತೆ ಈಗಾಗಲೇ ಕಬ್ಬಿಣದ ಅಭಾವವನ್ನು ನೀಗಲು ರೂರ್ಕೆಲ, ಭಿಲೈಗಳಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳು ಸ್ಥಾಪಿತವಾಗಿರುತ್ತದೆ. ಇನ್ನೂ ಇಂಥಾ ದೊಡ್ಡ ಕಾರ್ಖಾನೆಗಳು ಒಂದೆರಡು ಆಗುವುದಿವೆ. ಆಗ ನಮ್ಮ ರೈತ ಬಾಂಧವರಿಗೂ ಇತರರಿಗೂ ಈ ಕಬ್ಬಿಣದ ತೊಂದರೆ ಇರುವುದಿಲ್ಲ. ಮನೆಕಟ್ಟುವುದಕ್ಕೆ ಆಗಲಿ ವ್ಯವಸಾಯೋಪಕರಣಗಳಿಗೇ ಆಗಲಿ ಬೇಕಾದಷ್ಟು ಕಬ್ಬಿಣವನ್ನು ಒದಗಿಸಲು ಸಾಧ್ಯವಾಗುತ್ತದೆ. ಆದಕಾರಣ ಈಗ ಕೆಲವು ಮಾನ್ಯ ಸದಸ್ಯರು ಸರ್ಕಾರದವರು ರೈತರಿಗೇನೂ ಉಪಕಾರ ಮಾಡಿಯೇ ಇಲ್ಲ ಎಂದು ಹೇಳಿರುವುದರಲ್ಲಿ ಏನೂ ತಿರುಳಿಲ್ಲ. ಅವರು ಹೇಳಿರುವುದರಲ್ಲಿ ಯಾವ ಅರ್ಥ ಕೂಡ ಇಲ್ಲ. ರೈತರಿಗೆ ನಾನಾ ರೂಪದಲ್ಲಿ ಅನುಕೂಲತೆಗಳನ್ನೊದಗಿಸಲಾಗಿದೆ. ಅಲ್ಪಾವಧಿ ಸಾಲ, ಮಧ್ಯಾವಧಿ ಸಾಲಗಳನ್ನು ಬೇರೆ ಕೊಡಲಾಗುತ್ತಿದೆ. ಇಡಿಯ ರಾಜ್ಯದಲ್ಲೆಲ್ಲಾ ಈ ಸಾಲ ದೊರೆಯಲು ಏರ್ಪಾಡುಗಳನ್ನು ಮಾಡಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಸೆಟ್ಟಿ.—ಹತ್ತು ವರ್ಷಗಳ ಹಿಂದೆ ತಾವು ಟ್ರಾಕ್ಟರುಗಳನ್ನು ತರಿಸಿದಾಗ ರೇಟ್ ಏನಿತ್ತು; ಈಗೇನು ರೇಟಿದೆ ಎಂಬುದನ್ನು ತಾವು ಆಲೋಚನೆ ಮಾಡಿದ್ದೀರಾ ?

ಶ್ರೀ ಎನ್. ರಾಚಯ್ಯ.—ಈಗ ಪ್ರತಿಯೊಂದು ವಿಚಾರದಲ್ಲೂ ರೈತರು ಮುಂದೆ ಬರುತ್ತಿದ್ದಾರೆ. ಅವರಿಗೆ ಇದ್ದ ಅನೇಕ ತೊಂದರೆಗಳು ಈಗ ನಿವಾರಣೆಯಾಗಿವೆ. ಪ್ರತಿಯೊಂದು ಪ್ರದೇಶದ ರೈತರಿಗೂ ಸಾಲ ಕೊಡತಕ್ಕ ವ್ಯವಸ್ಥೆ ಮಾಡಿದ್ದೇವೆ. ಈ ವಿಚಾರಗಳನ್ನೆಲ್ಲ ತಿಳಿದು ಕೂಡ ಯಾವಾಗಲೂ ರೈತರ ಸಮೂಹದಲ್ಲೇ ಇರುವಂಥಾ ಶ್ರೀ ಆಲೂರು ಹನುಮಂತಪ್ಪನವರೂ ಸಹ, ಅವರು ನನ್ನ ಹಾಗೇ ಇನ್ನೂ ಚಿಕ್ಕ ವಯಸ್ಸಿನವರು, ಜವಾಬ್ದಾರಿಯನ್ನರಿಯದೆ ಅವರು ಮಾತನಾಡಿದ್ದಾರೆ. ಅದು ಸರಿಯಾದದ್ದಲ್ಲ. ಅವರು ಸುಮ್ಮನೆ ಜನರಲ್ ಆಗಿ ಮಾತನಾಡದೆ ಅವರ ನೆಲಮಂಗಲ ತಾಲ್ಲೂಕಿನಲ್ಲಿ ಯಾರು ಯಾರಿಗೆ ಕಬ್ಬಿಣ ಸಿಕ್ಕಿಲ್ಲ, ಯಾರು ಯಾರಿಗೆ ಗೊಬ್ಬರ ಸಿಕ್ಕಿಲ್ಲ ಎಂಬ ಬಗ್ಗೆ ಅವರು ನನಗೆ ಕಾಗದ ಬರೆಯಲಿ, ನಾಳೆಯೇ ಅವರಿಗೆ ಆ ಸಾಮಾನುಗಳು ಸಿಕ್ಕುವ ಹಾಗೆ ಮಾಡುತ್ತೇನೆ. ಆದುದರಿಂದ ಈಗೇನು ಅವರು ಆಕ್ಷೇಪಣೆಗಳನ್ನು ಮಾಡಿದ್ದಾರೋ ಅವುಗಳೇನೂ ಆಧಾರವಿಲ್ಲ, ಅವು ನಿರಾಧಾರವಾದ ಆಕ್ಷೇಪಣೆಗಳೆಂದು ಹೇಳುತ್ತೇನೆ.

ಇನ್ನು ಬುಲ್‌ಡೋಜರ್ಸ್ ಮತ್ತು ಟ್ರಾಕ್ಟರುಗಳ ವಿಚಾರಕ್ಕೆ ಬಂದರೆ ನಾವು ಈಗಾಗಲೇ ಕೇಂದ್ರ ಸರ್ಕಾರಕ್ಕೆ 50 ಟ್ರಾಕ್ಟರುಗಳನ್ನೂ 50 ಬುಲ್‌ಡೋಜರುಗಳನ್ನೂ ಕೊಡಬೇಕೆಂದು ಬರೆದಿದ್ದೇವೆ. ಅವರು ಕೊಟ್ಟಿದ್ದಾರೆ. ಇನ್ನು ದರದ ವಿಚಾರದಲ್ಲಿ ಅಲ್ಲಲ್ಲೇ ಬಹಳ ತೊಂದರೆ ಆಗಿದೆ ಎಂಬ ವಿಚಾರ ಸರ್ಕಾರದವರ ಗಮನಕ್ಕೂ ಬಂದಿದೆ. ಈ ವಿಚಾರಗಳನ್ನೆಲ್ಲ ಕೂಲಂಕಷವಾಗಿ ವಿಮರ್ಶೆಮಾಡಿ ಎಷ್ಟು ದರ ನಿಗದಿ ಮಾಡಿದರೆ ಅನುಕೂಲವಾಗುತ್ತದೆ ಎಂಬು

ದನ್ನೆಲ್ಲಾ ವಿಚಾರಮಾಡಿ ಬೇಗ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ಸರ್ಕಾರದವರೂ ಕೂಡ ಮನಸ್ಸು ಮಾಡಿದ್ದಾರೆ. ಆದುದರಿಂದ ಈ ತೊಂದರೆಯನ್ನು ಆದಷ್ಟು ಬೇಗ ಪರಿಹರಿಸಲಾಗುತ್ತದೆಯೆಂದು ತಿಳಿಸಲಿಚ್ಛಿಸುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪನವರೂ ಇನ್ನು ಕೆಲವು ಸದಸ್ಯರೂ ಸರ್ಕಾರಿ ಬಂಜರು ಜಮೀನು ಬೇಕಾದಷ್ಟಿದ್ದರೂ ಸರ್ಕಾರ ಭೂಮಿಯಿಲ್ಲದ ರೈತರಿಗೆ ಭೂಮಿಯನ್ನೇ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಆದರೆ ಸರ್ಕಾರ ಈಗಾಗಲೇ ಜಮೀನಿಲ್ಲದ ರೈತರಿಗೆ ಲಕ್ಷಗಟ್ಟಲೆ ಎಕರೆ ಭೂಮಿಯನ್ನು ಹಂಚಿದೆ. ಉತ್ತಮವಾದ ಜಮೀನು ಎಲ್ಲೆಲ್ಲಿದೆಯೋ ಅಂಥಾದ್ದನ್ನೆಲ್ಲ ಒಟ್ಟುಗೂಡಿಸಿ ಸರ್ವೇ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಲಾಗಿದೆ. ನಿನ್ನೆ ತಾನೆ ನನ್ನ ಅಧ್ಯಕ್ಷತೆಯಲ್ಲಿ ಆ ಸಮಿತಿಯ ಒಂದು ಮೀಟಿಂಗನ್ನು ಕರೆಯಲಾಗಿತ್ತು. ಆ ಮೀಟಿಂಗಿನಲ್ಲಿ ಈಗಾಗಲೆ ಕೆಲವು ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿದೆ. ಎಲ್ಲೆಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಉತ್ತಮ ಜಮೀನು ಒಂದು ನೂರು ಎಕರೆಗಳಿಗಿಂತ ಹೆಚ್ಚಾಗಿರುತ್ತದೆಯೋ ಅಂಥ ಕಡೆಗಳಲ್ಲೆಲ್ಲಾ ವ್ಯವಸಾಯದ ಕೋ-ಆಪರೇಟಿವ್ ಫಾರ್ಮಿಂಗುಗಳನ್ನು ಮಾಡಿ ಭೂಮಿಯಿಲ್ಲದ ಬಡವರಿಗೆ ಅಲ್ಲಿ ಸಹಾಯ ಕಲ್ಪಿಸಬೇಕೆಂದು ತೀರ್ಮಾನ ಮಾಡಿಕೊಂಡಿದ್ದೇವೆ. ಆದರೆ ಈ ಬಗ್ಗೆ ಸರ್ಕಾರದ ತೀರ್ಮಾನವಿನ್ನೂ ಆಗಿಲ್ಲ. ಇದು ತೀರ್ಮಾನವಾದ ಕೂಡಲೆ ಎಲ್ಲೆಲ್ಲಿ ಯಾರುಯಾರಿಗೆ ಜಮೀನಿಲ್ಲವೋ, ಯಾರುಯಾರು ಕೂಲಿನಾಲಿಯಿಂದ ಜೀವನ ಮಾಡುತ್ತಾ ಇದ್ದಾರೋ ಅಂಥಾ ಜನಗಳೆಲ್ಲರ ಆರ್ಥಿಕ ಮಟ್ಟವನ್ನು ಉತ್ತಮಗೊಳಿಸಲು ಯಾವ ವರ್ಗಕ್ಕೆ ಸೇರಿದತಕ್ಕವರೇ ಆಗಿರಲಿ, ಭೂಮಿಯಿಲ್ಲದ ರೈತರಿಗೆ ಇಲ್ಲಿ ಅನುಕೂಲ ದೊರೆಯುವಂತೆ ರೂಲ್ಸುಗಳನ್ನು ಮಾಡಲಾಗುವುದು. ಈ ಯೋಜನೆಯಲ್ಲಿ ಮೊದಲನೆಯ ರಿಯಾಯಿತಿ ಹರಿಜನರಿಗೆ. ಅನಂತರ ಉಳಿದುದನ್ನು ಇನ್ನುಳಿದ ಬಡವರಿಗೆ ಹಂಚುವುದು ಎಂಬ ತೀರ್ಮಾನವಾಗಬೇಕಾಗಿದೆ. ಇನ್ನು ಎಲ್ಲೆಲ್ಲಿ 10 ಎಕರೆಗಳಿಗಿಂತ ಭೂಮಿ ಇರುವುದೋ ಅಂಥ ಭೂಮಿಯನ್ನೆಲ್ಲ ಕೇವಲ ಹರಿಜನರಿಗೂ-ಗಿರಿಜನರಿಗೂ ಕೊಡಬೇಕೆಂದಿದ್ದೇವೆ. ಇನ್ನುಳಿದ ಕಡೆಗಳಲ್ಲೆಲ್ಲ ಶೇ. 50ರಷ್ಟನ್ನು ಹರಿಜನರಿಗೂ ಇನ್ನುಳಿದ 50 ರಷ್ಟನ್ನು ಇತರ ವರ್ಗಗಳವರಿಗೂ ಕೊಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಈ ಎಲ್ಲ ಪ್ರಯತ್ನಗಳೂ ಜಾರಿಗೆ ಬಂದರೆ ನಮ್ಮ ಆಹಾರ ಪರಿಸ್ಥಿತಿ ಬಹು ಬೇಗ ಉತ್ತಮ ಸ್ಥಿತಿಗೆ ಬರಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಹಾಗೆ ಕೊಡುವಾಗ 1000 ಎಕರೆ ಜಮೀನಿದ್ದರೆ, 500 ಎಕರೆಗಳನ್ನು ನಿರ್ದಿಷ್ಟವಾಗಿ ಮೀಸಲಾಗಿಟ್ಟಿದ್ದೇವೆ. ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟು ಮತ್ತು ಕೋ-ಆಪರೇಟಿವ್ ಡಿಪಾರ್ಟ್‌ಮೆಂಟು ಮತ್ತು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದಲೂ ಹಣವನ್ನು ಕ್ರೋಡೀಕರಿಸಿದೆ. ಈ ಸ್ಕೀಮಿನ ಮೂಲಕ ಷೇರ್ ಅಮೌಂಟ್ ಮೊದಲ್ಗೊಂಡು ಅವರಿಗೆ ಕೊಡುತ್ತೇನೆ. ಅವರಿಗೆ ಬೇಕಾದಂಥ ನೇಗಿಲುಗಳು, ಎತ್ತುಗಳು, ಜಾಗ, ಜಮೀನು; ಮತ್ತು ಬೇಕಾದಂಥ ರಸ್ತೆ, ಭಾವಿ, ಇರ್ರಿಗೇಷನ್ ಫೆಸಿಲಿಟೀಸ್ ಕೊಡುತ್ತೇವೆ. ಇವೆಲ್ಲವನ್ನು ಕೊಡುವುದಲ್ಲದೆ, ಅವಕಾಶವಿದ್ದ ಪಕ್ಷದಲ್ಲಿ ಪೌಲ್ಟ್ರಿ ಫಾರ್ಮಿಂಗ್, ಡೈರಿ ಫಾರ್ಮಿಂಗ್ ಮುಂತಾದುವಕ್ಕೆ ಸೌಲಭ್ಯಗಳನ್ನು ಅನಿಮಲ್ ಹಸ್ಬೆಂಡರಿ ಡಿಪಾರ್ಟ್‌ಮೆಂಟಿನಿಂದಲೂ, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಿಂದಲೂ ಒದಗಿಸಿ ಕೊಡುತ್ತೇವೆ. ಎಲ್ಲಾ ತರಹ ಅನುಕೂಲಗಳನ್ನು ಸಹಕಾರ ಸಂಘಗಳ ಮೂಲಕ ಏರ್ಪಡಿಸುತ್ತೇವೆ. ಹಾಗೆಯೇ ಸಹಾಯವನ್ನು ಮುಂದುವರಿಸಿಕೊಂಡು ಹಣದ ಸಹಾಯವನ್ನು ಯೋಜನೆಯ ಮೂಲಕ ಕೊಡಬೇಕೆಂದಿದ್ದೇವೆ. ಎರಡು ತಿಂಗಳ ಹಿಂದೆ ನಾನು ದೆಹಲಿಗೆ ಹೋಗಿದ್ದೆ. ಅಲ್ಲಿ ಸಂಬಂಧಪಟ್ಟ ಕೇಂದ್ರ ಸರ್ಕಾರದ ಮಂತ್ರಿಗಳ ಜೊತೆಯಲ್ಲಿ ಸ್ಕೀಮುಗಳ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾಗ, ರಿಹ್ಯಾಬಿಲಿಟೇಷನ್ ಆಫ್ ಲ್ಯಾಂಡ್‌ಲೆಸ್, ವರ್ಕರ್ಸ್ ಎನ್ನತಕ್ಕಂಥ ಒಂದು ಸ್ಕೀಮು ಇದೆಯೆಂದು ಗೊತ್ತಾಯಿತು. ಆ ಸ್ಕೀಮಿನ ಪ್ರಕಾರ ಉತ್ತರ ಪ್ರದೇಶ ಸರ್ಕಾರದವರು ಸುಮಾರು ಎರಡು ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಉಪಯೋಗಿಸಿಕೊಂಡಿದ್ದಾರೆ. ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಕೇಂದ್ರ ಸರ್ಕಾರದವರು ಸಹಾಯ ಮಾಡಿದರೆ, ಏಕೆ ಅನುಕೂಲ ಪಡೆಯಬಾರದೆಂದಿದೆ. ಪ್ರಪೋರ್ಷನೇಟ್ ಆಗಿ ಸಬ್‌ಸಿಡಿ ಕೊಡುವ ಭಾಗವನ್ನು ಬಿಟ್ಟು ಉಳಿದ ಭಾಗಕ್ಕೆ ಒಂದು ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಾರೆ. ಈ ಸಹಾಯವನ್ನು ಹೊಂದುವುದಕ್ಕೆ ತೀವ್ರತೆಯಿಂದ ಯೋಚನೆ ಮಾಡಲಾಗುತ್ತದೆ. ಈ ಯೋಜನೆಯ ಪ್ರಕಾರ ಹರಿಜನ-ಗಿರಿಜನರೇ ಅಲ್ಲದೆ, ಬೇರೆ ಜನರಿಗೂ ಸಹ ಸಹಾಯವನ್ನು ಒದಗಿಸಿ ಕೊಡುತ್ತಾರೆ. ಸರ್ಕಾರ ತೀರ್ಮಾನ ತೆಗೆದುಕೊಂಡ ಮೇಲೆ, ಒದಗಿಸಿ ಕೊಡಬೇಕು. ಹೊಸದಾಗಿ ಸರ್ಕಾರದವರು ಏನು ಜಮೀನುಗಳನ್ನು ಕೊಡುತ್ತಾರೋ, ಆ ಜಮೀನುಗಳು ಉಪಯುಕ್ತವಾಗಿ, ಸಂಬಂಧಪಟ್ಟವರಿಗೆ ದೊರಕಿ, ಹೆಚ್ಚಿಗೆ ಆಹಾರವನ್ನು ಬೆಳೆಯತಕ್ಕಂಥ ದೃಷ್ಟಿಯಿಂದ ಮಾಡಬೇಕು. ಈ ಯೋಜನೆ ಇರುವ ಕಾರಣದಿಂದ, ಈ ಆಹಾರದ ಮತ್ತು ಜಮೀನಿನ ಕೊರತೆಯನ್ನು ನೀಗಬಹುದೆಂದು ಕಾಣಿಸುತ್ತದೆ.

ಶ್ರೀ ಎಂ. ಪಿ. ಪಾಟೀಲ್ ಅವರು, 'The Minister for Agriculture has got two or three wives—one a pet wife; another a neglected wife and the third a childless wife'' ಎಂದು ಹೇಳಿದರು. ಬಹಳ ಒಳ್ಳೆಯದು! ಈ ವ್ಯವಸಾಯ ಮಂತ್ರಿಯಾದ ಮೇಲೆ, ಮೊದಲನೆಯ ಹೆಂಡತಿ ವ್ಯವಸಾಯದ ಇಲಾಖೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಮೊದಲನೆಯ ಹೆಂಡತಿ ಸಮಾಜ ಕಲ್ಯಾಣ ಶಾಖೆ; ಏಕೆಂದರೆ ಸಮಾಜ ಕಲ್ಯಾಣ ಶಾಖೆ ಮಂತ್ರಿಯಾದ ಮೇಲೆ ವ್ಯವಸಾಯ ಇಲಾಖೆ ನನಗೆ ಬಂದಿತ್ತು. ವ್ಯವಸಾಯ ಇಲಾಖೆ ಎರಡನೆಯ ಹೆಂಡತಿಯಾಗಿ ಬಂದಿದೆ. ಹೀಗೆ ತೆಗೆದುಕೊಂಡರೂ, ಇಬ್ಬರು ಹೆಂಡತಿಯರಿದ್ದರೆ ಕಿರಿಯ ಹೆಂಡತಿಯನ್ನು ಕಂಡರೇ ಪ್ರೀತಿ. ಅದು ಅನುಭವವಿದ್ದವರಿಗೆ ಗೊತ್ತು. ವ್ಯವಸಾಯದ ಇಲಾಖೆಯ ವಿಚಾರದಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಿದ್ದೇನೆ ಮತ್ತು ಆ ಇಲಾಖೆಯ ನೌಕರರೂ ತೀವ್ರಾಸಕ್ತಿಯಿಂದ ಕೆಲಸ ಮಾಡಿದ್ದಾರೆ; ಮತ್ತು ನಾನು ಇನ್ನೂ ಹೆಚ್ಚಿನ ರೀತಿಯಲ್ಲಿ ಹೈಯೆಸ್ಟ್ ಪ್ರಯಾರಿಟಿ ಕೊಟ್ಟು ಮಾಡುವವನಿದ್ದೇನೆ. ಎಲ್ಲಾ ಇಲಾಖೆಗಳ ಕೆಲಸವನ್ನೂ ಸಮದೃಷ್ಟಿಯಿಂದ ಕಾಣುತ್ತೇವೆಂದು ಹೇಳಿದ್ದರೆ, ಅಪಾರ್ಥ ಮಾಡಿದ್ದಾರೆ. ಶ್ರೀ ಪಾಟೀಲರು ಅಜ್ಞಂದರಾಗಿದ್ದಾರೆ, ಅನಾರೋಗ್ಯದಿಂದಿದ್ದಾರೆ. ರೆವಿನ್ಯೂ ಡಿಪಾರ್ಟ್‌ಮೆಂಟ್ ಒಂದೇ ಅವರೊಬ್ಬರ ಕೈಯಲ್ಲಿದ್ದರೂ, ಅವರು ಒಂದು ವರ್ಷದಲ್ಲೇ ಕಳೆದುಕೊಂಡು ಬಿಟ್ಟರು, ಏನು ಮಾಡುವುದು!

(ಶ್ರೀ ಎನ್. ರಾಚಯ್ಯ)

ಅವರು ಈ ರೀತಿ ಅಸಮಂಜಸವಾದ ರೀತಿಯಲ್ಲಿ ಮಾತ ನಾಡತಕ್ಕಂಥದ್ದು ಸರಿಯಲ್ಲ. ಏನೇ ಆಗಲೀ, ಇಬ್ಬರು ಹೆಂಡತಿ ದರು; ಸಾಮರ್ಥ್ಯವಿದ್ದವರು ಇಬ್ಬರ ಹೆಂಡತಿಯರನ್ನು ಮದುವೆ ಮಾಡಿಕೊಂಡರೂ ನಿರ್ವಹಿಸಬಲ್ಲರು. ಕೆಲವರು ಒಬ್ಬಳೇ ಹೆಂಡತಿ ಯಿದ್ದರೂ, ಉಪಯೋಗವಿಲ್ಲದ ರಾಗಿರುತ್ತಾರೆ.

ಈ ಒಂದು ವ್ಯವಸಾಯದ ಇಲಾಖೆಯನ್ನು ಪುನರ್ರಚನೆ ಮಾಡಬೇಕೆಂಬ ತೀವ್ರಾಸಕ್ತಿ ಸರ್ಕಾರಕ್ಕೆ ಇದೆ. ಈಗ ಎರಡು ತಿಂಗಳ ಿ, ಇಡೀ ವ್ಯವಸಾಯ ಇಲಾಖೆಯನ್ನು ಸುವ್ಯವಸ್ಥಿತವಾದ ರೀತಿಯಲ್ಲಿ ಎಂದರೆ ಆಹಾರದ ಉತ್ಪಾದನೆಗೆ ಅನುಕೂಲವಾಗುವ ರೀತಿ ಯಲ್ಲಿ ಪುನರ್ರಚಿಸಲು ಸಲಹೆಗಳನ್ನು ಕೊಡಲು ಒಬ್ಬ ಸ್ಪೆಷಲ್ ಆಫೀಸರನ್ನು ನೇಮಿಸಿತು. ಬರುವ ತಿಂಗಳ ಕೊನೆಯೊಳಗೆ ಅವರ ವರದಿ ಬರುವುದಕ್ಕೆ ಏರ್ಪಾಡು ಮಾಡಿವೆ. ಆ ವರದಿಯನ್ನು ಸರ್ಕಾರ ಪರಿಶೀಲನೆ ಮಾಡಿ ಅಗತ್ಯವಿದ್ದರೆ ಒಂದು ಸಣ್ಣ ಎಕ್ಸ್‌ಪರ್ಟ್ ಕಮಿಟಿಗೆ ಅದನ್ನು ಒಪ್ಪಿಸಿ ಅಭಿಪ್ರಾಯ ತೆಗೆದು ಕೊಳ್ಳಲು ಸರ್ಕಾರದ ಇಚ್ಛೆ ಇದೆ.

ಒಬ್ಬ ಸದಸ್ಯರು.—ಸೀಡ್ ಫಾರಮ್ಮುಗಳು, ಪೆಸ್ಟ್ ಮತ್ತು ಡಿಸೀಸ್ ಕಂಟ್ರೋಲ್ ಸ್ಕೀಮಿನ ವಿಚಾರ ಹೇಳುತ್ತೀರಾ ?

ಶ್ರೀ ಎನ್. ರಾಚಯ್ಯ.—ಸೀಡುಗಳನ್ನು ಒದಗಿಸು ವಂಥ 53 ಸೀಡು ಫಾರಮ್ಮುಗಳನ್ನು ಈಗಾಗಲೇ ಒದಗಿಸಿದ್ದೇವೆ. ಒಂದೇ ವರ್ಷದಲ್ಲಿ ಜಮೀನನ್ನು ಆಬಾದುಮಾಡಿ, ಹೆಚ್ಚಿನ ರೀತಿಯಲ್ಲಿ ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಆಗುವುದಿಲ್ಲ. 2-3-4 ವರ್ಷಗಳಲ್ಲಿ ಸಾಕಷ್ಟು ಮಟ್ಟಿಗೆ ಫಸಲನ್ನು ತೆಗೆಯ ಲಾಗುತ್ತದೆ. ಇಡೀ ಸಂಸ್ಥಾನಕ್ಕೆ ಸುಧಾರಿತ ಬೀಜವನ್ನು ರಿಜಿಸ್ಟರ್ಡ್ ಗ್ರೋಯರ್ಸ್ ವ್ಯವಸ್ಥೆಮಾಡಿ, ಒದಗಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಈ ಆಹಾರದ ಸಮಸ್ಯೆಯನ್ನು ತೀವ್ರತೆಯಿಂದ ಬಿಡಿಸುವ ಸಲುವಾಗಿ, ಅಗ್ರಿಕಲ್‌ಚರ್ ಇಲಾಖೆಗೆ ಒಬ್ಬ ಡೈರೆಕ್ಟರನ್ನು, ಇಬ್ಬರು ಜಾಯಿಂಟ್ ಡೈರೆಕ್ಟರು ಗಳನ್ನೂ ನೇಮಿಸಿವೆ. ಒಬ್ಬ ಡೈರೆಕ್ಟರು, ಜನರಲ್ ಅಡ್ಮಿನಿಸ್ಟ್ರೇಷನ್, ಜನರಲ್ ಸೂಪರ್‌ವಿಷನ್ ನೋಡಿ ಕೊಂಡು ಇರುತ್ತಾರೆ. ಒಬ್ಬರು ಇನ್‌ಸ್ಪೆಕ್ಷನ್ ಮಾಡಿಕೊಂಡು, ಅದಕ್ಕೆ ಸಂಬಂಧಪಟ್ಟ ಕೆಲಸಗಳನ್ನು ನೋಡುತ್ತಾರೆ. ಇನ್ನೊಬ್ಬ ಜಾಯಿಂಟ್ ಡೈರೆಕ್ಟರು ಅಗ್ರಿಕಲ್‌ಚರ್ ರಿಸರ್ಚ್, ಸೀಡ್ ಫಾರ್ಮ್ ಚಾರ್ಜ್ ನಲ್ಲಿದ್ದಾರೆ. ಅಂಕಿ ಅಂಶಗಳನ್ನು ನೋಡಿದರೆ, ವ್ಯವಸಾಯದ ಇಲಾಖೆಯ ಕೆಲಸ ಕಾರ್ಯಗಳು ಎಷ್ಟು ತೀವ್ರತೆಯಿಂದ ಮತ್ತು ಆಸಕ್ತಿಯಿಂದ ನಡೆಯು ತ್ತವೆಂದು ತಮಗೆ ಗೊತ್ತಾಗಿ ಸಂತೋಷವಾಗುತ್ತದೆ. ಮತ್ತು ನಮ್ಮ ಸಂಸ್ಥಾನವು ಇನ್ನಾವ ಸಂಸ್ಥಾನಕ್ಕೂ ಕಡಮೆಯಾಗಿಲ್ಲವೆಂದು ಮನದಟ್ಟಾಗುತ್ತದೆ. ಈ ಕೆಲಸ ಕಾರ್ಯಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮಾಡತಕ್ಕಂಥ ಜವಾಬ್ದಾರಿಯ ಮನೋವೃತ್ತಿಯನ್ನು ಇಟ್ಟು ಕೊಂಡಿದ್ದೇವೆ. ತಾವು ಉದಾರ ಮನಸ್ಸಿನಿಂದ ಏನೇನು ಸಲಹೆಗಳನ್ನು ಮಾಡಿದ್ದೀರಿಯೋ ಅವುಗಳೆಲ್ಲ ವನ್ನೂ ಮನಸ್ಸಿನಲ್ಲಿಟ್ಟುಕೊಂಡು ರೈತ ಬಾಂಧವರಿಗೆ ಏನೇನು ಅಡ್ಡಿ ಅಡಚಣೆಗಳಿವೆಯೋ ಅನಾನುಕೂಲ ಗಳಿವೆಯೋ ಅವುಗಳನ್ನು ಸರಿಪಡಿಸುತ್ತೇವೆ. ವ್ಯವ ಸಾಯದ ಇಲಾಖೆ ವಿಚಾರದಲ್ಲಿ ಇಷ್ಟೊಂದು ಹೇಳಿ ಬಿಡುತ್ತೇನೆ.

ಅನಿಮಲ್ ಹಸ್ಬೆಂಡರಿ ಇಲಾಖೆಯ ವಿಷಯದಲ್ಲಿ ಹೇಳುವುದಾದರೆ, ಆ ಇಲಾಖೆಯವರೂ ಬಹಳ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. 33 ವೆಟಿರಿನರಿ ಡಿಸ್ಪೆನ್ಸರಿಗಳನ್ನು ಒಂದು ವರ್ಷದಲ್ಲಿ ಮಾಡಿದ್ದಾರೆ. ಇಡೀ ಸಂಸ್ಥಾನದಲ್ಲಿ ಯಾವ ಒಂದು ವರ್ಷದಲ್ಲೂ ಇಷ್ಟು ಪ್ರಮಾಣದಲ್ಲಿ ವೆಟರಿನರಿ ಆಸ್ಪತ್ರೆಗಳು ಮಂಜೂ ರಾಗಿಲ್ಲ. ಬರುವ ವರ್ಷದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಈ ಆಸ್ಪತ್ರೆಗಳನ್ನು ತೆರೆಯಬೇಕೆಂದು ಮಾಡಿಕೊಂಡಿದ್ದೇವೆ. ವೆಟರಿನರಿ ಡಿಪಾರ್ಟ್‌ಮೆಂಟಿನಲ್ಲಿ ಏನು ಒಂದು ಕೊರತೆ ಎಂದರೆ, ಟ್ರೇನ್ಡ್ ಪರ್ಸನೆಲ್ ಈ ಇಲಾಖೆಯಲ್ಲಿ 200-300 ಕೆಲಸಗಳು ಖಾಲಿ ಇವೆ. ಈಗ 50-100 ಜನರನ್ನು ತರಬೇತಿ ಮಾಡಿದ್ದೇವೆ. ವೆಟರಿನರಿ ಕಾಲೇಜು 19 8ನೆಯ ಇಸವಿಯಲ್ಲಿ ಪ್ರಾರಂಭವಾಯಿತು; ಅದರ ಎರಡನೆಯ ವರ್ಷ ವಾಗಿದ್ದು ಮೂರನೆಯ ವರ್ಷಕ್ಕೆ ಕಾಲಡುವ ಸಂದರ್ಭ ಬಂದಿದೆ. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ನಾಳೆ ವೆಟರಿನರಿ ಕಾಲೇಜಿನ ನಾಲ್ಕು ಕಟ್ಟಡ ಗಳ ಶಂಕುಸ್ಥಾಪನೆ ಮಹೋತ್ಸವವನ್ನು ಇಟ್ಟು ಕೊಂಡಿದ್ದೇವೆ.

ಶ್ರೀ ಜಿ. ಬಿ. ಮಲ್ಲಾರಾಧ್ಯ.—ಯಾವಾಗಲೂ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಹೆಸರಿನಲ್ಲಿ ಇಕ್ಸಿಬಿಷನ್ನು ಪ್ರಿಂಟ್ ಮಾಡಿಸುತ್ತಿದ್ದರು. ಈ ಸಾರಿ ಗವರ್ನಮೆಂಟ್ ಸೆಕ್ರೆಟರಿಯ ದ ಇಕ್ಸಿಬಿಷನ್ ಬಂದಿದೆ. ಏಕೆ ಈ ಹೊಸ ಪದ್ಧತಿ ?

ಶ್ರೀ ಎನ್. ರಾಚಯ್ಯ.—ಸರ್ಕಾರದ ಅಧಿಕಾರಿಯಾದ ಮೇಲೆ, ಯಾರು ಮಾಡಿದರೂ ಒಂದೇ. ಈ ಇಲಾಖೆಯ ಕಾರ್ಯಾಚರಣೆಗಳನ್ನು ಇನ್ನೂ ಹೆಚ್ಚಿನ ವೇಗದಲ್ಲಿ ಮುಂದುವರಿಸಿಕೊಂಡು ಹೋಗುತ್ತೇವೆ. ಈ ಇಲಾಖೆ ಯವರು ಹೆಚ್ಚಿನ ದಕ್ಷತೆಯಿಂದ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ, ಇನ್ನೂ ತೀವ್ರತೆಯಿಂದ ಅವರು ಕೆಲಸ ಮಾಡುವ ಆಸೆ ಇದೆ.

Cattle farms ವಿಚಾರವನ್ನು ಪ್ರಸ್ತಾಪ ಮಾಡಿ ದ್ದಾರೆ. ಈ ವಿಷಯದಲ್ಲಿ ನನಗೂ ಬಹಳ ಆಸಕ್ತಿ ಇದೆ. ಸರ್ಕಾರದ ಯೋಜನೆಗಳನ್ನು ಯಾವ ರೀತಿಯಲ್ಲಿಯೂ ಯಾರೂ ದುರುಪಯೋಗ ಮಾಡಬಾರದೆಂಬ ಉದ್ದೇಶ ದಿಂದ ನಾನು ಮಂತ್ರಿಯಾದ ಕೂಡಲೇ, ವ್ಯವಸಾಯ ಇಲಾಖೆ ನನಗೆ ಬಂದ ಕೂಡಲೆ, ಒಂದು ಸಮಿತಿಯನ್ನು ನೇಮಕ ಮಾಡಿದೆ. ಇಡೀ ರಾಜ್ಯದಲ್ಲೆಲ್ಲ ಅವರು ಪ್ರವಾಸಮಾಡಿ ವರದಿಯನ್ನು ತಯಾರಿಸಿದ್ದಾರೆ. ಅದನ್ನು ಈ ಹೊತ್ತು ನಾಳೆಯಲ್ಲಿ ಕೊಡುವವರಾಗಿ ದ್ದಾರೆ. ಎಲ್ಲ Live stock farms ನಲ್ಲಿಯೂ ಸರಿ ಯಾದ ಕೆಲಸ ನಡೆಯುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಸಾಧ್ಯವಾದರೆ ಈ ಇಲಾಖೆಯನ್ನು ವಿಸ್ತ ರಣೆ ಮಾಡಿ ವೆಟರಿನರಿ ಕಾಲೇಜಿಗೆ ಪ್ರಿನ್ಸಿಪಾಲರನ್ನು ನೇಮಕ ಮಾಡಿ ಅನಿಮಲ್ ಹಸ್‌ಬೆಂಡ್ರಿ, ವೆಟರಿನರಿ ಇಲಾಖೆಗಳನ್ನು ವ್ಯವಸಾಯದ ಇಲಾಖೆಯನ್ನು ಹೇಗೆ ಅಭಿವೃದ್ಧಿ ಮಾಡಬೇಕೋ ಹಾಗೆ ಮೂರನೆಯ ಯೋಜ ನೆಯ ಅವಧಿಯಲ್ಲಿ ಮಾಡಬೇಕೆಂಬ ಉದ್ದೇಶವಿದೆ. Sri S. K. Patil, the Hon'ble Minister for food at the centre, has said that highest priority would be given to the development of animal husbandry. ಇದನ್ನು ಕಾರ್ಯಗತ ಮಾಡಬೇಕೆಂದು ಮೈಸೂರು ಸರ್ಕಾರದವರು ಮನಸ್ಸು ಮಾಡಿದ್ದಾರೆಂದು ಹೇಳು ತ್ತೇನೆ. Aided Cattle breeders ವಿಷಯದಲ್ಲಿ ಶ್ರೀಮಾನ್ ಶಂಕರಪ್ಪನವರು ಹೇಳಿರುವುದನ್ನು ಕೂಲಂ ಕಷವಾಗಿ ಪರಿಶೀಲನೆ ಮಾಡಿ ಅವರ ಶಂಕೆಗೆ ಅವಕಾಶ

ವಿಲ್ಲದಿರುವ ಹಾಗೆ ಮಾಡುವುದಾಗಿ ಸರ್ಕಾರದ ಪರವಾಗಿ ಭರವಸೆ ಕೊಡುತ್ತೇನೆ. ವರದಿ ಬಂದ ಮೇಲೆ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಮೀನುಗಾರಿಕೆ ಇಲಾಖೆಯ ವಿಚಾರವನ್ನು ತೆಗೆದುಕೊಂಡರೂ ಕೂಡ ನಾವು ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದೇವೆ. ಈಗಾಗಲೇ ತಮಗೆ ಗೊತ್ತಿರುವ ಹಾಗೆ 1-11-1956 ರಿಂದ ಮಾತ್ರ ಮೀನುಗಾರಿಕೆ ಇಲಾಖೆಗೆ ಪ್ರತ್ಯೇಕ ಅಧಿಕಾರಿಯನ್ನು ನೇಮಕ ಮಾಡಿ ನಮ್ಮ ರಾಜ್ಯದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡುತ್ತಿದ್ದೇವೆ. ಕಳೆದ ಮೂರು ವರ್ಷಗಳಲ್ಲಿ ಒಳ್ಳೆಯ ಪ್ರಗತಿಯನ್ನು ಸಾಧಿಸಿದ್ದೇವೆ. ಈಗ ನಮ್ಮಲ್ಲಿ ಪ್ರತಿ ವರ್ಷವೂ ಸುಮಾರು 1.2 ಲಕ್ಷ ಟನ್ ಮೀನು ಉತ್ಪತ್ತಿಯಾಗುತ್ತಿದೆ. ಬರುವ ವರ್ಷ 1.38 ಲಕ್ಷ ಟನ್ ಉತ್ಪತ್ತಿ ಮಾಡುವುದಕ್ಕೆ ಅವಕಾಶವಿದೆ. ಮೀನುಗಾರಿಕೆಯನ್ನವಲಂಬಿಸಿರುವ ಬಡವರಿಗೆ, ಆರ್ಥಿಕ ಮತ್ತು ವಿದ್ಯಾಭ್ಯಾಸದಲ್ಲಿ ಹಿಂದಿರುವವರಿಗೆ mechanised boats ಮತ್ತು ಇತರ ಸೌಲಭ್ಯಗಳನ್ನು ಕೊಟ್ಟು ಈ ಜನರು ಮುಂದುವರಿಯುವಂತೆ ಮಾಡಬೇಕೆಂದು ಪ್ರಯತ್ನಿಸುತ್ತಿದ್ದೇವೆ. ಆದರೆ ಈ ಕೆಲಸವನ್ನು ಅವಲಂಬಿಸಿರುವವರು ಇದನ್ನು ಪಡೆಯಲು ಮುಂದೆ ಬರುತ್ತಿಲ್ಲ, ಯಾರು ಯಾರು ಈ ಕೆಲಸ ಮಾಡುತ್ತಾರೋ ಅವರಿಗೆ mechanised boats ಪಡೆಯಲು ಶೇಕಡ 33⅓ ರಷ್ಟು ಧನ ಸಹಾಯ ಕೊಡುತ್ತಿದ್ದೇವೆ. ಇತರ ಸಣ್ಣ ಪುಟ್ಟ ಸಲಕರಣೆಗಳು, ಉಪ್ಪು ಮುಂತಾದುವಕ್ಕಾಗಿ ಶೇಕಡ 25 ರಷ್ಟು ಸಹಾಯದ್ರವ್ಯ ಕೊಡುತ್ತಿದ್ದೇವೆ. ಒಟ್ಟಿನಲ್ಲಿ ಇಲಾಖೆಯ ಕೆಲಸ ಚೆನ್ನಾಗಿ ನಡೆದಿದೆ. ಈ ಇಲಾಖೆಯ ಡೈರೆಕ್ಟರನ್ನು ಜಪಾನಿಗೆ ಕಳುಹಿಸಿದ್ದೇವೆ. ಇಲಾಖೆಯನ್ನು ತನ್ಮೂಲಕ ಈ ಕೈಗಾರಿಕೆಯನ್ನೂ ಇನ್ನು ಹೆಚ್ಚು ಅಭಿವೃದ್ಧಿ ಮಾಡಬೇಕೆಂಬುದು ಸರ್ಕಾರದ ಉದ್ದೇಶ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಈ ಬಾಬಿಗೆ ಎಷ್ಟು ಹಣವನ್ನೊದಗಿಸಿದ್ದೀರಿ ?

ಶ್ರೀ ಎಚ್. ರಾಚಯ್ಯ.—ಎರಡನೆಯ ಯೋಜನೆಯಲ್ಲಿ 69 ಲಕ್ಷ ರೂಪಾಯಿ, ಮೂರನೆಯ ಯೋಜನೆಯಲ್ಲಿ 132 ಲಕ್ಷ ರೂಪಾಯಿ ಒದಗಿಸಿದ್ದೇವೆ. ಅಗತ್ಯವಾದರೆ ಇನ್ನೂ ಹೆಚ್ಚು ಮಾಡಲು ಸರ್ಕಾರದವರು ಸಿದ್ಧ.

ಶ್ರೀ ಟಿ. ಎಚ್. ಮೂಡಲಗಿರಿ ಗೌಡ.—ಅಲ್ಲಿ ಒದಗತಕ್ಕ ಮೀನನ್ನು ಬೆಂಗಳೂರು ಪೇಟೆಯಲ್ಲಿ ವ್ಯಾಪಾರ ಮಾಡುವ ಹಾಗೆ ಏರ್ಪಾಡು ಮಾಡಿದ್ದೀರಾ ?

ಶ್ರೀ ಎಚ್. ರಾಚಯ್ಯ.—ಎರಡು ಇನ್ಸುಲೇಟೆಡ ಟ್ರಕ್‌ಗಳನ್ನೊದಗಿಸಿದ್ದೇವೆ. ಹಾಸನದಲ್ಲಿ ಒಂದು cold storage ಇಟ್ಟು ಮೀನನ್ನು ಮಂಗಳೂರಿನಿಂದ ಹಾಸನಕ್ಕೆ ತಂದಿಟ್ಟು, ಅಲ್ಲಿಂದ ಬೆಂಗಳೂರು ಮೈಸೂರಿಗೆ ತರಬೇಕೆಂದಿದೆ. ಇನ್ನು ಅನೇಕ cold storage ಗಳನ್ನು ಮಾಡಬೇಕೆಂದಿದ್ದೇವೆ.

ಶ್ರೀಮಾನ್ ಮುಕ್ಕಣ್ಣಪ್ಪನವರು ಒಂದು ವಿಷಯವನ್ನು ಹೇಳಿದರು. ಅನಿಮಲ್ ಹಸ್‌ಬೆಂಡ್ರಿ ಇಲಾಖೆಯಲ್ಲಿ ಎರಡು ಕುದುರೆಗಳನ್ನು ಮಾರಿದರು, ಅವಕ್ಕೆ ಒಂದು ಲಕ್ಷ ರೂಪಾಯಿ ಆಗುತ್ತಿತ್ತು, ಅವನ್ನು ಹತ್ತು ಸಾವಿರಕ್ಕೆ ಐ. ಜಿ. ಪಿ ಗೆ ಕೊಟ್ಟಿರುತ್ತಾರೆಂದು ಹೇಳಿದರು. ನನಗೆ, ಸರ್ಕಾರಕ್ಕೆ ಗೊತ್ತಿರುವ ಹಾಗೆ, ಈ ರೀತಿ ತಪ್ಪೇನೂ ಆಗಿಲ್ಲ. ಆ ಎರಡು ಕುದುರೆಗಳನ್ನು ಮಾರುವಾಗ ಸರ್ಕಾರಕ್ಕೆ ಶಿಫಾರಸು ಮಾಡಿ, ಸರ್ಕಾರಿ ಆಜ್ಞೆಯ ಮೇಲೆ ಕೊಡಲಾಗಿದೆ. ಯಾವ ಅಪವಾದಕ್ಕೂ ಅವಕಾಶವಿರುವ ವ್ಯವಹಾರವಾಗಿಲ್ಲ. ಹದಿಮೂರು ಸಾವಿರ ರೂಪಾಯಿಗೆ ಮಾರಿದ್ದಾರೆ.

Sri G. E. HOOVER (Chikpet).—Is it the policy of the Government to sell horses privately ?

ಶ್ರೀ ಎಚ್. ರಾಚಯ್ಯ.—1956 ರಿಂದ 1958ವರೆಗೆ ಇವಕ್ಕಿಂತ ಒಳ್ಳೆಯ ಕುದುರೆಗಳನ್ನು ಮಾರಿದಾಗ ಇನ್ನು ಕಡಮೆ ಬೆಲೆ ಬಂದಿದೆ.

Sri J. B. MALLARADHYA.—The objection taken is why it was not sold in public auction.

ಶ್ರೀ ಎಚ್. ರಾಚಯ್ಯ.—1956ನೆಯ ಇಸವಿಯಲ್ಲಿ ಎರಡು ಕುದುರೆಗಳನ್ನು ಹರಾಜು ಮಾಡಿದೆವು. ಆಗ ಒಂದಕ್ಕೆ 6,000 ರೂಪಾಯಿ ಇನ್ನೊಂದಕ್ಕೆ 6,700 ರೂಪಾಯಿ ಬಂದವು. 1957ನೆಯ ಇಸವಿಯಲ್ಲಿ 7,400 ಮತ್ತು 5000 ರೂಪಾಯಿ ಬಂದುವು. 1958ರಲ್ಲಿ ಒಂದಕ್ಕೆ 6,000 ಇನ್ನೊಂದಕ್ಕೆ 2,500 ರೂಪಾಯಿ ಬಂದುವು. ಈ ವರ್ಷ ಎರಡು ಕುದುರೆಗಳನ್ನು 13,000 ರೂಪಾಯಿಗೆ ಮಾರಿದೆವು.

Sri J. B. MALLARADHYA.—These are two horses which have a special value on account of their pedigree. If it is a good pedigree horse or a pedigree dog, it has got a premium in the market. What are the special circumstances for skipping over the usual procedure of public auction ?

Sri N. RACHIAH.—Then, you please resolve that they should be sold only in auction and we shall sell them only in auction.

Sri J. B. MALLARADHYA.—Should the House prescribe the procedure for sale ? What were the special circumstances for deviating from the usual procedure of public auction ? To this an answer has to come from the Minister.

Sri C. K. RAJAIAH SETTY.—At least you could have called for tenders.

ಶ್ರೀ ಜಿ. ಇ. ಹೂವರ್.—ಹರಾಜಿನಲ್ಲಿ ಎರಡು ಸಾವಿರ ಬಂದರೂ ಚಿಂತೆಯಿಲ್ಲ, ಏಕೆ ಮಾರಿದಿರಿ ?

ಶ್ರೀ ಎಚ್. ರಾಚಯ್ಯ.—ಸರ್ಕಾರಕ್ಕೆ ಬರುವ ಹಣವನ್ನು ದೃಷ್ಟಿಯಲ್ಲಿಡಬೇಕು ; ಸರ್ಕಾರಕ್ಕೆ ಬರುವ ಹಣವನ್ನು ಕಳೆದುಕೊಳ್ಳುವುದಕ್ಕಾಗುವುದಿಲ್ಲ. In connection with the disposal of a pony, an offer of Rs. 1000 was received from one Mr. V. T. Padmanabhan. ಆಮೇಲೆ ಇದಕ್ಕೆ ಕೊಟೇಷನ್ ಕರೆದಾಗ 850 ರೂಪಾಯಿಗೆ ಬಂತು. ಹಾಗೆ ಈಗ ಹರಾಜು ಹಾಕಿದರೆ ಕಡಮೆ ಹಣ ಬರುತ್ತದೆಯೋ ಏನೋ ಎಂಬ ಭಯ ಬಂತು.

Sri J. B. MALLARADHYA.—If you see what is the amount realised by the sale of pedigree horses over a period of five to ten years, it will be seen that this is a very distressing situation. We are not bothered about to whom you give them. Let us give the last pie due to the Government. Did you publish

(SRI J. B. MALLARADHYA)

about their sale in the local papers and did you call for tenders? Even for the disposal of a petty excise shop you give a lot of publicity. It must be remembered that these pedigree horses are a national asset.

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರಿಗೆ ಏನು ಬೇಕಾದರೂ ಅನುಮಾನವಿರಬಹುದು; ಇದಕ್ಕೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಏನಾದರೂ ಇದ್ದರೆ ಎನ್‌ಕ್ವೈರಿ ಮಾಡುತ್ತೇನೆ. ಸರ್ಕಾರಕ್ಕೆ ಯಾರಿಂದಾದರೂ ನಷ್ಟವಾಗಿದ್ದರೆ ಅದನ್ನು ಕಂಡು ಹಿಡಿಯುತ್ತೇವೆ. Public auction ಮಾಡದೇ ಇರಲು ಕಾರಣ, ಇನ್ನೂ ಕಡಮೆ ಬೆಲೆ ಬರುತ್ತದೆಯೋ ಏನೋ ಎಂಬುದು.

5-30 P.M.

ಶ್ರೀ ಟಿ. ಎನ್. ಮೂಡಲಗಿರಿ ಗೌಡ.—ಇದು ಕಾಂಟ್ರವರ್ಸಿಯಲ್ ಸಬ್ಜೆಕ್ಟ್ ಆಗಿದೆ. ಶ್ರೀಮಾನ್ ಮಲ್ಲಾರಾಧ್ಯರು ಹೇಳುವುದರಲ್ಲಿ ಸ್ವಲ್ಪ ಸತ್ಯಾಂಶ ವಿದೆ. ಮಾನ್ಯ ರಾಚಯ್ಯನವರು ಹೇಳತಕ್ಕದ್ದರಲ್ಲಿ ರೂಲ್ಸ್ ಪ್ರಕಾರವಾಗಿ ಹೀಗೆ ಮಾಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಅದಕ್ಕೆ ಸಂಬಂಧಪಟ್ಟ ಹಾಗೆ ಒಂದು ಕಮಿಟಿ ಇದೆ. ಅದರ ಪೆಡಿಗ್ರಿ ಮೇಲೆ ವ್ಯಾಪಾರ ಆಗಬೇಕು. ಒಂದು 5 ಸಾವಿರಕ್ಕೆ ಹೋದರೆ ಇನ್ನೊಂದು ಒಂದು ಲಕ್ಷಕ್ಕೆ ಹೋಗಬಹುದು. ಇನ್ನೊಂದು 500ಕ್ಕೆ ಹೋಗಬಹುದು. ಅದು ಪೆಡಿಗ್ರಿ ಮೇಲೆ ಹೋಗತಕ್ಕ ವಿಷಯ. ಅದು ಸಂಬಂಧಪಟ್ಟ ಕಮಿಟಿ ನೋಟೀಸ್‌ಗೆ ಹೋಗದೆ ಆಗಿದೆ.

ಶ್ರೀ ಎನ್. ರಾಚಯ್ಯ.—ಅಂಥ ಅನುಮಾನವಿದ್ದ ಪಕ್ಷದಲ್ಲಿ......

Sri C. J. MUCKANNAPPA.—We expect the very naked truth from you.

Sri N. RACHAIAH.—So far as Government is concerned it has not come to its notice that there is any suspicious transaction. Now that the Hon'ble Members have brought to my notice, I will hold an enquiry and find out the truth.

Sri J. B. MALLARADHYA.—Will the Hon'ble Minister or the officer concerned take the responsibility for the loss?

Sri N. RACHIAH.—I am sure the Hon'ble Member Sri Mallaradhya will have trust in Government. The Government will see that nothing is done to impair the Government's revenue.

Sri G. E. HOOVER.—Will the Hon'ble Minister see that there is no more private sale?

Sri N. RACHIAH.—You leave this matter to the Government; they have the discretion; if you do not want such a procedure to be adopted we will take action.

Sri G. E. HOOVER.—I request the Hon'ble Minister not to make any private sales.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಯಾರಿಗೆ ಕೊಟ್ಟಿದ್ದೀರಿ?

ಶ್ರೀ ಎನ್. ರಾಚಯ್ಯ.—ಎನ್‌ಕ್ವೈರಿಮಾಡಿ ಪತ್ತೆ ಮಾಡಬೇಕು.

Sri J. B. MALLARADHYA.—The allegation is that the I.G.P.s wife has taken it.

Sri N. RACHIAH.—So far the Government are not aware whether the I.G.P. or any of his relatives have taken it. I will enquire and supply the information to you.

Sri C. J. MUCKANNAPPA.—Did you ascertain the view of Sri Mudalagiri Gowda who had been to Bombay, as to what price it would have fetched?

Sri N. RACHIAH.—When we hold the enquiry the matter will be referred to a Committee also; let him say there; you can give information. We will take strong action or serious action against anybody who is responsible for such loss to Government. But I do not think that there has been any loss.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎನ್‌ಕ್ವೈರಿ ಮಾಡುತ್ತೇನೆ ಎಂದು ಹೇಳುತ್ತೀರಿ. ಎನ್‌ಕ್ವೈರಿ ಮಾಡದೆ how did you come to the conclusion that there was no loss?

Sri N. RACHIAH.—As at present, I am quite satisfied. But if the Members were to demand that I must enquire, as per my promise, I will do it.

Sri J. B. MALLARADHYA.—I offer Rs. 3,000 in excess of what you have sold. Are you willing to accept it?

Sri N. RACHIAH.—Now you could say. Why did you not offer the same then?

Sri J. B. MALLARADHYA.—I may be presumed to know something about horses.

ಶ್ರೀ ಎನ್. ರಾಚಯ್ಯ.—ಇನ್ನು ಮೇಲೆ ಕಮಿಟಿ ಮಾಡುವಾಗ ತಮ್ಮನ್ನೂ ಕೂಡ ಮನಸ್ಸಿನಲ್ಲಿ ಇಟ್ಟು ಕೊಳ್ಳುತ್ತೇವೆ. ಆಮೇಲೆ ಪ್ರೊಹಿಬಿಷನ್ ವಿಚಾರದಲ್ಲಿ ಸೋಷಿಯಲ್ ರಿಫಾರಂ ಆಗತಕ್ಕದ್ದು ಅವಶ್ಯಕ ಇದೆ. ಇದಕ್ಕಾಗಿ ಈ ಒಂದು ಕಾನೂನನ್ನು ನಾವು ಸರ್ಕಾರದ ಒಂದು ಮಟ್ಟದಲ್ಲಿ ಯಶಸ್ವಿಯಾಗಿ ಜಾರಿಗೆ ಕೊಟ್ಟಿದ್ದೇವೆ. ಯಾವ ಮಾನ್ಯ ಸದಸ್ಯರೂ ಕೂಡ, ಯಾವ ಪಕ್ಷಕ್ಕೇ ಸೇರಿರಲಿ, ಇದು ಬಡವರಿಗೆ ಅನುಕೂಲವಾಗಿಲ್ಲ ಎಂದು ಹೇಳುವ ಹಾಗಿಲ್ಲ. ಗಾಂಧೀಜಿ ಯವರ ಆಶೀರ್ವಾದದಿಂದ ಪಾನನಿರೋಧವನ್ನು ಜಾರಿಗೆ ತಂದು ಇಡೀ ಭಾರತದಲ್ಲೆಲ್ಲಾ ಇರತಕ್ಕ

ಬಡವರಿಗೆ ತೊಂದರೆಯಲ್ಲಿರತಕ್ಕವರಿಗೆ ಅನುಕೂಲ ಮಾಡುವುದು ಕಾಂಗ್ರೆಸ್ ಸರ್ಕಾರದ ಒಂದು ಧ್ಯೇಯ. ಈಗ ನಾಲ್ಕೈದು ಪ್ರದೇಶಗಳಲ್ಲಿ ನಾಲ್ಕೈದು ತರಹ ಕಾನೂನು ಇರತಕ್ಕ ಕಾರಣ ಏನಾದರೂ ಅಲ್ಪ ಸ್ವಲ್ಪ ದೋಷಗಳು ಇರಬಹುದು. ತಮಗೆ ಒಂದು ಭರವಸೆ ಕೊಡುತ್ತೇನೆ. ಯಾವ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿವೆಯೋ ಅವುಗಳಿಗೆಲ್ಲಾ ಸೂಕ್ತವಾದ ಮತ್ತು ಸರಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಪೋಲೀಸ್ ಇಲಾಖೆ ಈ ಕೆಲಸವನ್ನು ವಹಿಸಿಕೊಳ್ಳಬೇಕೇ ಬೇಡವೇ ಎನ್ನುವುದು ವಿಚಾರವಲ್ಲ. ಈ ಸಭೆಯಲ್ಲಿಯೂ ಮತ್ತು ಮೇಲ್ಮನೆಯಲ್ಲಿಯೂ ಕೂಡ ಕೆಲವು ಟೀಕೆಗಳು ಬಂದಕಾರಣ ಅದನ್ನು ತೀವ್ರವಾಗಿ ಯೋಚನೆ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಯಾವ ವಿಧವಾದ ಆಕ್ಷೇಪಣೆಯೂ ಬಾರದ ರೀತಿಯಲ್ಲಿ ಇನ್ನೂ ಯಶಸ್ವಿಗೊಳಿಸಬೇಕು ಎಂಬುದನ್ನು ತೀವ್ರತೆಯಿಂದ ಯೋಚನೆ ಮಾಡುತ್ತಿದ್ದೇವೆ. ಈ ವಿಚಾರದಲ್ಲಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದಿದ್ದೇವೆ. ಈ ವಿಚಾರದಲ್ಲಿ ಎಷ್ಟು ಪ್ರಸ್ತಾಪಮಾಡಿದರೂ ಅಷ್ಟೆ; ಉತ್ತರ ಕೊಟ್ಟರೂ ಹೆಚ್ಚಿಗೆ ಕಾಲವನ್ನು ತೆಗೆದುಕೊಂಡಂತಾಗುತ್ತದೆ. ಕಳೆದ ಅಧಿವೇಶನದಲ್ಲಿ ಇಡಿಯ ಸಂಸ್ಥಾನಕ್ಕೆ ಸಮಗ್ರವಾಗಿ ಮಾಡುವ ಮಸೂದೆಯನ್ನು ತಮ್ಮ ಮುಂದೆ ಇಟ್ಟಿದ್ದೆವು. ಅದು ಜಾರಿಗೆ ಬಂದ ತಕ್ಷಣ ಇನ್ನೂ ಹೆಚ್ಚಿನ ರೀತಿಯಲ್ಲಿ ಶಿಕ್ಷೆಗೆ ಒಳಪಡಿಸಿ ಈ ಕಾನೂನನ್ನು ಹೆಚ್ಚಿನ ರೀತಿಯಲ್ಲಿ ಜಾರಿಗೆ ಕೊಡುತ್ತೇವೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಮ್ಮ ಡಿಸ್ಟ್ರಿಕ್ಟಿನಲ್ಲಿ ಪ್ರೊಹಿಬಿಷನ್ ತರುತ್ತೇವೆ ಎಂದು ಹೇಳಿದ್ದಿರಿ. ತಮ್ಮ ಅಭಿಪ್ರಾಯವೇನು ?

ಶ್ರೀ ಎನ್. ರಾಚಯ್ಯ.—ಈ ವಿಚಾರದಲ್ಲಿ ಸರ್ಕಾರದವರು ಇತರ ಕೆಲವು ಪ್ರದೇಶಗಳಿಗೆ ವಿಸ್ತರಣೆ ಮಾಡುತ್ತೇವೆ ಎಂದು ಗವರ್ನರ್ ಅವರ ಅಡ್ರೆಸ್ಸಿನಲ್ಲಿ ಇದೆ. ಆ ವಿಷಯದಲ್ಲಿ ಸರ್ಕಾರದವರು ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ಮುಂದಿನ ತಿಂಗಳು ಈ ಸೆಷನ್ ಮುಗಿಯುವುದರೊಳಗೆ ಈ ತೀರ್ಮಾನವನ್ನು ತೆಗೆದುಕೊಂಡು ಈ ಸಭೆಯ ಮುಂದೆ ತರುತ್ತೇವೆ ಎಂದು ಹೇಳುತ್ತೇನೆ. ಎಷ್ಟು ಪ್ರದೇಶಗಳಲ್ಲಿ ಇಂಟ್ರಡ್ಯೂಸ್ ಮಾಡಬೇಕು ಎನ್ನುವ ವಿಚಾರದಲ್ಲಿ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಪ್ರೊಹಿಬಿಷನ್ ಸ್ಟ್ರಿಕ್ಟ್ ಆಗಿ ಎನ್‌ಫೋರ್ಸ್‌ಮೆಂಟ್ ಮಾಡುವುದಕ್ಕೆ ಆಗುತ್ತಾ ಇಲ್ಲ. ಅದು ಅಕ್ಸೆಪ್ಟೆಡ್ ಪಾಲಿಸಿ. ಅಮೆರಿಕಾದ ಕಾನ್‌ಸ್ಟಿಟ್ಯೂಷನಲ್ಲಿ ಅದನ್ನು ಬರೆದ ಮೇಲೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ಬೇರೆ ಪೋಲೀಸ್ ಫೋರ್ಸ್ ಇಟ್ಟಿದ್ದರು. ನೀಗ್ರೋ ಮತ್ತು ವೈಟ್ ಪೀಪಲ್ ಅಲ್ಲಿರತಕ್ಕದ್ದು. ಅದೇ ರೀತಿ ಸಪರೇಟ್ ಪೋಲೀಸ್ ಫೋರ್ಸ್ ಇಟ್ಟು ಸರ್ಕಾರದವರು ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆಂದು ಏತಕ್ಕೆ ಕೆಟಗಾರಿಕಲ್ ಆಗಿ ರಿಪ್ಲೈ ಮಾಡಬಾರದು ?

Sri M. RAMAPPA.—Regarding prohibition I seek one clarification. Are the Government thinking of reorganising the police force so far as prohibition is concerned ?

ಶ್ರೀ ಎನ್. ರಾಚಯ್ಯ.—ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಕೊಟ್ಟಿದ್ದಾರೋ ಅವೆಲ್ಲವನ್ನೂ ಕೂಡ ಪರಿಶೀಲನೆಮಾಡಿ ಯಾವ ರೀತಿಯಲ್ಲಿ ಯಾವ ಒಂದು ಮೆಷನರಿ ಇರಬೇಕು, ನಾನ್ ಅಫಿಷಿಯಲ್ಸ್ ಜೊತೆಗೆ ಕೊಡಬೇಕೇ ಅಥವಾ ಬೇಡವೇ ಎಂಬುದನ್ನು ದೀರ್ಘವಾಗಿ ಆಲೋಚನೆ ಮಾಡಿ ಮತ್ತು ಇತರ ಸಂಸ್ಥಾನಗಳಲ್ಲಿ ಇರತಕ್ಕ ಏರ್ಪಾಡುಗಳನ್ನು ತಿಳಿದುಕೊಂಡು ಸರಿಯಾದ ವ್ಯವಸ್ಥೆಯನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ರಾಮಪ್ಪನವರು ಮಸೂದೆಯನ್ನು ನೋಡಿದರೆ, ಕಮಿಟಿಗಳನ್ನು ಮಾಡತಕ್ಕದ್ದು ಮತ್ತು ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಎಲ್ಲಾ ಆ ಮಸೂದೆಯಲ್ಲಿದೆ.

Sri M. RAMAPPA.—I want to know whether the Government are going to appoint a non-official committee as suggested in the Sriman Narayan Report ?

ಶ್ರೀ ಎನ್. ರಾಚಯ್ಯ.—ಎಲ್ಲವನ್ನೂ ಎಗ್ಸಾಮಿನ್ ಮಾಡುತ್ತೇವೆ. ಆ ವಿಚಾರದಲ್ಲಿ ಪೂರ್ಣ ಆಸಕ್ತಿ ಇದೆ. ಅದನ್ನು ಸರಿಪಡಿಸುತ್ತೇವೆ ಎಂದು ಹೇಳುತ್ತೇನೆ.

ಸಮಾಜ ಕಲ್ಯಾಣದ ವಿಚಾರದಲ್ಲಿ ಮಾನ್ಯ ಸದಸ್ಯರು ಯಾರೂ ಕೂಡ ಅಷ್ಟಾಗಿ ಟೀಕೆ ಮಾಡಿಲ್ಲ. ಅದಕ್ಕೆ ನಾನು ಬಹಳವಾಗಿ ವಂದಿಸುತ್ತೇನೆ. ಅದರಲ್ಲೂ ಕೆಲವು ಸದಸ್ಯರು ಒಳ್ಳೆಯ ರೀತಿಯಲ್ಲಿ ಕೆಲಸ ಆಗುತ್ತಿದೆ ಎಂದು ಹೇಳಿದ್ದಾರೆ. ಒಬ್ಬರು ಸದಸ್ಯರು ಮಾತ್ರ ಬಜೆಟ್ ಭಾಷಣ ಮಾಡುವುದಕ್ಕೆ ಬದಲಾಗಿ ಏನೇನೋ ಹೇಳಿದರು. ಬಜೆಟ್ಟಿನಲ್ಲಿ ಒದಗಿಸಿರುವ ಹಣ ಸಾಕಾಗುತ್ತದೆಯೇ ಇಲ್ಲವೇ ಅಥವಾ ನೌಕರಿ ಸಿಕ್ಕಿದೆಯೇ ಇಲ್ಲವೇ, ರಾಜ್ಯಾಂಗಯುತವಾದ ಕಾನೂನು ಪ್ರಕಾರ ಜಮೀನು ಸಿಕ್ಕಿದೆಯೇ ಇಲ್ಲವೇ ಅಥವಾ ಇತರ ಬೇರೆ ಅನುಕೂಲ ಇದೆಯೇ ಇಲ್ಲವೇ ಎಂಬುದು ಯಾವುದನ್ನೂ ಕುರಿತು ಮಾತನಾಡಲಿಲ್ಲ. ಯಾರೋ ಏನೋ ಹೇಳಿರಬೇಕು. ಮಕ್ಕಿಕಾಮಕ್ಕಿ ಅದನ್ನೇ ಹೇಳಿರುತ್ತಾರೆ. ಹಿಂದೆ ಶ್ರೀಮಾನ್ ಚನ್ನಿಗರಾಮಯ್ಯನವರು ಮಂತ್ರಿಗಳಾಗಿದ್ದಾಗ ಎನ್. ರಾಚಯ್ಯನವರು ಭಾಷಣ ಮಾಡಿದ್ದರು ಎಂದು ಹೇಳಿ ಈಗ ನನ್ನ ಮುಂದೆ ಸಮಿಲನಪುಸ್ತಕ ನೋಡಿ ಕೆಂಬೂತಿ ಪುಸ್ತಕ ತೆರೆದುಕೊಂಡಂತೆ ರಾಚಯ್ಯನವರು ಭಾಷಣ ಮಾಡಿದರು. ಅದಕ್ಕೆ ನಾನು personal ಆಗಿ ಹೇಳಬೇಕೆಂದರೆ His remarks are not worth even to take cognisance of ಎಂದು ಹೇಳುತ್ತೇನೆ. ಆದರೂ ಕೂಡ ನನ್ನ ಒಂದು ಆತ್ಮಗೌರವ ದೃಷ್ಟಿಯಿಂದ ಮಂತ್ರಿ ಕೆಲಸ ಮುಖ್ಯವಲ್ಲ, ಆತ್ಮಗೌರವ ಮುಖ್ಯ—ವ್ಯಕ್ತಿತ್ವದ ದೃಷ್ಟಿಯಿಂದ ಅವರು ಏನು ಹೇಳಿದ್ದಾರೆ ಅದು ಸತ್ಯವೇ, ಅಸತ್ಯವೇ ಎಂಬುದನ್ನು ಸಾರ್ವಜನಿಕರ, ದೇಶದ ಇಡಿಯ ಸಂಸ್ಥಾನದ ಜನತೆಯ ಅದರಲ್ಲೂ ಹರಿಜನ ಜನಾಂಗದವರ ಮತ್ತು ಮಾನ್ಯ ಸಭೆಯವರ ಗಮನಕ್ಕೆ ತರುತ್ತಾ, ಅವರು ಹೇಳಿದ್ದು ತಪ್ಪು ಎಂಬುದನ್ನು ಅವರ ಗಮನಕ್ಕೆ ತರಲು ಅವರು ಏನೇನು ಹೇಳಿದ್ದಾರೆ ಅದಕ್ಕೆ ಮಾತ್ರ ಈಗ ನಾನು ಉತ್ತರ ಕೊಡುತ್ತೇನೆ. ಅವರು "Proposals in the Social Welfare Department are not being approved" ಎಂದು ಹೇಳಿದ್ದಾರೆ. ಸ್ವಾಮಿ, ಹರಿಜನರ ಪ್ರಗತಿಯ ವಿಚಾರವಾಗಿ ಮಹಾತ್ಮ ಗಾಂಧೀಜಿ ಅವರು ಉಪಯೋಗಿಸಿದ ಸವರ್ಣೀಗಳು ಎಂಬ ಒಂದು ಪದವನ್ನು ಅವರು ಈ ಕಾಲದಲ್ಲಿ ಉಪಯೋಗಿಸಬಾರದಾಗಿತ್ತು. ಸವರ್ಣೀಯರು, ಅವರ್ಣೀಯರು ಎಂದು ಯಾವಾಗ ಇತ್ತು ಎಂದರೆ ನಮ್ಮ ದೇಶದ ರಾಜ್ಯಾಂಗ ಜಾರಿಗೆ

(ಶ್ರೀ ಎನ್. ರಾಚಯ್ಯ)

ಬರುವವರೆಗೂ ಆ ರೀತಿ ಕರೆಯುತ್ತಿದ್ದರು.
ರಾಜ್ಯಾಂಗ ಜಾರಿಗೆ ಬಂದಮೇಲೆ ಇಡಿಯ ದೇಶದ
40 ಕೋಟಿ ಜನ, ಮೈಸೂರು ಸಂಸ್ಥಾನದ 2 ಕೋಟಿ
ಜನ ಎಲ್ಲರೂ ಕೂಡ ಒಂದೇ ಎಂದು ರಾಜ್ಯಾಂಗದಲ್ಲಿ
ವಿಧಾಯಕವಾಗಿದೆ ಎಂಬುದನ್ನು ನಾವು ಮನಸ್ಸಿನಲ್ಲಿ
ಟ್ಟುಕೊಳ್ಳಬೇಕು. 1952ರಿಂದಲೂ ಕೂಡ ನಾವು
ಜವಾಬ್ದಾರಿಯುತರಾದಂಥ ಸದಸ್ಯರಾಗಿಯೂ
ಮತ್ತು ಮಂತ್ರಿಸ್ಥಾನದಲ್ಲೂ ಈ ಸಭೆಯಲ್ಲಿ ಇದ್ದು
ಕೊಂಡು ಬಂದಿದ್ದೇನೆ. 1950ನೆಯ ಇಸವಿಯಲ್ಲಿ
ರಾಜ್ಯಾಂಗ ಜಾರಿಗೆ ಬಂತು, ಹತ್ತು ವರ್ಷಗಳಾ
ಗಿವೆ. ಸವರ್ಣ, ಅವರ್ಣ ಎಂಬ ಪದಗಳನ್ನು ಉಪ
ಯೋಗಿಸುವುದಕ್ಕೆ ನಮಗೆ ಹಕ್ಕಿಲ್ಲ. ಅದನ್ನು ಉಪ
ಯೋಗಿಸುವುದು ಸೂಕ್ತವಲ್ಲ ಎಂಬುದನ್ನು
ತಿಳಿದುಕೊಳ್ಳದೇ ಇರತಕ್ಕ ಸದಸ್ಯರು ಶ್ರೀ
ಬಿ. ರಾಮಯ್ಯನವರಾಗಿದ್ದಾರಲ್ಲಾ ಎಂದು ನನಗೆ
ದುಃಖವಾಗುತ್ತದೆ. ಅವರು ನನ್ನ ಸ್ನೇಹಿತರು,
ನಮ್ಮ ಜಿಲ್ಲೆಯವರು ಮತ್ತು ನನಗೆ ಬೇಕಾದವರು.
ಆದರೆ ವಿಷಯವನ್ನು ತಿಳಿದುಕೊಂಡು ಯಾವ ಪದ
ಜವಾಬ್ದಾರಿಯಿಂದ ಉಪಯೋಗಿಸಬೇಕು, ಯಾವ
ಪದವನ್ನು ಉಪಯೋಗಿಸಬಾರದು, ಯಾವ ಪದವನ್ನು
ಉಪಯೋಗಿಸಿದರೆ ದೇಶದಲ್ಲಿ ಏನು ಅನಾಹುತವಾಗ
ಬಹುದು ಎಂಬುದನ್ನು ಯೋಚನೆಮಾಡದೇ ಸವರ್ಣಿ
ಗಳನ್ನು ನಾನು ದ್ವೇಷಿಸುತ್ತೇನೆ ಎಂದು ಹೇಳಿ,
ಸವರ್ಣಿಗಳ ಮನಸ್ಸನ್ನು ಇವೊತ್ತಿನ ದಿವಸ ಕೆಡಿಸುವು
ದಕ್ಕೆ ಹೋಗಿದ್ದಾರೆ. ಅದನ್ನು ಮೊದಲನೆಯದಾಗಿ
ಪ್ರಸ್ತಾಪಮಾಡುತ್ತೇನೆ. ಆ ಸವರ್ಣೀಯರ ಒಂದು
ಉದಾರತ್ವದಿಂದ ಅವರು ಏನೇ ತಪ್ಪುಮಾಡಿದರೂ
ಅದನ್ನು ಅವರೇ ದೇಶದ ದೃಷ್ಟಿಯಿಂದ ತಿಳಿದುಕೊಂಡು
ಈ ಒಂದು ಜನಾಂಗಕ್ಕೆ ಮೀಸಲು ಸ್ಥಾನಗಳನ್ನು
ಪಾರ್ಲಿಮೆಂಟು ಮತ್ತು ವಿಧಾನ ಸಭೆಯಲ್ಲಿ ಕಳೆದ
ಹತ್ತು ವರ್ಷಗಳ ಕಾಲ ಕೊಟ್ಟರು. ಮಾದರೀ
ರಾಜ್ಯಾಂಗದ ಪ್ರಕಾರ ಇವೊತ್ತಿನ ದಿವಸ ರಾಜಕೀಯ,
ಆರ್ಥಿಕ, ವಿದ್ಯಾಭ್ಯಾಸ ಮತ್ತು ನೌಕರಿಗಳಲ್ಲಿ ಎಲ್ಲ
ರಿಗೂ ಒಂದೇ ಸಮಾನವಾದ ಹಕ್ಕು ಬಾಧ್ಯತೆಗಳಿ
ದ್ದರೂ ಕೂಡ ಸವರ್ಣೀಯ ಬಾಂಧವರು ತಮ್ಮ
ಒಂದು ಉದಾರ ಭಾವನೆಯಿಂದ, ಸಂಸ್ಕೃತಿಯ ದೃಷ್ಟಿ
ಯಿಂದ, ಪ್ರಜಾಪ್ರಭುತ್ವದ ದೃಷ್ಟಿಯಿಂದ, ದೇಶದ ಸಂಘ
ಟನೆಯ ದೃಷ್ಟಿಯಿಂದ ವಿಶಾಲ ಮನೋ ಭಾವನೆಯ
ನ್ನಿಟ್ಟುಕೊಂಡು ಹರಿಜನರಿಗೆ ಮೀಸಲು ಸ್ಥಾನಗಳನ್ನು
ಕಳೆದ ಹತ್ತು ವರ್ಷಗಳ ಕಾಲ ಕೊಟ್ಟದ್ದಲ್ಲದೆ ಇನ್ನು
ಹತ್ತು ವರ್ಷಗಳ ಕಾಲ ಮುಂದುವರಿಸಿದ್ದಾರೆ.
ಇವೊತ್ತಿನ ದಿವಸ ಡೆಪ್ಯೂಟಿ ಸ್ಪೀಕರ್ ಆದ ತಾವೂ
ಕೂಡ ರಿಸರ್ವ್ ಸೀಟಿನಲ್ಲಿ ಆರಿಸಿ ಬಂದಿದ್ದೀರಿ, ನಾನು
ರಿಸರ್ವ್ ಸೀಟ್‌ನಲ್ಲಿ ಬಂದಿದ್ದೇನೆ, ಶ್ರೀ ಬಿ. ರಾಚಯ್ಯ
ನವರೂ ಕೂಡ ರಿಸರ್ವ್ ಸೀಟಿನಲ್ಲಿ ಆರಿಸಿ ಬಂದಿದ್ದಾರೆ.
ನಾವು ಮೂವರು ಮತ್ತು ಇತರ ಸದಸ್ಯರು ರಿಸರ್ವ್
ಸೀಟ್ ಇಲ್ಲದೆ ಇದ್ದಿದ್ದರೆ, ಸವರ್ಣೀಯರ ಉದಾರತ್ವ
ಮನೋಭಾವ ಇಲ್ಲದೆ ಇದ್ದಿದ್ದ ವರ್ಷದಲ್ಲಿ ನಾವು ಸದ
ಸ್ಯರಾಗಲಿ, ಮಂತ್ರಿಗಳಾಗಲೀ ಆಗುತ್ತ ಇರಲಿಲ್ಲ
ಎಂದು ನಾನು ತಿಳಿದು ಕೊಂಡಿದ್ದೇನೆ. ಇಂಥ ಒಂದು
ದೊಡ್ಡ ವಿಶಾಲವಾದ, ಮಹತ್ತರವಾದ ಮನೋ
ಭಾವ ಇರತಕ್ಕ ಈ ನಮ್ಮ ದೇಶದಲ್ಲಿ ಸ್ವರಾಜ್ಯ ಬರುವು
ದಕ್ಕೆ ಮೊದಲು ಅಥವಾ ರಾಜ್ಯಾಂಗ ಬರುವುದಕ್ಕೆ
ಮೊದಲು 100ಕ್ಕೆ 70-80 ಭಾಗದ ಜನರಿಗೆ ಹರಿಜನರು
ಮುಂದೆ ಬರಬೇಕು ಎಂಬ ಅಭಿಪ್ರಾಯವಿತ್ತೋ
ಏನೋ, ಅದನ್ನು ಪರಿಪೂರ್ಣವಾಗಿ ನಾನು ಹೇಳುವು
ದಿಲ್ಲ. ಇವೊತ್ತಿನ ದಿವಸ ಸನ್ನಿವೇಶ ಏನಿದೆ? 100ಕ್ಕೆ
90 ಭಾಗ ಜನ ಇಡಿಯ ಭಾರತ ದೇಶದಲ್ಲಿ ಹರಿಜನರು
ಮುಂದೆ ಬರಬೇಕು, ಅವರಿಗೆ ಎಲ್ಲ ಸ್ಥಾನಗಳೂ ಸಲ್ಲ
ಬೇಕು, ಅವರು ನಮ್ಮ ದೇಶದಲ್ಲಿ ನೊಂದಿದ್ದಾರೆ ಎಂಬ
ಮನೋಭಾವ ಇದೆ. ಈ ಸನ್ನಿವೇಶದಲ್ಲಿ ಸವರ್ಣೀ
ಯರ ಮನಸ್ಸನ್ನು ನೋಯಿಸಬಾರದು. ಸಾರ್ವ
ಜನಿಕವಾದ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಯಾವ
ಸಾರ್ವಜನಿಕರಿಗೇ ಆದರೂ ಕೂಡ ಹಕ್ಕು ಇದೆ. ಆದರೆ
ಶ್ರೀಮಾನ್ ರಾಚಯ್ಯನವರು ಈ ರೀತಿ ಮಾತನಾಡು
ವುದು ಸೂಕ್ತವೇ? ಅವರು ಹರಿಜನರ ಹಿತವನ್ನು ಕಾಪಾ
ಡಲು ಹರಿಜನರ ಪ್ರತಿನಿಧಿಗಳಾಗಿ ಬಂದಿದ್ದಾರೆ. ಈ
ಸಭೆಯ ಸದಸ್ಯರ ಸ್ಥಾನದಲ್ಲಿದ್ದು, ಸದಸ್ಯರಾಗಿ ಇಷ್ಟು
ಬೇಜವಾಬ್ದಾರಿಯಿಂದ, ಇಂತಹ ಮನಸ್ಸಿ
ನಿಂದ ಮಾತನಾಡುವುದು ಸರಿಯೇ ಎಂದು ಕೇಳು
ತ್ತೇನೆ, ನನಗೆ ದಕ್ಷತೆ ಇಲ್ಲ. ನಾನು ನ್ಯಾಯವಾಗಿ
ವರ್ತಿಸುತ್ತಿಲ್ಲ, ಲೋಪ ದೋಷ ಇವೆ ಎಂದು ಹೇಳಲಿ.
ತಮಗೆ ಗೊತ್ತಿದೆ. ಯಾವ ಜನಾಂಗದಲ್ಲಿ ಉತ್ತಮ
ಜನರು ಎಂದು ಅವರು ಏನು ಹೇಳುತ್ತಾರೆ ಅವರ
ಮನೆಯಲ್ಲಿ ಒಂದು ದಿವಸ ಸೇವೆ ಮಾಡುತ್ತೇನೆ. ಹರಿ
ಜನರು ಯಾರೂ ಅಡ್ಡಿ ಮಾಡುವುದಿಲ್ಲ. ಒಂದು
ಮಾತನ್ನು ಹೇಳುತ್ತೇನೆ. ನಾನು ಮಂತ್ರಿ ಆಗಿರಲಿ,
ಇಲ್ಲದೇಇರಲಿ. ಈ ದೇಶದ ಪ್ರಜೆಯಾಗಿ, ಹರಿಜನನಾಗಲೀ.
ಇತರ ಯಾವ ವರ್ಗದ ಬಡವರಾಗಲೀ
ಬಲಹೀನರಾಗಲೀ ಸಾಮಾಜಿಕವಾಗಿ, ಆರ್ಥಿಕವಾಗಿ,
ವಿದ್ಯಾಭ್ಯಾಸ, ರಾಜಕೀಯ ಅಥವಾ ಇನ್ನಾವುದೇ ತರಹ
ನೈತಿಕವಾದ ಹಕ್ಕು ಬಾಧ್ಯತೆ ಲಭ್ಯವಾಗಿರದೇ
ಹೋಗಿದ್ದ ಪಕ್ಷದಲ್ಲಿ ಅದನ್ನು ಈ ಸರ್ಕಾರ ಸಹಿಸುವು
ದಿಲ್ಲ. ಇವೊತ್ತಿನ ದಿವಸ ಆ ಒಂದು ಕೆಲಸವನ್ನು ನಿರ್ವ
ಹಣೆ ಮಾಡುತ್ತಾ ಇದ್ದೇವೆಯೇ ಹೊರತು ಯಾವ
ರೀತಿಯಲ್ಲೂ, ಯಾರ ಮನಸ್ಸನ್ನು ನೋಯಿಸಿಲ್ಲ.
ಶ್ರೀಮಾನ್ ರಾಚಯ್ಯನವರು ದರಖಾಸ್ತು ಅರ್ಜಿ ಹಾಕಿ
ಕೊಂಡಿದ್ದರು. ಅವರವರಲ್ಲೇ ವಾಜ್ಯವುಂಟಾಯಿತು.
ಅನೇಕರ ದರಖಾಸ್ತು ಅರ್ಜಿಗಳಿದ್ದುವು. ಮಹಾನು
ಭಾವರಾದ ರಾಚಯ್ಯನವರೇ ''ರಕ್ಷಣೆ ಕೊಡಿರಿ''
ಎಂದು ಅರ್ಜಿ ಬರೆದಿದ್ದಾರೆ. ಕಾನೂನನ್ನು ಮೀರಿದರೆ,
ಮಂತ್ರಿ ಆಗಿರಲಿ ಯಾರೇ ಆಗಿರಲಿ, ಕೋರ್ಟು ಇದೆ.
ಹೈ ಕೋರ್ಟು ಇದೆ, ಸುಪ್ರೀಂಕೋರ್ಟು ಇದೆ,
ಡಿಫೆಮೇಟರಿ ಕೇಸು ಹಾಕಬಹುದು. ಅದನ್ನು
ಅರಿತು ಕೊಳ್ಳದೇ ಇಷ್ಟು ಬೇಜವಾಬ್ದಾರಿಯಿಂದ
ಮಂತ್ರಿಗಳ ಮೇಲೆ ಒಂದು ವೈಯಕ್ತಿಕವಾದ ಆಕ್ಷೇಪಣೆ
ಯನ್ನು ಮಾಡತಕ್ಕ ಕಾಲದಲ್ಲಿ ಇಡಿಯ ಹರಿಜನ ಜನತೆಗೆ
ಮೋಸ, ದ್ರೋಹ ಮಾಡಿದ್ದನ್ನು ನೆನೆಸಿಕೊಂಡರೆ
ಶ್ರೀರಂಗಪಟ್ಟಣದಲ್ಲಿ ಟಿಪ್ಪೂಸುಲ್ತಾನನು ದೌಲತ್ತು
ನಡೆಸಿದಂತೆ ನಡೆಸಿದ್ದಾರೆ. ಇವೊತ್ತಿಗೂ ಅಲ್ಲಿಗೆ
ಹೋದರೆ ಅಲ್ಲಿ ಒಂದು ಕಲ್ಲು ಇದೆ. ಅದಕ್ಕೆ ಹೋಗಿ
ಮುಸಲ್ಮಾನರು ಉಗಿಯುತ್ತಾರೆ. ಏಕೆಂದರೆ ಅವ
ನಿಂದ ರಾಜ್ಯ ಹೋಯಿತು ಎಂದು. ಅದು ಈ ಸಂದ
ರ್ಭದಲ್ಲಿ ಜ್ಞಾಪಕಕ್ಕೆ ಬರುತ್ತಿದೆ.

[MR. SPEAKER in the Chair.]

ಇನ್ನು ಮುಂದೆ ಜಮೀನಿನ ವಿಷಯ. ಚಾಮ
ರಾಜನಗರ ತಾಲ್ಲೂಕಿನಲ್ಲಿ ಅವರು ಹೇಳಿದರು--
ಮೂಡಹಳ್ಳಿ ಎನ್ನುವುದು ಒಂದು ಹಳ್ಳಿ. ನಾನು
ಮಂತ್ರಿ ಆಗುವುದಕ್ಕೆ ಮುಂಚೆ ಅಲ್ಲಿ ಕೆಲವರು ಗುಡಿ
ಸಲು ಹಾಕಿಕೊಂಡಿದ್ದರು ಎಂದು ಗೊತ್ತಾಯಿತು.
ಒಂದು ದಿವಸ ರಾಚಯ್ಯನವರು ಎರಡು ಮೂರು
ಜನರನ್ನು ಜೊತೆಯಲ್ಲಿ ಕರೆದು ಕೊಂಡು ಬಂದರು

ನಾನು ಅಲ್ಲಿಗೆ ಹೋಗಿದ್ದೆ. ಆ ಕಾಲೊನಿಗೆ ಹೋದೆವು. ಅಲ್ಲಿ ಫಾರೆಸ್ಟ್ ಇಲಾಖೆಯವರು ಬೇಲಿ ಹಾಕಿದ್ದಾರೆ ಎಂದು ಹೇಳಿದರು. ಅಲ್ಲಿ ಮರ ಇಲ್ಲದೇ ಇದ್ದುದರಿಂದ ಸಾಗು ಮಾಡುವುದಕ್ಕೆ ಜಮೀನು ಲಾಯಕ್ಕಾಗಿದೆ ಎಂದು ಅದು ನನ್ನ ಇಲಾಖೆಗೆ ಸೇರದೇ ಇದ್ದ ಕಾರಣ ಸ್ಥಳ ಪರೀಕ್ಷೆ ಮಾಡಿದೆ. ಎಂದು ಹೇಳಿ-ಶ್ರೀಮಾನ್ ಪಾಟೀಲ್ ಅವರಿಗೆ "ನೀವು ಇದನ್ನು ಸೂಕ್ತ ಕಂಡಾಗ spot inspection ಮಾಡಿ ರಿಲೀಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ" ಎಂದು ಮಿನಿಟ್ ಹಾಕಿ ಕಳುಹಿಸಿದೆ. ಆ ದಿವಸ ಒಂದು ಚಪ್ಪರ ಹಾಕಿಸಿ ರಾಚಯ್ಯನವರು ನನ್ನನ್ನು ಕರೆದುಕೊಂಡು ಹೋಗಿ ದೊಡ್ಡ ಭಾಷಣ ಮಾಡಿದರು. ಅವತ್ತು ನನ್ನ ಮುಂದೆ ಭಾಷಣ ಮಾಡಿದ್ದನ್ನು ನೋಡಿದರೆ ಅವರು ಮಂತ್ರಿ ಆಗದೇ ಇಷ್ಟು ಭಾಷಣ ಮಾಡುತ್ತಾರೆಯಲ್ಲಾ ಮಂತ್ರಿ ಆದರೆ ಏನು ಗತಿ ಎನಿಸಿತು. ಅವರೆಲ್ಲರೂ ಜಮೀನು ಕೊಡಿಸಿ ಎಂದು ಕೇಳಿಕೊಂಡರು. ಅಲ್ಲಿ ಲಂಬಾಣಿ ಅವರು ಯಾರೂ ಇರಲಿಲ್ಲ. ಮತ್ತು ಕುಂಬಾರರೂ ಇರಲಿಲ್ಲ. ಬರಿಯ ಹರಿಜನರು ಇದ್ದರು, ಗುಡಿಸಲು ಹಾಕಿಕೊಂಡಿದ್ದರು. ಇವೊತ್ತಿನ ದಿವಸ ಮೈಸೂರು ಸಂಸ್ಥಾನದಲ್ಲಾಗಲೀ ಇಡಿಯ ಭಾರತ ದೇಶದಲ್ಲಾಗಲೀ ಹರಿಜನರಲ್ಲಿರುವಷ್ಟು ಒಗ್ಗಟ್ಟು ಯಾವ ಜನಾಂಗದಲ್ಲೂ ಇಲ್ಲ ಎಂದು ಹೇಳುತ್ತೇನೆ. ಆ ದಿವಸ ಅವರ ಕಾಲೋನಿಗೆ ಹೋದಾಗ......

(Interruption by Sri B. Rachiah)

ಅವರು ಹೇಳುವುದು ಯಾವುದನ್ನೂ ರೆಕಾರ್ಡ್ ಮಾಡಿಕೊಳ್ಳ ಕೂಡದು, ಅದನ್ನು ರೆಕಾರ್ಡ್‌ನಲ್ಲಿ ಸೇರಿಸ ಬಾರದೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ (ಚಾಮರಾಜ ನಗರ).—ರೆಕಾರ್ಡ್ ಮಾಡಿಕೊಳ್ಳಕೂಡದೆಂದು ಹೇಳುವುದಕ್ಕೆ ಅವರಿಗೆ ಏನು ಅಧಿಕಾರ ಇದೆ, ಸ್ವಾಮಿ !

Mr. SPEAKER.—He did not ask the stenographer to do so. But he told it to me.

Sri B. RACHAIAH.—On a point of order, Sir......

ಅಧ್ಯಕ್ಷರು.—ಏನದು !

ಶ್ರೀ ಎನ್. ರಾಚಯ್ಯ.—ನಾನು ತಮಗೆ ಅಪೀಲು ಮಾಡಿಕೊಂಡಿದ್ದೇನೆಯೇ ಹೊರತು ಬೇರೆ ಏನೂ ಇಲ್ಲ.

Sri B. RACHIAH.—I rise to a point of order Sir, on a point of personal explanation.

ಶ್ರೀ ಎನ್. ರಾಚಯ್ಯ.—ಸ್ವಾಮಿ, ಈ ಜಮೀನನ್ನು ರಿಲೀಜ್ ಮಾಡಬೇಕೆಂದು ಶ್ರೀಮಾನ್ ಕೆ. ಎಫ್ ಪಾಟೀಲರವರು ತಿಳಿಸಿ ಈ ಕೇಸನ್ನು ರೆವೆನ್ಯೂ ಮಂತ್ರಿಗಳವರ ಕಡೆಗೆ ತಿಳಿಸಿದ್ದಾರೆ. ಈ ಜಮೀನು ವಿಚಾರದಲ್ಲಿ ಬಡಿಸಿಕೊಳ್ಳುವ ಬಗ್ಗೆ ಕೆಲವರು ಆಕ್ಷೇಪಣೆ ಮಾಡಿದ್ದಾರೆ. ಈ ಮಾನ್ಯ ಸಭೆಯ ಗಮನಕ್ಕೆ ಒಂದು ವಿಷಯವನ್ನು ತರಲಿಚ್ಛಿಸುತ್ತೇನೆ. ಈ ಜಮೀನು ಇನ್ನೂ ವಿಲೇವಾರಿಯಾಗಿಲ್ಲ. ಇದೊಂದು ಕಾಲನಿಯಾಗಿರುವುದರಿಂದ ಅಲ್ಲಿ ವಾಸ ಮಾಡಿಕೊಂಡಿರ ತಕ್ಕಂಥವರು ಯಾರೇ ಆಗಿರಲಿ ಅವರು ಒಂದು ಸಹಕಾರಿ ಸಂಘವನ್ನು ಮಾಡಿಕೊಂಡರೆ ಮಾತ್ರ ಜಮೀನನ್ನು ಹಂಚಬೇಕೆಂದು ಮಾಡಿದೆ. ಸರ್ಕಾರದ ಈ ನಿಯಮಕ್ಕೆ ಅನುಸಾರವಾಗಿ ನಾನು 5 ತಿಂಗಳುಗಳ ಹಿಂದೆ ಅಲ್ಲಿಗೆ ಹೋಗಿ ಒಂದು ಕೋಆಪರೇಟಿವ್ ಸೊಸೈಟಿ ರಚಿಸಿ ಅದನ್ನು ರಿಜಿಸ್ಟರ್ ಸಹ ಮಾಡಿಸಲಾಗಿದೆ. ಈ ಸೊಸೈಟಿಗಳಿಗೆ ಸಂಬಂಧಪಟ್ಟ ವಿಷಯ ರೆವೆನ್ಯೂ ಮಂತ್ರಿಗಳದ್ದಾಗಿದೆ. ಅದು ನನಗೆ ಸಂಬಂಧಪಟ್ಟದ್ದಲ್ಲ. *(Interruption)*

Sir, my Hon'ble friend Sri B. Rachiah is interrupting my speech at every stage and I am not yielding, Sir. Is request you not to allow his interruption to go on record.

Sri B. RACHIAH.—Is itopen to the Minister to order the stenographer not to take down what I have said ?

Mr. SPEAKER.—He did not order the stenographer. Only he requested me to order the stenographers not to take down.

Sri M. C. NARASIMHAN.—Is it not desirable that personal accusations are avoided or minimised ?

Sri B. RACHIAH.—I am rising on a point of personal explanation, Sir. The Hon'ble Minister is misquoting me. I have raised a point of order under rule 293 of the Rules of Procedure.

Mr. SPEAKER.—Rule 293 reads thus:

> "A member may, with the permission of the Speaker, make a personal explanation, although there is no question before the Assembly, but in this case no debatable matter may be brought forward, and no debate shall arise."

Sri B. RACHIAH.—My explanation is that I levelled the charge that even when there was a Government Order—I have read that Government order he has given instructions to the local officers to allot lands. Is it not a fact ?

Mr. SPEAKER.—Obviously I cannot say anything about facts. But so far as this House is concerned, I am not happy that the proceedings are going on in this way. I expect every Hon'ble Member to be as restrained as possible. Sentiments and feelings should not be exhibited in this House. Whoever he may be, he should never exhibit feelings. We are here to discuss points and we are here to offer our remarks. Beyond, that, this is not the place where you can behave as you like. I expect the Hon'ble Members to behave in a way which is worthy of themselves and of the House.

Sri G. VENKATAI GOWDA.—Very good ruling.

ಶ್ರೀ ಕೆ. ಎಫ್. ಪಾಟೀಲ್ (ಅರಣ್ಯ ಇಲಾಖೆಯ ಮಂತ್ರಿಗಳು).—ಇದು ಫಾರೆಸ್ಟ್ ಲ್ಯಾಂಡ್ ಆಗಿದ್ದರಿಂದ ಈ ವಿಷಯ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸಂಬಂಧ ಪಟ್ಟದ್ದಾಗಿದೆ. ಫಾರೆಸ್ಟ್ ಡಿಪಾರ್ಟ್‌ಮೆಂಟು ಈ ಜಮೀನನ್ನು ಡೀ-ಫಾರೆಸ್ಟ್ ಮಾಡಿ ಕೊಡಬಹುದು ಎಂದು ತಿಳಿಸಿದೆ. ಈ ಜಮೀನು ಬೇಕೆಂದು ಬೇಡಿಕೊಂಡಿರುವ ಅರ್ಜಿಗಳು ಬಂದಿವೆ. ಕೋಆಪರೇಟಿವ್ ಸೊಸೈಟಿ ಮಾಡಿ ಕೊಳ್ಳುತ್ತೇವೆ, ಜಮೀನು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ವಿಷಯ ರೆವೆನ್ಯೂ ಡಿಪಾರ್ಟ್‌ಮೆಂಟಿನ ಮಂತ್ರಿಗಳಿಗೆ ಸಂಬಂಧ ಪಟ್ಟದ್ದು. ಸ್ವಾಭಾವಿಕವಾಗಿ ಶ್ರೀಮಾನ್ ರಾಚಯ್ಯನವರು ಹಿಂದುಳಿದವರಿಗೆ ಜಮೀನನ್ನು ಬಿಟ್ಟು ಕೊಡಬೇಕೆಂದು ಹೇಳಿರಬಹುದು ; ಆದರೆ ನಾನು ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಶ್ರೀ ಬಿ. ರಾಚಯ್ಯನವರಾಗಲಿ ಶ್ರೀ ಎನ್. ರಾಚಯ್ಯನವರಾಗಲಿ ಅವರ ಪ್ರಭಾವಕ್ಕೆ ಒಳಗಾಗದೆ ಈ ಫಾರೆಸ್ಟ್ ಲ್ಯಾಂಡನ್ನು ಬಿಟ್ಟು ಕೊಡಬೇಕೆಂದು ನಿರ್ಣಯ ಮಾಡಿದ್ದೇನೆ. ಮತ್ತು ಆ ರೀತಿ ಕೊಡಬೇಕೆಂದು ಶ್ರೀಮಾನ್ ಮಂಜಪ್ಪನವರಿಗೆ ಹೇಳಿದ್ದೇನೆ. ಇವರಿಬ್ಬರ influenceಗೆ ನಾನು ಒಳಗಾಗಿಲ್ಲ. ನಾನು ಚರ್ಚೆಮಾಡಿ ನನಗೆ ಯೋಗ್ಯ ಕಂಡದ್ದನ್ನು ನಾನು ಮಾಡಿದ್ದೇನೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಈಗ ಜಮೀನನ್ನು ಹಂಚಬೇಕಾಗಿದೆ. ಇವರಿಬ್ಬರೂ ಸದಸ್ಯರು ಹೀಗೆ ತಮ್ಮ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಮಾತನಾಡುತ್ತಾ ಹೋದರೆ ಈ ಸಮಸ್ಯೆ ಬಗೆಹರಿಯುವದಿಲ್ಲ. ಆದುದರಿಂದ ಈ ಸಮಸ್ಯೆಯನ್ನು ಇಲ್ಲಿಗೆ ಮುಗಿಸಿ ಬಿಡಬೇಕು.

ಶ್ರೀ ಎನ್. ರಾಚಯ್ಯ.—ಸ್ವಾಮಿ, ಈ ಜಮೀನು ವಿಚಾರದಲ್ಲಿ ಹೇಳುವದಾದರೆ ಈ ಕಾಲನಿಯಲ್ಲಿ ಇರತಕ್ಕಂಥವರು ಯಾರು ಎನ್ನುವುದನ್ನು ನೋಡಬೇಕಾಗಿದೆ. ಇದು ಊಹೆ ಮಾಡಿಕೊಂಡು ಹೇಳಬೇಕಾದ ವಿಷಯವಲ್ಲ. ಇದು ಒಂದು ವರ್ಗದವರಿಗೆ ಅಷ್ಟೇ ಸಂಬಂಧಪಟ್ಟದ್ದೂ ಅಲ್ಲ. ಆರ್ನೂರು ಎಕರೆ ಭೂಮಿಯನ್ನು ಫಾರೆಸ್ಟ್ ಲ್ಯಾಂಡ್‌ನಿಂದ ರಿಲೀಜ್ ಮಾಡಿದ್ದೇವೆ ಜಮೀನು ಇಲ್ಲದವರಿಗೆ ಜಮೀನು ಕೊಟ್ಟಿದ್ದೇವೆ ; ಎಲ್ಲರಿಗೂ ಒಂದೇರೀತಿಯಾಗಿ ಇಂದು ನಮ್ಮ ದೇಶದಲ್ಲಿ ಸಿಟಿಜನ್‌ಷಿಪ್ ಇದೆ. ಕಾನೂನಿನ ಪ್ರಕಾರ ಎಲ್ಲರಿಗೂ ಹಕ್ಕು ಬಾಧ್ಯತೆಗಳಿವೆ. ಅಲ್ಲಿಯ ಜನರು ಅವರೇನು ಹೊರಗಿನಿಂದ ಬಂದಿರತಕ್ಕಂಥವರು ಅಲ್ಲ.

(*Sri B. Rachiah Interrupted*)

ಶ್ರೀ ಎನ್. ರಾಚಯ್ಯ.—ಅಲ್ಲಿರತಕ್ಕಂಥವರಲ್ಲಿ 24 ಜನರು ಲಂಬಾಣಿ ಜನರಿದ್ದಾರೆ ; ಇನ್ನು ಉಳಿದವರು ಹರಿಜನರಾಗಿದ್ದಾರೆ. ಸತ್ಯವಂತರಾಗಿ, ವೈಷಮ್ಯಭಾವನೆ ಇಲ್ಲದೆ ಸಂಬಂಧ ಪಟ್ಟ ಒಂದು ಸಾವಿರ ಎಕರೆ ಭೂಮಿಯನ್ನು ಅಲ್ಲಿ ಬಿಟ್ಟುಕೊಟ್ಟಿದ್ದಾರೆ. 80 ಜನರು ಇರುವ ಕಡೆ ಸಹ ಜಮೀನು ಕೊಟ್ಟಿದ್ದೇವೆ. ಒಂದು ಕಮಿಟಿಯನ್ನು ರಚಿಸಿ ಅಲ್ಲಿಗೆ ವಿಚಾರಣೆ ಮಾಡಲು ತಿಳಿಸಬಹುದು. ಆ ಕಡೆಯಲ್ಲಿ ಬೇರೆ ಒಳಜಾತಿಯವರು ಇಲ್ಲ (*Interruption*).

Mr. SPEAKER.—I am requesting Hon'ble Members, not to exhibit feelings. I request the Hon'ble Minister to speak with a little restraint and with patience. Otherwise, it will create heat in the House. I do not want any challenges and counter-challenges. I am interested in knowing facts.

Sri M. MALLIKARJUNASWAMY.—I request the exalted Chair to tell the Hon'ble Minister that he should not be arbitrary in this regard. What has taken place on a public platform should not be quoted here in the Legislature. It is not social welfare as everybody knows, but something else.

Sri N. RACHIAH.—It is a very irresponsible statement, Sir.

Sri C. J. MUCKANNAPPA.—Sir, may I request the Hon'ble Leader of the House to keep them under control?

Sri J. B. MALLARADHYA.—I do not think we can usefully hear anything here. Everytime, there is interference. What is the use? Let us close it, Sir.

Mr. SPEAKER.—I have not been able to understand why all this is happening.

Sri C. M. ARUMUGHAM.—Sir, let us rise at six o' clock as we had already decided.

Sri N. RACHIAH.—I have to meet every word of his challenge. I have got a right to reply.

ಅಧ್ಯಕ್ಷರು.—ನಾಳೆ ಹೇಳಿ.

Sri T. SUBRAMANYA (Minister for Law, Labour and Local Self-Government).—May I submit, Sir, that it was agreed by the House, on the suggestion of Sri Mallaradhya, that the replies might be continued tomorrow and the time deducted out of the time allotted for the voting of demand.

6 P.M.

Sri C. M. ARUMUGHAM.—It was not so.

Sri J. B. MALLARADHYA.—I am also being misquoted.

ಅಧ್ಯಕ್ಷರು.—ನಾಳೆ ಮುಂದುವರಿಸಬೇಕು, ಆಮೇಲೆ ಡಿಮ್ಯಾಂಡ್ಸ್‌ಗೆ 11 ದಿನಗಳ ಅವಕಾಶ ಕೊಟ್ಟಿರುವುದನ್ನು 10 ದಿವಸಗಳಿಗೆ ಇಳಿಸಬೇಕು ಎಂದು ಹೇಳಿದರೆಂದು ತಿಳಿಸಿದರು.

Sri J. B. MALLARADHYA.—The Hon'ble Chief Minister in reply to my suggestion said that we should sit till six o' clock and close. Whatever we may do, if we continue the general

discussion on the Budget, the total time cannot be exceeded even by a day. The natural inference is, if this discussion extends to tomorrow the time for demand will have to be cut down to ten days.

Mr. SPEAKER.—If it is agreeable, I have no objection.

Sri C. M. ARUMUGHAM.—Cutting down to ten days is not agreeable-we are not agreeable to that.

Sri U. M. MADAPPA (Chamarajanagar).—I think that rule will not be applicable at this stage.

Sri M. C. NARASIMHAN.—I do not see how the rules stand in the way.

Sri C. M. ARUMUGHAM.—Otherwise, we will sit late. Let them reply.

Mr. SPEAKER.—May I know how much time will be required for the Ministers to reply?

Sri B. D. JATTI.—We require in all two hours.

Sri T. MARIAPPA.—I require 20 minutes. I can assure you, because my Hon'ble colleagues have covered all the points raised. I will confine myself to points relevant to the Budget and the Budget Memorandum.

Sri T. SUBRAMANYA.—I am speaking for 20 minutes.

Sri K. F. PATIL.—I may require about 15 minutes.

Sri K. PUTTASWAMY (Mysore city).—Sir, Budget discussion has gone on for so many days. I think the members will be justified in expecting the Ministers to reply to the points they have raised. Now the Hon'ble Speaker was trying to ascertain as to how many Ministers would be speaking. It would be reasonable on my part if I expect all the Ministers to speak and try to answer the several criticisms that have been made in this House. Or else, this Budget discussion becomes one sided and so many points raised by members go unanswered.

Sri B. D. JATTI.—The Hon'ble Minister for Agriculture will finish in ten minutes. He won't equire more than ten minutes.

ಅಧ್ಯಕ್ಷರು.—ಶ್ರೀ ರಾಚಯ್ಯನವರು ಈ ದಿವಸ ಮುಗಿಸಲಿ.

ಶ್ರೀ ಎನ್. ರಾಚಯ್ಯ.—ಆಗಬಹುದು.

Sri C. M. ARUMUGHAM.—I hope it is understood that one day won't be taken away from Demands as proposed, because we have passed the vote on account.

Sri T. MARIAPPA.—The number of days allotted must stand.

ಶ್ರೀ ಎನ್. ರಾಚಯ್ಯ.—ಸ್ವಾಮಿ, ಮಾನ್ಯ ಸದಸ್ಯರು ನನ್ನ ಮೇಲೆ ವೈಯಕ್ತಿಕವಾಗಿ ಟೀಕೆ ಮಾಡಿರುವುದು ಸರಿಯಲ್ಲ. ಶ್ರೀಮಾನ್ ಕೆ. ಎಫ್. ಪಾಟೀಲರು ಹೇಳಿದ ಹಾಗೆ, ಜಮೀನು ಪಿಲೇವಾರಿಯಾಗಿಲ್ಲ. ಯಾರೇ ಆಗಿರಲಿ, ಹರಿಜನರಾಗಲಿ ಅಥವಾ ಇತರರಾಗಲಿ, ಆ ಸ್ಥಳದಲ್ಲಿ ಯಾರು ಷೆಡ್ ಹಾಕಿಕೊಂಡು ವಾಸ ಮಾಡುತ್ತಿದ್ದಾರೋ ಅವರಿಗೆ ಮಾತ್ರ ಈ ಅನುಕೂಲ ಕೊಡಬೇಕೆಂದಿದೆ ಮತ್ತು ನಮ್ಮ ಮಿತ್ರರಾದ ಶ್ರೀಮಾನ್ ಕೆ. ಎಫ್. ಪಾಟೀಲರು ನಾಲ್ಕು ದಿವಸಗಳ ಕೆಳಗೆ ಸುಮಾರು 400 ಎಕರೆಗಳಷ್ಟು ಹೆಚ್ಚು ಪ್ರದೇಶವನ್ನು release ಮಾಡಿದ್ದಾರೆ. ಒಂದು ಪ್ರಭಾವ ಬೀರಿ ಮಾನ್ಯ ಸದಸ್ಯರು ಕೈ ಹಾಕಿ ಅವರೇ ಮಾಡಿಕೊಂಡು, ನಾನು ಮಂತ್ರಿಯಾಗಿದ್ದೇನೆಂದು ವೈಯಕ್ತಿಕವಾಗಿ ಟೀಕಿಸುವುದು ಸಮಂಜಸವಲ್ಲ. ಕೊಡಬೇಡಿ ಎಂದು ಎಲ್ಲೂ ಹೇಳಿಲ್ಲ. ಯಾರಿಗೋ ಶಿಫಾರ್ಸು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನನ್ನ ಗಮನಕ್ಕೆ ಬಂದಿರುವಂತೆ ಪ್ರತಿಯೊಬ್ಬ ಹರಿಜನ ಸಂಗಡದ ವ್ಯಕ್ತಿಗೂ ಜಮೀನಿಗೆ, ಸುಮಾರು ಹತ್ತು ವರ್ಷಗಳಿಂದ ಮನೆ ಕಟ್ಟಿಕೊಳ್ಳಲು ಅನುಕೂಲ ಮಾಡಿದ್ದಾರೆ. ಆ ಸ್ಥಳದಲ್ಲಿ ಬಂದು ವಾಸಮಾಡುವುದಕ್ಕೆ ಇಷ್ಟವಿಲ್ಲ. ಮಾನ್ಯ ಸದಸ್ಯರು ಹೇಳಿರುವಂತೆ ಬೇಕಾದವರಿಗೆ ಅವಕಾಶ ಕೊಡಲು ಅಭ್ಯಂತರವಿಲ್ಲ. ಈ ಒಂದು ವಿಷಯವನ್ನು ಮಾನ್ಯ ಸದಸ್ಯರು ನನ್ನ ಹತ್ತಿರ ಬಂದು ಪ್ರಸ್ತಾಪ ಮಾಡಿದ್ದರೆ ಅನಾವಶ್ಯಕವಾದ ಟೀಕೆಗಳಿಗೆ ಅವಕಾಶವಿರುತ್ತಿರಲಿಲ್ಲ.

ಹಾಸ್ಟಲ್ ಕಟ್ಟಡದ ವಿಷಯದಲ್ಲಿ ಕೇಂದ್ರ ಸರ್ಕಾರ ಮೈಸೂರು ಸಂಸ್ಥಾನದಲ್ಲಿ ಹರಿಜನರ ಬಗ್ಗೆ ಹೆಚ್ಚಾಗಿ ಖರ್ಚು ಮಾಡುತ್ತಿದೆ. 8 ತಿಂಗಳಿಂದ 30 ಸಾವಿರ ರೂಪಾಯಿಯಾಗಿದೆ. ಬಿಲ್ಲೆಗೆ ಒಂದು ಲಕ್ಷ ವಿಶೇಷ ಸಂದರ್ಭವಿದ್ದರೆ ಕೊಡಬಹುದು. ಶ್ರೀ ಟಿ. ಚೆನ್ನಯ್ಯನವರು ನನ್ನ ಸ್ಥಾನದಲ್ಲಿ ಮಂತ್ರಿಗಳಾದಾಗ 3 ಲಕ್ಷ ಚಿಲ್ಲರೆ ಕೋಲಾರದಲ್ಲಿ ಖರ್ಚು ಮಾಡಿದ್ದಾರೆ. ಹೆಚ್ಚು ಕೊಡಬಾರದೆಂದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಶ್ರೀ ಕೆ. ಹನುಮಂತಯ್ಯನವರು ಮಾಡಿರುವುದು.

ಶ್ರೀ ಎನ್. ರಾಚಯ್ಯ.—ವ್ಯಕ್ತಿಗಳ ವಿಷಯ ಹೇಳಬೇಕಾಗಿಲ್ಲ. ಅದು ಸರ್ಕಾರ ಮಾಡಿರುವುದು, ಮೈಸೂರು ಸರ್ಕಾರ, ಕಾಂಗ್ರೆಸ್ ಸರ್ಕಾರ ಮಾಡಿರುವುದು; ಶ್ರೀ ಟಿ. ಚೆನ್ನಯ್ಯನವರು ಮಂತ್ರಿಗಳಾಗಿದ್ದಾಗ ಸರ್ಕಾರ ಮಾಡಿರುವುದು. ಏಳು ಹಾಸ್ಟಲು ಕಟ್ಟಡಗಳಿಗೆ ಒಂದು ಲಕ್ಷದಿಂದ 3-4 ಲಕ್ಷರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ. ಹೀಗಿರುವಾಗ ಮಾನ್ಯ ಸದಸ್ಯರು ಬಹಳ ಜವಾಬ್ದಾರಿಯಿಂದ, ವಿಶ್ವಾಸದಿಂದ ಅಭಿಮಾನದಿಂದ ಬಡವರ ಹಿತವನ್ನು ರಕ್ಷಿಸುತ್ತಿರುವ ಸವರ್ಣೀಯರ ಮನ ನೋಯುವಂತೆ ಬೇಜವಾಬ್ದಾರಿಯಿಂದ ಮಾತನಾಡಬಾರದು. ಕಟ್ಟಡದ ವಿಚಾರದಲ್ಲಿ ಮರ್ಕೆರಾದಲ್ಲಿ ಸಮಿತಿಯ ಮೀಟಿಂಗ್ ಆದಾಗ ಪ್ರಸ್ತಾಪ ಬಂದು ಪರಿಶೀಲಿಸೋಣ ಎಂದು ಭರವಸೆ ಕೊಟ್ಟ ಮೇಲೆ ಮತ್ತೆ ಇಲ್ಲಿ ಯಾವ ದುರುದ್ದೇಶದಿಂದ

(ಶ್ರೀ ಎಚ್. ರಾಚಯ್ಯ)

ಅಪಾದನೆ ಮಾಡಿದರೋ ಗೊತ್ತಿಲ್ಲ. ಏನೇ ಆಗಲಿ, ಈ ವಿಚಾರದಲ್ಲಿ ಅವರು ಆ ರೀತಿ ಮಾತನಾಡಬಾರದಾಗಿತ್ತು. ಅದನ್ನು ಹೆಚ್ಚಾಗಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ.

ಮಡಿಕೇರಿ ಮತ್ತು ಕಾರವಾರಗಳಲ್ಲಿ ಕಮಿಟಿ ಮೀಟಿಂಗ್ ಇಟ್ಟಿದ್ದೆವು. ಹೊಸದಾಗಿ ಆ ಮೀಟಿಂಗ್‌ಗಳನ್ನು ಇಟ್ಟಿರಲಿಲ್ಲ. ಮಾನ್ಯ ಸದಸ್ಯರೂ ಮತ್ತು ಇದೇ ಸಭೆಯಲ್ಲಿ ಸದಸ್ಯರಾಗಿರುವ ಶ್ರೀಮಾನ್ ಚೆನ್ನಿಗರಾಮಯ್ಯನವರೂ, ಕೆಲವು ಸದಸ್ಯರನ್ನು ಬಿಟ್ಟು ಅವರಿಗೆ ಬೇಕಾದವರನ್ನು ಕಮಿಟಿಯಲ್ಲಿ ಸದಸ್ಯರನ್ನಾಗಿ ಹಾಕಿಕೊಂಡು, ಗುಲ್ಬರ್ಗ, ಮಂಗಳೂರು ಮುಂತಾದ ಕಡೆ, ಶ್ರೀಮಾನ್ ಚೆನ್ನಿಗರಾಮಯ್ಯನವರ ಕಾಲದಲ್ಲಿ ಮೀಟಿಂಗ್‌ಗಳನ್ನು ಮಾಡಿದರೇ ಹೊರತು ನಾನು ಹೊಸದಾಗಿ ಮಾಡಲಿಲ್ಲ. ಬೆಂಗಳೂರನ್ನು ಬಿಟ್ಟು ಹೊರಗಡೆ ಮೀಟಿಂಗ್ ಇಡಬಾರದೆನ್ನುವುದು ನನ್ನ ಖಚಿತವಾದ ಅಭಿಪ್ರಾಯ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗೆ ಸೇರಿದ ಈ ಮಾನ್ಯ ಸಭೆಯ ಸದಸ್ಯರೂ ಆ ಕಮಿಟಿಯಲ್ಲಿದ್ದಾರೆ. ಅವರ ಅಭಿಪ್ರಾಯದಂತೆ ಮಡಿಕೇರಿ ಮತ್ತು ಕಾರವಾರಗಳಲ್ಲಿ ಕಾನೂನು ಬದ್ಧವಾಗಿ ಮತ್ತು ನಿಯಮಗಳಿಗೆ ಬದ್ಧವಾಗಿ ಮೀಟಿಂಗನ್ನು ಏರ್ಪಾಡುಮಾಡಿದೆವು. ಈರೀತಿ ಮಾಡಿರುವಾಗ ಮಾನ್ಯ ಸದಸ್ಯರು ನನ್ನಮೇಲೆ ಎಷ್ಟು uncharitable remark ಹೊರಿಸಿದ್ದಾರೆಂದರೆ; ಕಾರವಾರ ಮತ್ತು ಮಂಗಳೂರುಗಳಲ್ಲಿ ನಾನು ಟಾಡಿ ಕಂಟ್ರಾಕ್ಟರುಗಳ ಹತ್ತಿರ ಮಾತನಾಡಿದೆ ಎಂದು ತಿಳಿಸಿದ್ದಾರೆ. ತಮಗೆಲ್ಲ ಗೊತ್ತಿರುವಂತೆ ರಾಯಚೂರು, ಗುಲ್ಬರ್ಗ, ಮೈಸೂರು, ಬೆಂಗಳೂರು ಮತ್ತು ಮಂಡ್ಯ ಈ ಐದು ಜಿಲ್ಲೆಗಳಲ್ಲಿ ಮಾತ್ರ ಕುಡಿಯಲು ಅವಕಾಶವಿದೆ. ಕೊಡಗು ಜಿಲ್ಲೆಯಲ್ಲಿಯೂ ಇಲ್ಲ, ಕಾರವಾರದಲ್ಲಿಯೂ ಇಲ್ಲ. ಹೀಗಿರುವಾಗ ಟಾಡಿ ಕಂಟ್ರಾಕ್ಟರುಗಳ ಹತ್ತಿರ ನಾನು ಮಾತನಾಡುವ ಪ್ರಸಂಗವೆಲ್ಲಿಂದ ಬರುತ್ತದೆ? ಬೀದಿಯಲ್ಲಿ ಹೋಗುವವರು, ಅಥವಾ ಯಾರಾದರೂ ಟಾಡಿ ಉಪಯೋಗಿಸುವವರು ಮಾತ್ರ ಇಂಥ ಬೇಜವಾಬ್ದಾರಿ ಮಾತನ್ನು ಆಡಲು ಸಾಧ್ಯ. ಎರಡು ದಿವಸಗಳ ಮೀಟಿಂಗಿನಲ್ಲಿ ಅಜೆಂಡಾದಲ್ಲಿದ್ದ ಸಂಪೂರ್ಣ ಕಾರ್ಯಕ್ರಮವನ್ನು ನಡೆಸಿದ್ದೇವೆ. ನಮ್ಮ ಇಡಿಯ ಹರಿಜನ ಬಾಂಧವರು, ಈ ಇಬ್ಬರು ಸದಸ್ಯರನ್ನು ಬಿಟ್ಟರೆ, ಬೇಷಕ್‌ಗಿರಿ ಕೊಟ್ಟಿರುವಾಗ, ನಾನು ಏನೇನೋ ಮಾಡಿದ್ದೇನೆಂದು ತಮ್ಮ ಗಮನಕ್ಕೆ ತಂದರು. ಆದರೆ ನಾನು ಬಹಳ ವಿನಯದಿಂದ ಹೇಳುತ್ತೇನೆ; ನಾನು ರಾಜಕೀಯದಲ್ಲಿ ಸೇರಿಕೊಂಡು ಮಂತ್ರಿಯಾಗಬೇಕು, ಪ್ರಭಾವ ಬೀರಬೇಕು, ಒಬ್ಬರೊಬ್ಬರಿಗೆ ಜಗಳ ತರಬೇಕು, ಇದೇ ಸಮಯದಲ್ಲಿ ಸಂದಿಯಲ್ಲಿ ಸಮಾರಾಧನೆ ಮಾಡಬೇಕು ಎನ್ನುವ ಅಭಿಲಾಷೆ ನನಗಿಲ್ಲ. ವಿರೋಧಪಕ್ಷದ ಸದಸ್ಯರನ್ನೂ ಬೇಕಾದರೆ ಕೇಳಬಹುದು. ನಮ್ಮ ಜಿಲ್ಲೆಯ ಮಾನ್ಯ ಸದಸ್ಯರೂ ಇದ್ದಾರೆ, ಅವರನ್ನು ಕೇಳಬಹುದು. ಈ ರೀತಿಯಾಗಿ ಮಾನ್ಯ ಸದಸ್ಯರು ಮಾತನಾಡಿದ್ದು ಅಸಹ್ಯವಾಗಿತ್ತು ಎಂದು ಹೇಳುತ್ತೇನೆ.

(*Interruption by Sri B. Rachiah*)

ಪಬ್ಲಿಕ್ ಸರ್ವಿಸ್ ಕಮಿಷನ್ ವಿಚಾರ ಹೇಳಿದರು. ಬಿ.ಎ., ಎಂ.ಎ., ಓದಿದರಕ್ಕ ಇಬ್ಬರಿಗೆ ಅವರು ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಗಳ ಸಂಬಂಧಿಗಳು, ನನ್ನ ಸಂಬಂಧಿಗಳಲ್ಲ—ಕೆಲಸ ಕೊಟ್ಟಿದ್ದೇವೆ. ಅವರಲ್ಲಿ ಒಬ್ಬರು ಲಿಂಗಯ್ಯ ಎಂಬುವರು ಶಿವಮೊಗ್ಗದಲ್ಲಿ Welfare Officer ಆಗಿದ್ದಾರೆ, ಇನ್ನೊಬ್ಬರು Commercial Tax Inspector ಆಗಿದ್ದಾರೆ. ಇವರು ನನ್ನ ಸಂಬಂಧಿಕರಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ಬಂದು ಕೇಳಿದ್ದಕ್ಕೆ ನೇಮಕಮಾಡಿದ್ದೇನೆ.

Sri M. MALLIKARJUNASWAMY.—He has appointed only a scheduled caste candidate, who is fully qualified. It is accidental that he is my brother-in-law.

ಶ್ರೀ ಎಚ್. ರಾಚಯ್ಯ.—ಅವರ ಸಂಬಂಧಿಗಳಾದರೆ qualified ಎನ್ನುತ್ತಾರೆ, ಉಳಿದವರಾದರೆ........

(*Interruptions.*)

ಅವರಮೇಲೆ ತಾವು ಕ್ರಮ ತೆಗೆದುಕೊಳ್ಳುವವರೆಗೆ ಸರಿಹೋಗುವುದಿಲ್ಲ. ಈರೀತಿ 'ತಾಡಿಯಿಸಂ' ಅದರ ಹೇಗೆ!

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಸದಸ್ಯರು ಮಾತನಾಡಿದರೆ ಸಿಡಿಲು ಬೀಳುತ್ತಿರುವಂತೆ ಕಾಣುತ್ತದೆ. ಆದುದರಿಂದ ಅವರಿಗೆ ಯಂತ್ರ ಕಟ್ಟಿಸಬೇಕು, ಅಥವಾ ನಾವು ಯಂತ್ರ ಕಟ್ಟಿಸಿಕೊಳ್ಳಬೇಕು. ಆರೀತಿ ಇದೆ. (ನಗು).

ಅಧ್ಯಕ್ಷರು.—ಯಾರೂ ಕಟ್ಟಿಸಿಕೊಳ್ಳಬೇಕಾಗಿಲ್ಲ.

ಶ್ರೀ ಎಚ್. ರಾಚಯ್ಯ.—ವೆಲ್‌ಫೇರ್ ಆಫೀಸರುಗಳಾಗಿ dullards ನ್ನು ನೇಮಕಮಾಡಿದ್ದೇನೆಂದು ಹೇಳುತ್ತಾರೆ. ಅವರನ್ನು dullard ಎಂದು ಕರೆಯಬೇಕಾದರೆ ನಾನೂ dullard ಎಂದು ಅರ್ಥವಾಗುತ್ತದೆ. ಮಾನ್ಯಸದಸ್ಯರೇ ನಮಗೆಲ್ಲರಿಗಿಂತ dullard ಎಂದು ಹೇಳದೆ ವಿಧಿ ಇಲ್ಲ.

ನಾನು ಏನೋ ಮಾಡಿದ್ದೇನೆಂದು ಹೇಳುತ್ತಾರೆ. ಅವರು ಮಾಡಿರುವುದಕ್ಕೆ documentary evidence ಇದೆ. ಒಬ್ಬ ಎಕ್ಸೈಸ್ ಕಂಟ್ರಾಕ್ಟರ್ ಆದವರು ಮಾನ್ಯ ಮುಖ್ಯ ಮಂತ್ರಿಗಳಿಗೆ 27ನೆಯ ಫೆಬ್ರುವರಿ 1960 ರಲ್ಲಿ ಬರೆದುಕೊಟ್ಟಿರುವುದರಲ್ಲಿ ಮಾನ್ಯ ಸದಸ್ಯರಾದ ರಾಚಯ್ಯನವರಮೇಲೆ ಆರೋಪಮಾಡಿದ್ದಾರೆ. ಅದರಿಂದ ತಿಳಿಯುವುದೇನೆಂದರೆ; ಚಾಮರಾಜನಗರದಲ್ಲಿ ಅವರ ಹಾಸ್ಟಲಿನಲ್ಲಿ ಸುಮಾರು 20 ಹಳ್ಳಿಯ ಹರಿಜನರನ್ನು ಸೇರಿಸಿಕೊಂಡು ಒಂದು ಮೀಟಿಂಗ್ ಮಾಡಿ ಯಾರೂ ಕೂಡ ಮದ್ಯಪಾನ ಮಾಡಬಾರದು ಎಂದು ಅವರಿಗೆ ಹೇಳಿ ಬೇಕಾದಷ್ಟು ಗೂಂಡಾಗಿರಿಯನ್ನು ಕಂಟ್ರಾಕ್ಟರಮೇಲೆ ಹರಿಜನ ಬಾಂಧವರೂ ಮತ್ತು ಬೇರೆಯವರೂ ಮಾಡಿದ್ದಾರೆ. ಇದರಿಂದ ಎಕ್ಸೈಸ್ ಕಂಟ್ರಾಕ್ಟರಿಗೆ ನಷ್ಟವಾಗಿ ತೊಂದರೆಯಾಗಿ ಅವರ ಜೀವನ, ವ್ಯಾಪಾರ ಎಲ್ಲವೂ ಕೂಡ ದುಸ್ಥಿತಿಗೆ ಬರುವುದಕ್ಕೆ ಎಂ.ಎಲ್.ಎ. ಆಗಿರುವ ಬಿ. ರಾಚಯ್ಯನವರು ಕಾರಣ ಎಂದು ಡಾಕ್ಯುಮೆಂಟರಿ ಸಾಕ್ಷ್ಯವಿದೆ. ಬೇಕಾದರೆ ಸಭೆಯ ಮುಂದಿಡುತ್ತೇನೆ.

ಒಬ್ಬರು ಕುಂಬಾರ ಕೋಮಿಗೆ ಸೇರಿದವರು ಒಂದು ಅರ್ಜಿ ಬರೆದಿದ್ದಾರೆ. ಹರದನಹಳ್ಳಿಯ ಬಳಿ 40 ಸಂಸಾರ, ಕುಂಬಾರರು, ಸವರ್ಣವರ್ಗಕ್ಕೆ ಸೇರಿದವರು ಬಹಳ ದಿವಸಗಳಿಂದ ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಹರದನಹಳ್ಳಿಯ ಬಳಿ 400 ಎಕರೆ ಜಮೀನು ರಿಲೀಜ್ ಮಾಡಿದ್ದೇವೆ. ಈ ಜಮೀನು ರಿಲೀಸ್ ಆದ ತಕ್ಷಣ ಮಾನ್ಯ ಸದಸ್ಯರೂ ಮತ್ತು ಇವರ ಸಂಬಂಧಿಗಳೂ, ಅವರಿಗೆ ಬೇಕಾದವರನ್ನು ಸೇರಿಸಿಕೊಂಡು

ಕುಂಬಾರರ ಗುಡಿಸಲುಗಳನ್ನು ಕಿತ್ತುಹಾಕಿ ಓಡಿಸಿದ್ದಾರೆ, ಇದರಿಂದ ಬಹಳ ತೊಂದರೆಯಾಗುತ್ತಿದೆ ರಕ್ಷಣೆ ಕೊಡಬೇಕು ಎಂದು ಆ ಅರ್ಜಿಯಲ್ಲಿ ತಿಳಿಸಿದ್ದಾರೆ.

ಶ್ರೀ ಬಿ. ರಾಚಯ್ಯ.—ವಿಚಾರಣೆಯಾಗಲಿ.

ಶ್ರೀ ಎಚ್. ರಾಚಯ್ಯ.—ಸರ್ಕಾರಕ್ಕೆ ಬಂದಿರುವುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಈ ವಾತಾವರಣವಿರಬಾರದು. ಒಬ್ಬರು ಮತ್ತೊಬ್ಬರಮೇಲೆ allegations ಮಾಡುತ್ತಹೋದರೆ ಅದಕ್ಕೆ ಅಂತ್ಯವಿರುವುದಿಲ್ಲ. ವಾತಾವರಣ ಅಲ್ಲಿಯವರೆಗೆ ಹೋಗಬಾರದು.

ಶ್ರೀ ಎಚ್. ರಾಚಯ್ಯ.—ನಾನು ಪಾರ್ಲಿಮೆಂಟಿನಲ್ಲಿದ್ದವನು. ನಾನು ತಮ್ಮಲ್ಲಿ ಮನವಿಮಾಡಿಕೊಳ್ಳುವುದೇನೆಂದರೆ, ಸದಸ್ಯನಾಗಿ ಮಾತನಾಡಲು ಹಕ್ಕಿದೆ; ಮಂತ್ರಿಯಾಗಿ ಇನ್ನೂ ಹಕ್ಕಿದೆ.

ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದ್ದೀರೋ ಇಲ್ಲವೋ, ಅವರಲ್ಲಿ ಎಷ್ಟು ಪ್ರಾಮುಖ್ಯವಾಗಿ ಈ ಸಭೆಯಲ್ಲಿ ನಡೆದ ವಿಷಯ ಬಂದಿದೆ. ವಿಧಾನ ಪರಿಷತ್ತಿನಲ್ಲಿ ಶ್ರೀಮಾನ್ ಚನ್ನಬಸಪ್ಪನವರಿಗೂ ಮತ್ತು ಶ್ರೀಮಾನ್ ಈಶ್ವರಪ್ಪನವರಿಗೂ ಗದಾಯುದ್ಧ, ಅದಹಾಗೆ ವಾಗ್ವಾದ ನಡೆಯಿತು. ಆರೀತಿಯಾಗಿ ಇಲ್ಲಿ ಆಗಿಲ್ಲ. ನಾನು challenge ಮಾಡುತ್ತೇನೆ ಎಂದು ಹೇಳಿದ್ದು ಬಹಳ ಪ್ರಮಾದವಾಯಿತು. ನನಗೂ ಮುಂದೆ career ಇದೆ. ನಾನು ಜವಾಬ್ದಾರಿ ಸ್ಥಾನದಲ್ಲಿದ್ದೇನೆ. ನನ್ನಮೇಲೆ ಅನಾವಶ್ಯಕವಾದ ಆರೋಪಣೆಗಳನ್ನು ಮಾಡಿ, ಸವರ್ಣೀಯರಿಗೂ ನನಗೂ ಜಗಳ ತಂದೊಡ್ಡಲು ಪ್ರಯತ್ನಿಸಿದ್ದಾರೆ. ಇವೊತ್ತಿನ ದಿವಸ ನಮ್ಮ ಕಣ್ಣುಬಿಟ್ಟಿದ್ದೇವೆ. ಇವೊತ್ತಿನ ದಿವಸ ಗಾಂಧೀಜಿ ಸರ್ಕಾರವಿರುವ ಅವಧಿಯಲ್ಲಿ ಹರಿಜನರಲ್ಲಿ ಯಾವ ವಿಧವಾದ ಭೇದಭಾವವೂ ಇಲ್ಲದಂತೆ ಮಾಡಬೇಕಾಗಿರುವ ಕಾಲದಲ್ಲಿ, ದೇಶಕ್ಕೆ ಅನ್ಯಾಯವಾಗುವ ರೀತಿಯಲ್ಲಿ ನನ್ನಮೇಲೆ ಆರೋಪಣೆ ಮಾಡಿದ್ದಾರೆ. ನಾನು ನಿರ್ದಿಷ್ಟವಾಗಿ defend ಮಾಡಿಕೊಳ್ಳಬೇಕಾಗಿದೆ. ಅವರು ಮಾತನಾಡುವಾಗ ನಾನು ಹೇಗೆ ಮರ್ಯಾದೆಯಿಂದ ಕುಳಿತುಕೊಂಡಿದ್ದೆನೋ ಘನತೆ ಮತ್ತು ಸಹನೆಯಿಂದ ಇದ್ದೆನೋ ಅದೇರೀತಿ ನಾನು ಉತ್ತರ ಕೊಡುವಾಗ ಮಾನ್ಯ ಸದಸ್ಯರೂ ಇರಬೇಕು. ನಾನು ಉತ್ತರ ಕೊಡುವಾಗ ಇನ್ನೂ ಏನೇನು ಹೇಳುತ್ತೇನೋ ಎಂದು ಈರೀತಿಯಾಗಿ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಬೇಜವಾಬ್ದಾರಿಯುತವಾದ, ಅಸಭ್ಯವಾದ, ಸತ್ಯರಹಿತವಾದ, ಸಹನೆ ರಹಿತವಾದ ಜಾತಿಭಾವನೆಯುಂಟಾಗುವ ರೀತಿಯಲ್ಲಿ ಈ ಸಭೆಯ ಘನತೆಗೆ, ಇಡಿಯ ಹರಿಜನ ಜನಾಂಗಕ್ಕೆ, ದೇಶದ ಗೌರವಕ್ಕೆ, ನಾವು ಇರುವ ಪಕ್ಷಕ್ಕೆ ಧಕ್ಕೆ ತರತಕ್ಕ, ಅದರ ಘನತೆ ಗೌರವಗಳನ್ನು ಕೆಡಿಸತಕ್ಕ ರೀತಿಯಲ್ಲಿ ಮಾತನಾಡಿದ್ದಾರೆ. ಆರೀತಿಯಾಗಿ ಮಾಡಬಾರದಾಗಿತ್ತೆಂದು ವಿನಯದಿಂದ ಕೇಳಿಕೊಂಡು, ಇವೊತ್ತಿನಿಂದ ನಾವಿಬ್ಬರೂ ಸ್ನೇಹಿತರಾಗಿರೋಣವೆಂದು ಹೇಳುತ್ತೇನೆ. ಇಲ್ಲ ಎಂದು ಅವರು ಒಂದು ನಾಟಕ ಷುರುಮಾಡಿದರೆ ನಾನು ಆರು ನಾಟಕ ಷುರು ಮಾಡುತ್ತೇನೆ. ಇಷ್ಟು ಮಾತ್ರ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ನಾಗೂರ್.—ಇದನ್ನು ಮೊದಲೇ ಹೇಳಬಾರದಾಗಿತ್ತೇ, ಸ್ವಾಮಿ!

Sri M. MALLIKARJUNASWAMY.—There is an old adage. Mr. Speaker, Sir, only fools speak of rules; not an intelligent man like me. (*Laughter*).

Mr. SPEAKER.—The House will now rise and meet to morrow at 1 P.M.

The House adjourned at Twenty Minutes past Six of the Clock to meet again at One of the Clock on Thursday, the 24th March 1960.